ಸಾಹಿತ್ಯ ದಾಸೋಹ – ೨೦೨



೨೦೨ನೇ ಸಾಹಿತ್ಯ ದಾಸೋಹದಲ್ಲಿ
ಪ್ರಸ್ತುತಪಡಿಸಿದ ಕತೆ, ಕವನ, ಲೇಖನಗಳ
ಸಂಕಲನ

ಸಮನ್ವಯ ಸಮಿತಿ * ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಪ್ರಿಯರೆ,

ಇದೋ ನಿಮ್ಮ ಮಡಿಲಿಗೆ ೨೦೨ನೆಯ ನೋಡಿಯೋ ಸಾಹಿತ್ಯ ದಾಸೋಹದ ಪ್ರತಿಭೆಯ ಪುಷ್ಪಗಳು.

ಎಂದಿನಂತೆ ಈ ಬಾರಿಯೂ ವೈವಿಧ್ಯಮಯ ಲೇಖನಗಳು ಇಲ್ಲಿವೆ. ಕವನ, ಸಣ್ಣ ಕತೆ, ಪ್ರಬಂಧ, ವಿಚಾರ ಮಂಥನ, ಅನುಭವ ಕಥನ ಇಂಥ ಹಲವಾರು ಬರಹಗಳು. ಇವುಗಳನ್ನೆಲ್ಲ ಆಸ್ವಾದಿಸಿ ನಿಮ್ಮ ಅಮೂಲ್ಯ ಅಭಿಪ್ರಾಯಗಳನ್ನು ತಿಳಿಸಿ. ಸಲಹೆಗಳಿಗೂ ಸ್ವಾಗತವಿದೆ.

ದಾಸೋಹದ ಅಧ್ಯಕ್ಷತೆವಹಿಸಿ ಪ್ರಸ್ತುತಿಗಳ ಬಗ್ಗೆ ತಮ್ಮ ಮಾರ್ಗ ದರ್ಶಕವಾದ ಮಾತುಗಳನ್ನು ದಾಖಲಿಸಿದ ಶ್ರೀಮತಿ ಸರಸ್ವತಿ ನಟರಾಜ್ ಅವರಿಗೆ ಧನ್ಯವಾದಗಳು. ಹಾಗೆಯೇ ಲೇಖನಗಳನ್ನು ಪ್ರಸ್ತುತಪಡಿಸಿದ ದಾಸೋಹಿಗಳಿಗೆ ಕೃತಜ್ಞತೆಗಳು. ನೋಡುಗರಾಗಿ ದಾಸೋಹವನ್ನು ಯಶಸ್ವಿಗೊಳಿಸಿದ ಸದಸ್ಯರೂ ನಮ್ಮ ಅಭಿಯಾನದ ಅಮೂಲ್ಯ ಭಾಗವೇ ಆಗಿದ್ದಾರೆ.

ಮುಂದಿನ ದಾಸೋಹಗಳಲ್ಲಿ ಸದಸ್ಯರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲೆಂಬುದು ನಮ್ಮ ಅಭಿಲಾಷೆ.

ಸಂಚಿಕೆಯನ್ನು ಇಷ್ಟು ಸುಂದರವಾಗಿ ವಿನ್ಯಾಸಗೊಳಿಸಿದ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರ ಸಹಕಾರ ನಿತ್ಯ ಸ್ಮರಣೀಯ. ಶ್ರೀ ಗುರುರಾಜ ಶಾಸ್ತ್ರಿಯವರು ತಮ್ಮ ಪಕ್ಷಿಸಂಕುಲದ ಸುಂದರ ಚಿತ್ರಗಳನ್ನು ಮುಖಪುಟ ಮತ್ತು ಒಳಪುಟಗಳಿಗೆ ಒದಗಿಸಿದ್ದಾರೆ. ಅವರಿಗೂ ಕೃತಜ್ಞತೆಗಳು.

ಶುಭಾಶಯಗಳೊಂದಿಗೆ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ....

ಮುಖಪುಟದ ಚಿತ್ರ : ಕೃಪೆ – ಶ್ರೀ ಹೆಚ್.ಆರ್.ಗುರುರಾಜ ಶಾಸ್ತ್ರಿ

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೦೨

ಕಾರ್ಯಕ್ರಮ ವರದಿ : ಹು.ವಾ.ಶ್ರೀಪ್ರಕಾಶ್

ದಿನಾಂಕ ೧೧.೦೬.೨೦೨೨ರಂದು ಮಧ್ಯಾಹ್ನ ೩.೩೦ಕ್ಕೆ ಶ್ರೀಮತಿ ಸರಸ್ವತಿ ನಟರಾಜ್‌ರವರ ಅಧ್ಯಕ್ಷತೆಯಲ್ಲಿ "ಸಾಹಿತ್ಯ ದಾಸೋಹ ೨೦೨" ಅಂತರಜಾಲದ ಮುಖೇನ ಯಶಸ್ವಿಯಾಗಿ ನಡೆಯಿತು.

ಆರಂಭದಲ್ಲಿ ಶ್ರೀಮತಿ ಶೀಲಾ ಅರಕಲಗೂಡುರವರು ಎಲ್ಲರನ್ನು ಸ್ವಾಗತಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಸರಸ್ವತಿ ನಟರಾಜ್ ರವರನ್ನು ಪರಿಚಯಿಸಿದರು.



ಶ್ರೀಮತಿ ಸರಸ್ವತಿ ನಟರಾಜರವರು ಹುಟ್ಟಿದ್ದು ಸಕಲೇಶಪುರದಲ್ಲಿ. ಕಳೆದ ೨೦ ವರ್ಷಗಳಿಂದ ಬರವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ. ಇದುವರೆಗೆ ಆರು ಪುಸ್ತಕಗಳನ್ನು ರಚಿಸಿದ್ದು ಅದರಲ್ಲಿ ಮೂರು ಕಾದಂಬರಿಗಳು- ಮನೆ, ಜ್ಯೋತಿ ಮತ್ತು ಸಿಕ್ಕು. ಜ್ಯೋತಿ ಮತ್ತು ಸಿಕ್ಕು ಕಾದಂಬರಿಗಳು 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿವೆ. ಮನೆ ಕಾದಂಬರಿಗೆ ೨೦೧೦ರ ಮಾಸ್ತಿ ಕಾದಂಬರಿ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಬಂದಿದೆ. ಇವರ ಜ್ಯೋತಿ ಕಾದಂಬರಿಯು ಜೀವನದಿ ಎಂಬ ಹೆಸರಿನಲ್ಲಿ ಎರಡು ವರ್ಷಗಳ ಕಾಲ ಧಾರಾವಾಹಿಯಾಗಿ ಉದಯ ಟಿವಿಯಲ್ಲಿ ಮೂಡಿಬಂದಿದೆ. ಈ ಕಥೆಗೆ ೨೦೧೭-೧೮ರ ಕನ್ನಡ ಟೆಲಿಅವಾರ್ಡ್ ಬಂದಿದೆ. ನಾರ್ವೆ ಪ್ರವಾಸ ಕಥನ, 'ಮಾದಕ ವ್ಯಸನ' ಎಂಬ ಲೇಖನ ಮುಖಪುಟ ಚಿತ್ರದೊಂದಿಗೆ 'ಸುಧಾ'ದಲ್ಲಿ ಪ್ರಕಟವಾಗಿದೆ.

ಶ್ರೀಮತಿ ಸರಸ್ವತಿ ನಟರಾಜ್ ಅವರು ಹಲವಾರು ಕವನಗಳನ್ನೂ ರಚಿಸಿದ್ದಾರೆ. ಆಕಾಶವಾಣಿ ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ತಮ್ಮ ಮೌಲಿಕ ಬರಹಗಳ ಪ್ರಸ್ತುತಿಯಿಂದ ವೇದಿಕೆಯಲ್ಲಿ ಸುಪರಿಚಿತರಾಗಿದ್ದಾರೆ ಎಂದು ಹೇಳಿ ಸ್ವಾಗತಿಸಿದರು.

ನಂತರ ದಾಸೋಹದಲ್ಲಿ ಭಾಗವಹಿಸಿದ ೨೦ ಸದಸ್ಯರು ತಮ್ಮ ವಿವಿಧ ಪ್ರಸ್ತುತಿಗಳನ್ನು ಮಂಡಿಸಿದರು. ಶ್ರೀ ಶೃಂಗೇಶ್ವರ ಶರ್ಮ ಅವರು 'ಸಾಹಿತ್ಯ ದಾಸೋಹ ೨೦೧'ರಲ್ಲಿ ವಿವಿಧ ದಾಸೋಹಿಗಳು ಮಂಡಿಸಿದ ಬರಹಗಳ ಸಂಕಲನದ ಪಿಡಿಎಫ್ ಪ್ರತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಸರಸ್ವತಿ ನಟರಾಜ್ ಅವರು ಮಾತನಾಡಿ, ಸಮನ್ವಯ ಸಮಿತಿ ಕನ್ನಡವೇ ಸತ್ಯ–ಇದು ಯಾವುದೇ ಗುಂಪುಗಾರಿಕೆ ಇಲ್ಲದ ವೇದಿಕೆಯಾಗಿದ್ದು, ಹೊಸತಾಗಿ ಬರೆಯುವವರನ್ನು ಬೆನ್ನುತಟ್ಟಿ ಸ್ವಾಗತಿಸುವ ಶಿಸ್ತುಬದ್ಧ ಸಂಘಟನೆಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಪ್ರತಿ ದಾಸೋಹದಿಂದ ದಾಸೋಹಕ್ಕೆ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಲೇ ಬರುತ್ತಿದೆ. ಎಲ್ಲೆಡೆಯಿಂದ ಬಂದ ಚಿಕ್ಕ ದೊಡ್ಡ ತೊರೆಗಳಿಂದ ತುಂಬಿ ಸಾಹಿತ್ಯ ಸರೋವರ ಸಮೃದ್ಧವಾಗಲಿ ಎಂದು ಹಾರೈಸಿದರು.

ಆನಂತರ ಅವರು ದಾಸೋಹದಲ್ಲಿ ಮಂಡಿಸಲಾದ ಎಲ್ಲ ೨೦ ಬರಹಗಾರರ ಪ್ರಸ್ತುತಿಗಳನ್ನು ವಿಶ್ಲೇಷಿಸಿ ತಮ್ಮ ಅಭಿಪ್ರಾಯ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕೊನೆಯಲ್ಲಿ ಕಾರ್ಯಕ್ರಮ ನಿರ್ವಹಣೆ ಮಾಡಿದ ಸಾಹಿತ್ಯ ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್. ಮಹಾಬಲರವರಿಂದ ಕಾರ್ಯಕ್ರಮದ ಆಧ್ಯಕ್ಷರು, ವೀಕ್ಷಕರು ಮತ್ತಿತರ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸಾಹಿತ್ಯ ದಾಸೋಹ–೨೦೨ರ ಇಡೀ ಕಾರ್ಯಕ್ರಮವನ್ನು ಯೂಟ್ಯೂಬ್‌ನಲ್ಲಿಯೂ ನೋಡಬಹುದು.

***

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪಕ್ಷಿ ಹಾಗೂ ಪಕ್ಷಿ ವೀಕ್ಷಣೆ

ಪ್ರಾತ್ಯಕ್ಷಿಕೆ : ಶ್ರೀ ಎಚ್.ಆರ್.ಗುರುರಾಜ ಶಾಸ್ತ್ರಿ

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ತಾ ೧೯.೦೬.೨೦೨೨ರಂದು ಸಂಜೆ ಐದು ಗಂಟೆಗೆ ಶ್ರೀಮತಿ ಮಾಲತಿ ಶ್ರೀನಿವಾಸನ್‌ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯ್ತು.



ಶ್ರೀಮತಿ ಶುಭಾ ವಾಸುಕಿಯವರು ಎಲ್ಲರನ್ನೂ ಸ್ವಾಗತಿಸಿದರು. ವಿಶೇಷವಾಗಿ ಕನ್ನಡಾಂಬೆಯ ಸೇವಾ ಕಾರ್ಯಗಳಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ವೇದಿಕೆಯ ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ. ರವೀಂದ್ರ, ಕಾರ್ಯಕ್ರಮದ ಉಪನ್ಯಾಸಕ ಶ್ರೀ ಗುರುರಾಜ ಶಾಸ್ತ್ರಿ, ಸಹಸಂಚಾಲಕರು ಮತ್ತು ವೀಕ್ಷಕ ರೆಲ್ಲರಿಗೂ ಸ್ವಾಗತಕೋರಿದರು.

೧೯೭೪ರಲ್ಲಿ ಬೆಂಗಳೂರಿನ ಬಸವನಗುಡಿಯಲ್ಲಿ ಜನಿಸಿದ ಶ್ರೀ ಗುರುರಾಜ ಶಾಸ್ತ್ರಿಯವರು ೧೯೯೫ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ವೃತ್ತಿ ಜೀವನ ಆರಂಭಿಸಿ ೨೦೦೪ರಲ್ಲಿ ಅಧಿಕಾರಿಯಾದರು. ಕೋರ್ ಬ್ಯಾಂಕಿಂಗ್ ಜಾರಿಗೊಳಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿದ ಹಿರಿಮೆ ಇವರದು. ಇವರ ಲೇಖನ, ನಾಟಕ, ಕಥೆ ಮುಂತಾದವು ವಾಟ್ಸಾಪ್ ವೇದಿಕೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗಿವೆ. ಇವರ ನಾಟಕಗಳು ಯಶಸ್ವಿ ಪ್ರದರ್ಶನ ಕಂಡಿವೆ. ನಾಟಕ ನಿರ್ದೇಶನವನ್ನೂ ಮಾಡಿದ್ದಾರೆ. ೨೨ ವರ್ಷಗಳ ಸೇವೆಯ ನಂತರ ಬ್ಯಾಂಕಿನಿಂದ ಸ್ವಯಂ ನಿವೃತ್ತಿ ಪಡೆದು ತಮ್ಮ ಹವ್ಯಾಸ ಮತ್ತು ಸೇವಾ ಕೈಂಕರ್ಯಗಳಲ್ಲಿ ತೊಡಗಿಕೊಂಡಿದ್ದಾರೆ. ಚಾರಣ, ಯೋಗ, ಸೈಕ್ಲಿಂಗ್, ವೇದಾಧ್ಯಯನ, ಪಕ್ಷಿ ವೀಕ್ಷಣೆ, ಸಮಾಜ ಸೇವೆಗಳಲ್ಲಿ ಆಸಕ್ತಿ ಹೊಂದಿದ್ದಾರೆ ಎಂದು ಪರಿಚಯಿಸಿ ಸ್ವಾಗತಿಸಿದರು.

ಪ್ರಧಾನ ಸಂಚಾಲಕರಾದ ಶ್ರೀ ಬೆಂ. ಶ್ರೀ ರವೀಂದ್ರ ಅವರು ಮಾತನಾಡಿ ವೇದಿಕೆಯ ಮುಖ್ಯ ಆಶಯ ಸೃಜನಶೀಲತೆ. ನಮ್ಮ ಸದಸ್ಯರ ಪ್ರತಿಭೆ ಇಲ್ಲಿ ವ್ಯಕ್ತವಾಗಬೇಕು. ಈ ಆಶಯಕ್ಕೆ ಪೂರಕವಾಗಿ ಇಂದಿನ ಕಾರ್ಯಕ್ರಮ ನಡೆಯುತ್ತಿದೆ ಎಂದರು. ವೇದಿಕೆಯ ಸದಸ್ಯರಾದ ಶ್ರೀ ಗಣಪತಿ ಹೆಗಡೆಯವರು 'ಅಪರಿಚಿತ ಪೌರಾಣಿಕ ಪಾತ್ರಗಳು' ಕೃತಿಯನ್ನು ಹೊರತಂದಿರುವುದನ್ನು ಪ್ರಶಂಸಿಸಿ ಅಭಿನಂದಿಸಿದರು.



ಖೋ ಕಾದಂಬರಿ ಅಂತಿಮ ಹಂತ ತಲುಪಿದ್ದು ಮುದ್ರಣಕ್ಕೆ ಹೋಗಲು ಸಿದ್ಧವಾಗಿದೆ ಎಂದರು. ವೇದಿಕೆಯ ಮಹತ್ತರ ಕೃತಿ ಶ್ರೀ ಪ್ರಧಾನ ಗುರುದತ್ತರು ಬರೆಯುತ್ತಿರುವ ಪ್ರಾಚಾರ್ಯರ ಬದುಕು–ಬರಹ ಅಂತಿಮ ಹಂತದಲ್ಲಿದ್ದು, ಪ್ರಕಟಿಸಲು ಸಪ್ನ ಬುಕ್ ಹೌಸ್‌ನವರು ಒಪ್ಪಿಕೊಂಡಿದ್ದಾರೆ. ಅಕ್ಟೋಬರ್‌ನಲ್ಲಿ ಕೃತಿ ಬಿಡುಗಡೆಯಾಗಲಿದೆ. ಈ ಸಂಧರ್ಭ ಪ್ರಧಾನ ಗುರುದತ್ತರವರಿಗೆ ಗೌರವ ಸಮರ್ಪಣೆಯನ್ನು ಅಪಾರ ಜನಸ್ತೋಮದ ನಡುವೆ ಮಾಡುವ ಯೋಚನೆ ಇದ್ದು, ಈ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರ ಅಗತ್ಯ ಎಂದರು. ಅಲ್ಲದೆ, ಕಾದಂಬರಿ ಅಭಿಯಾನದಲ್ಲಿ ವೇದಿಕೆಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಬರುವ ಡಿಸೆಂಬರ್ ಹೊತ್ತಿಗೆ ಕಾದಂಬರಿಗಳನ್ನು ರಚಿಸಬೇಕೆಂದೂ ಕೋರಿದರು.

ಕಾರ್ಯಕ್ರಮದ ಮುಖ್ಯ ಭಾಗವಾದ "ಪಕ್ಷಿ ಹಾಗೂ ಪಕ್ಷಿ ವೀಕ್ಷಣೆ" ಯನ್ನು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿ ಉಪನ್ಯಾಸ ನೀಡಿದ ಶ್ರೀ ಗುರುರಾಜ ಶಾಸ್ತ್ರಿಯವರು, ಪಕ್ಷಿಗಳ ಸಂಸಾರ ಮತ್ತು ಜೀವನದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ, ವೈವಿಧ್ಯಮಯ ಪಕ್ಷಿಗಳು ಹಾರುವ ರೀತಿ, ಪಕ್ಷಿಗಳು ಕೂಗುವುದಕ್ಕೆ ಕಾರಣ, ಪಕ್ಷಿಗಳ ಹೆಸರಿನ ಮೂಲ, ಹೆಸರಿಡುವ ರೀತಿ, ಪಕ್ಷಿಗಳು ವಲಸೆ ಹೋಗಲು ಕಾರಣ, ಪಕ್ಷಿಗಳು ತಿನ್ನುವ ಆಹಾರ ಮುಂತಾದ ಬಗೆಗೆ ಸಚಿತ್ರ ವಿವರಣೆ ನೀಡಿದರು.

ಸಾವಿರಾರು ಮೈಲಿಗಳು ಪ್ರತೀ ವರುಷ ಒಂದೇ ಮಾರ್ಗದಲ್ಲಿ ಹಾರುವ ಪಕ್ಷಿಗಳಿಗೆ ಮಾರ್ಗ ಹೇಗೆ ತಿಳಿದಿರುತ್ತದೆ ಎಂಬುದು ನಮ್ಮ ಬುದ್ದಿಗೆ ನಿಲುಕದ ವಿಷಯ ಎಂದ ಅವರು, ಧ್ವನಿ ಅನುಕರಣೆ ಮಾಡುವ ಪಕ್ಷಿಗಳು ನಾಗಾಲ್ಯಾಂಡ್‌ನಿಂದ ಸೋಮಾಲಿಯದವರೆಗೆ ಐದು ದಿನ ಹತ್ತು ಗಂಟೆಯಲ್ಲಿ ಸತತವಾಗಿ ೫೫೦೦ ಕಿ.ಮೀ. ಹಾರುವುದು, ತಲೆ ಕೆಳಗಾಗಿ ಮರ ಇಳಿಯುವ ಪಕ್ಷಿ, ಅತಿ ದೊಡ್ಡ ಕಣ್ಣಿನ ಪಕ್ಷಿ, ಹೀಗೆ ಪಕ್ಷಿಗಳ ಕೆಲವು ವಿಸ್ಮಯಗಳನ್ನು ಪರಿಚಯಿಸಿದರು.

ಪಕ್ಷಿ ವೀಕ್ಷಕರು ಬಳಸುವ ಕೆಲವು ವಿಶೇಷ ಶಬ್ದಗಳನ್ನು ಪರಿಚಯಿಸಿದರು. ಉದಾಹರಣೆಗೆ ಪರ್ಚ್ ಎಂದರೆ ಸೂಕ್ತವಾದ ಸ್ಥಳ. ಕ್ಯಾಚ್ ಎಂದರೆ ತಿನ್ನಬೇಕಾದ ಆಹಾರದ ಜೊತೆ ಇರುವ ಪಕ್ಷಿ, ಜುವನೈಲ್ ಅಂದರೆ ಮರಿಯೂ ಅಲ್ಲ, ವಯಸ್ಸಾಗಿದ್ದೂ ಅಲ್ಲದ್ದು, ಮೈಗ್ರೆಟರಿ ಅಂದರೆ ಬೇರೆ ಊರಿಂದ ಬಂದದ್ದು, ಹಾವರ್ ಎಂದರೆ ರೆಕ್ಕೆ ಬಡಿಯುತ್ತಾ ಎಲಿಕಾಪ್ಟರ್‌ನಂತೆ ನಿಂತಿರುವುದು, ಲೈಫರ್ ಎಂದರೆ ಮೊದಲ ಸಲ ನೋಡಿದ ಯಾವುದೇ ಒಂದು ಜಾತಿಯ ಪಕ್ಷಿ, ಪ್ರೆಡೇಟರ್ ಎಂದರೆ ಪಕ್ಷಿಯನ್ನು ತಿನ್ನಲು ಬರುವ ದೊಡ್ಡ ಪಕ್ಷಿ, ಇತ್ಯಾದಿ.

ತಾವು ನೋಡಿದ ಪಕ್ಷಿಯನ್ನು 'ಈಬರ್ಡ್' ತಂತ್ರಾಂಶದಲ್ಲಿ ದಾಖಲಿಸುವುದಾಗಿ ಹೇಳಿದ ಶ್ರೀ ಗುರುರಾಜ ಶಾಸ್ತ್ರಿಯವರು, ತಾವು ಇದುವರೆಗೂ ೪೩೯ ಪಕ್ಷಿಗಳನ್ನು ನೋಡಿದ್ದು, ಅದರ ಎಲ್ಲ ಮಾಹಿತಿ, ಸ್ಥಳ, ಹೆಸರು, ಚಿತ್ರಗಳು, ಇತ್ಯಾದಿ ವಿವರಗಳನ್ನು ಅಲ್ಲಿ ದಾಖಲಿಸಬಹುದು. ಪ್ರಪಂಚದಾದ್ಯಂತ ಬಹುತೇಕ ಪಕ್ಷಿ ವೀಕ್ಷಕರು ಇವನ್ನು ದಾಖಲಿಸುತ್ತಾರೆ ಎಂದು ಹೇಳಿದರು.

ಪಕ್ಷಿಗಳ ಬಗ್ಗೆ ಹೇಳುವಾಗ ನೆನೆಯಲೇಬೇಕಾದ ಮೂವರು ಗಣ್ಯರಾದ ಎ.ಒ.ಹ್ಯೂಮ್, ಡಾ. ಸಲೀಂ ಅಲಿ, ಜೋಬೆ ಸ್ನೈಪ್ ಸಿಂಗರ್‌ರವರ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ ಅವರ ಬದುಕಿನ ಕುತೂಹಲ ಮಾಹಿತಿಯನ್ನು ತೆರೆದಿಟ್ಟರು.

ತಮ್ಮ ಅನುಭವಗಳ ಬಗ್ಗೆ ಹೇಳುತ್ತಾ, ಬೆಂಗಳೂರಿನ ಹೆಸರಘಟ್ಟ ಕೆರೆಯಲ್ಲಿ ತಾವು ಪಕ್ಷಿವೀಕ್ಷಣೆ ಆರಂಭಿಸಿದ್ದು, ಗುಳಕಮಲೆ, ನಂದಿಬೆಟ್ಟ, ತುರೋಹಳ್ಳಿ ಕಾಡು, ವ್ಯಾಲಿ ಸ್ಕೂಲು, ಆಗುಂಬೆ, ಬಂಡೀಪುರ, ಕಬಿನಿ, ಭೀಮೇಶ್ವರಿ, ಭದ್ರಾ ಅಭಯಾರಣ್ಯ, ಮಡಿಕೇರಿ, ಗಣೇಶಗುಡಿ, ದಾಂಡೇಲಿ, ಕಬಿನಿ, ಮಂಗಳೂರು, ಅರುಣಾಚಲ ಪ್ರದೇಶ, ಚಂದ್ರಖಾನಿ, ಗೋವಾ, ತುಂಗನಾಥ್ ಛೋಪ್ತಾ, ಸಾತ್ ತಾಲ್, ಗೋಪಿನಾಥಂ, ಮುಂತಾದ ಹಲವು ಸ್ಥಳಗಳಿಗೆ ಪಕ್ಷಿವೀಕ್ಷಣೆಗಾಗಿ ಹೋಗಿರುವುದಾಗಿ ಹೇಳಿದರಲ್ಲದೆ, ಇನ್ನೂ ಹೋಗಬೇಕಾದ ಸ್ಥಳಗಳು ಬಹಳ ಇವೆ ಎಂದರು.

ಹಸಿರು ಬಟ್ಟೆ ಕಟ್ಟಿ ಅಡಗಿ ಕುಳಿತು ಪಕ್ಷಿಗಳ ಚಿತ್ರ ತೆಗೆವ ಪರಿಯ ಬಗ್ಗೆ ವಿವರಿಸಿ ಅಂತಹ ಚಿತ್ರಗಳನ್ನು ಪ್ರದರ್ಶಿಸಿ, ಪಕ್ಷಿವೀಕ್ಷಣೆಗೆ ಅಗತ್ಯವಿರುವ ವಸ್ತುಗಳಾದ ಬೈನಾಕುಲರ್, ಉತ್ತಮ ಲೆನ್ಸ್ ಇರುವ ಕ್ಯಾಮರಾ, ರೈನ್ ಕೋಟ್, ಫುಲ್ ಶರ್ಟ್, ಜೀನ್ ಪ್ಯಾಂಟ್, ಶೂ, ನೀರಿನ ಬಾಟಲ್, ಚಾಕಲೇಟ್ ಇತ್ಯಾದಿ ಅವಶ್ಯ ಎಂದರಲ್ಲದೆ, ಪಕ್ಷಿವೀಕ್ಷಣೆಯಲ್ಲಿ ಸ್ಥಳೀಯ ಗೈಡ್‌ಗಳ ಸಹಕಾರ ಪಡೆಯುವುದು ಉತ್ತಮ ಎಂಬ ಸಲಹೆ ನೀಡಿದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಶ್ರೀ ಗುರುರಾಜ ಶಾಸ್ತ್ರಿಯವರು ಸಮರ್ಪಕವಾಗಿ ಉತ್ತರಿಸಿದರು.



ಕೊನೆಯಲ್ಲಿ ಶ್ರೀ ಪೋಲೇನಹಳ್ಳಿ ರಮೇಶ್ (ಪೋರ) ರವರು, ಅತ್ಯಂತ ಕುತೂಹಲಕಾರಿಯಾಗಿ ಪ್ರಾತ್ಯಕ್ಷಿಕೆಗಳ ಮೂಲಕ ಉಪನ್ಯಾಸ ನೀಡಿ, ಜಾಲತಾಣದ ಮೂಲಕ ವೀಕ್ಷಕರನ್ನು ಪಕ್ಷಿಲೋಕದ ವಿಸ್ಮಯಗಳಿಗೆ ಕೊಂಡೊಯ್ದ ಶ್ರೀ ಗುರುರಾಜ ಶಾಸ್ತ್ರಿಯವರನ್ನು ಅಭಿನಂದಿಸಿ, ಅವರಿಗೆ ಮತ್ತು ಭಾಗವಹಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

(ಶ್ರೀ ಗುರುರಾಜ ಶಾಸ್ತ್ರಿಯವರ 'ಪಕ್ಷಿ ಹಾಗೂ ಪಕ್ಷಿ ವೀಕ್ಷಣೆ – ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಯೂಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು. ಶ್ರೀ ಶಾಸ್ತ್ರಿಯವರ ಸಂಗ್ರಹದಿಂದ ಆಯ್ದ ಕೆಲವು ಪಕ್ಷಿಗಳ ಚಿತ್ರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ)

*****

ವಿಶ್ವ ಅಪ್ಪಂದಿರ ದಿನ- ಮನೋಲಹರಿ

ಅಪ್ಪ ಮತ್ತು ಹುಲಿ

– ಎಸ್. ವಿ. ರಘುರಾಂ

ಅಂಕ– 01:

ಮಲೆನಾಡಿನ ತೀರ್ಥಹಳ್ಳಿಯಿಂದ ಶಿವಮೊಗ್ಗ ರಸ್ತೆಯಲ್ಲಿ ಒಂದು ಹತ್ತು ಮೈಲಿ ಹೋದರೆ ಕುಡುಮಲ್ಲಿಗೆ ಎಂಬ ಊರು ಆ ಭಾಗದಲ್ಲಿ ಓಡಾಡುವ ಎಲ್ಲರಿಗೂ ಗೊತ್ತು. ಅಲ್ಲಿ ಇಳಿದು ಕಾಡಿನ ಒಳಗಡೆ ಎರಡು ಮೈಲಿ ಒಳಗಡೆ ನಡೆದುಕೊಂಡು ಹೋದರೆ ಸಿಗುವುದೇ ನೆಲ್ಲಿಸರ ಎಂಬ ಸಣ್ಣ ಹಳ್ಳಿ. ನನ್ನ ಅಪ್ಪ, ಅಮ್ಮ ಇದ್ದಿದ್ದು ಈ ನೆಲ್ಲಿಸರ ಎಂಬ ಸಣ್ಣ ಹಳ್ಳಿಯಲ್ಲಿ. ಅಪ್ಪ ಅಲ್ಲಿ ಶ್ಯಾನುಭೋಗರಾಗಿದ್ದರಂತೆ. ಅದೊಂದು ಮಲೆನಾಡಿನ ಗ್ರಾಮ. ಬಹಳಷ್ಟು ವರ್ಷಗಳ ಹಿಂದೆ ಅವರು ನೆಲ್ಲಿಸರಕ್ಕೆ ಎಂದಿನಂತೆ ನಡೆದುಕೊಂಡು ಹೋಗುವಾಗ ಎರಡನೇಯ ಉಬ್ಬಿನ ಬಳಿ ಒಮ್ಮೆ ಹುಲಿಯೊಂದು ಅಡ್ಡ ಬಂದಿತ್ತು, ಆಮೇಲೆ ಆ ಹುಲಿ ಹಾಗೆ ಸುಮ್ಮನೆ ಹೊರಟು ಹೋಯಿತು ಎಂದು ಹೇಳುತ್ತಿದ್ದುದನ್ನು ಕೇಳಿದ್ದೆ. ಆ ಕಾಲದಲ್ಲಿ ಅದೆಲ್ಲಾ ಆ ಪ್ರಾಂತ್ಯದಲ್ಲಿ ಸಾಮಾನ್ಯವಾಗಿ ಘಟಿಸುವ ಘಟನೆ. ಈ ತರಹದ ಕಥೆಗಳನ್ನು ನೀವೆಲ್ಲಾ ಕೇಳೇ ಇರುತ್ತೀರಿ.

ಅಂಕ–02:

ನಾವೆಲ್ಲ ಹುಟ್ಟುವ ಹೊತ್ತಿಗೆ ಅಪ್ಪ, ಅಮ್ಮ ನೆಲ್ಲಿಸರ ಬಿಟ್ಟು ತೀರ್ಥಹಳ್ಳಿಗೆ ಬಂದು ಮನೆ ಮಾಡಿದ್ದರು. ನಾನು ಸಣ್ಣವನಿರುವಾಗ ಬಹಳಷ್ಟು ಜನ ನೆಂಟರು, ಹಳ್ಳಿಯ ಸಾಮಾನ್ಯ ಜನರು, ಊರಿನ ದೊಡ್ಡ ಮನುಷ್ಯರು ಆಗಾಗ ಮನೆಗೆ ಬಂದು ಅಪ್ಪನ ಸಲಹೆ ತೆಗೆದುಕೊಂಡು ಹೋಗುತ್ತಿದ್ದರು. ನಾನು ಅಪ್ಪನ ಜೊತೆ ಮಾತನಾಡಿರುವುದು ಬಹುಶಃ ಇಲ್ಲ ಎಂದೇ ಹೇಳಬಹುದು. ಸಣ್ಣವನಿದ್ದಾಗ ನನ್ನ ಗಲಾಟೆ ತಡೆಯಲಾಗದೆ, ಅಮ್ಮ ಕೊನೆಯ ಅಸ್ತ್ರವಾಗಿ, "ಅಪ್ಪನನ್ನು ಕರಿತೇನೆ" ಎಂದು ಹೆದರಿಸಿದ್ದು ಉಂಟು. ಅಪ್ಪ ಬಂದು ದೊಡ್ಡದಾಗಿ ಕಣ್ಣು ಬಿಡುತ್ತಿದ್ದರು. ಆಗ ಹೆದರಿಕೊಂಡು ಸುಮ್ಮನಾಗಿರುವುದು ಉಂಟು.

ಅಂಕ– 03

ಒಳ್ಳೆಯವರು ಜಾಸ್ತಿ ದಿನ ಇರಲ್ಲ ಬಿಡಿ. ನಾನು ಹದಿನೈದು ವರ್ಷ ತಲುಪುವುದರೊಳಗೆ ಅಪ್ಪ ನಮ್ಮನ್ನು ಬಿಟ್ಟು ಹೊರಟರು. ಆದಿನ ನನಗೆ ಚೆನ್ನಾಗಿ ನೆನಪಿದೆ. ನೆಂಟರೂ ಊರಿನವರೆಲ್ಲರೂ ಬಂದು ಅವರನ್ನು ಬೀಳ್ಕೊಟ್ಟರು. ಒಬ್ಬೊಬ್ಬರು ಒಂದೊಂದು ರೀತಿ ಗುಣಗಾನ ಮಾಡಿದರೂ ನನ್ನ ಗಮನ ಸೆಳೆದಿದ್ದು ನಮ್ಮ ಪ್ರೀತಿಯ ಮತ್ತಾವರದ ಅಜ್ಜಿ ಹೇಳಿದ ಮಾತು. ಮತ್ತಾವರದ ಅಜ್ಜಿ ನಮ್ಮ ಅಮ್ಮನ ಅಮ್ಮ. ಅವರು ಹೇಳಿದ ಒಂದೇ ಮಾತು "ಅಪ್ಪ ಹುಲಿ ತರಹ ಇದ್ದರು". ಹೀಗೆ ಹೇಳಿ ದುಃಖಪಟ್ಟಿದ್ದನ್ನು ನೋಡಿದ್ದೆ. ಬಹಳಷ್ಟು ದಿನಗಳು ನಂತರ ಇವರೇಕೆ ಅಪ್ಪನನ್ನು 'ಹುಲಿ'ತರಹ ಎಂದರು? 'ಸಿಂಹ'ದ ತರಹ ಎಂದು ಹೇಳಬಹುದಿತ್ತಲ್ಲ. ಸಿಂಹ ತಾನೆ ಕಾಡಿನ ರಾಜ? ನಮ್ಮ ಅಪ್ಪನನ್ನು "ರಾಜ"ನ ತರಹ ಬಾಳಿದರು ಎಂದು ಹೇಳದೆ 'ಹುಲಿ' ಎಂದು ಏಕೆ ಹೇಳಿದರು ಎಂದು ಅರ್ಥ ಆಗಲಿಲ್ಲ. ಅದನ್ನು ಅಲ್ಲಿಗೇ ಬಿಟ್ಟೆ. ದಿನ ಕಳೆದಂತೆ ಅದನ್ನು ಮರೆತುಬಿಟ್ಟೆ ಕೂಡ!

ಅಂಕ– 04:

ಪುಣ್ಯಕೋಟಿ ಹಾಡು ಕೇಳದವರು ಇಲ್ಲ ಬಿಡಿ. ಕೊಟ್ಟ ಮಾತನ್ನು ಉಳಿಸಿಕೊಂಡ ಗೋವು ಎಲ್ಲರಿಗೂ ಆದರ್ಶ ಪ್ರಾಯವಾಗಿದೆ. ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ ಎಂದು ಕೇಳಿಕೊಳ್ಳುವ ಗೋವು, ಸತ್ಯದ ಪರವಾಗಿ ನಿಲ್ಲುತ್ತದೆ. ಆ ಹಾಡು ಬಹುಶಃ ಜಾನಪದ ಹಾಡೆಂದು ಬಹಳ ದಿನಗಳಿಂದ ತಿಳಿದಿದ್ದೆ. ನಂತರ ಅದು ಶ್ರೀನಿವಾಸರಾವ್ ಎಂಬುವವರು ಬರೆದಿದ್ದು ಎಂದು ಅಂತರ್ಜಾಲದಿಂದ ತಿಳಿಯಿತು. ಬಹಳ ಹಿಂದಿನ ಕಾಲದಿಂದಲೂ ಒಳ್ಳೆಯ ಜನರನ್ನು "ಅವರು ಬಿಡಪ್ಪ ಪುಣ್ಯಕೋಟಿ ವಂಶದವರು" ಎಂದು ಹೇಳುವುದೂ ಉಂಟು.

ಪುಣ್ಯಕೋಟಿ ಗೋವು ಕೊಟ್ಟ ಮಾತನ್ನು ಉಳಿಸಿಕೊಂಡು ತನ್ನ ವಂಶದವರೆಲ್ಲರಿಗೂ ಎಲ್ಲಾ ಕಾಲಕ್ಕೂ ಸಲ್ಲುವಂತ ಕೀರ್ತಿ ತಂದುಕೊಟ್ಟಿದೆ. ಈಗ ಹಾಡನ್ನು ಇನ್ನೊಂದು ಸಾರಿ ನೆನಪಿಸಿಕೊಳ್ಳಿ. ಆ ಹಾಡಿನ ಕೊನೆಯ ಸಾಲಿನಲ್ಲಿ ಹುಲಿ ಹಿಂತಿರುಗಿ ಬಂದ ಗೋವನ್ನು ತಿನ್ನದೆ, ತಾನೇ ಗುಡ್ಡದಿಂದ ಹಾರಿ ಕೆಳಗೆ ಬಿದ್ದು ಪ್ರಾಣಬಿಡುತ್ತದೆ.

ಕೊಟ್ಟ ಮಾತು ಉಳಿಸಿಕೊಂಡ ಗೋವಿಗೆ ಕೀರ್ತಿ ಸಲ್ಲುವುದು ಸರಿಯಾಗಿದೆ. ಆದರೆ ಹಸಿದ ಹುಲಿ, ತನ್ನ ಸಹಜ ಅಹಾರವಾದ ಗೋವು ಸಿಕ್ಕಿದಾಗ ಗೋವಿನ ಮಾತು ಆಲಿಸಿ, ಅದರ ಮೇಲೆ ನಂಬಿಕೆ ಇಟ್ಟು ಅದನ್ನು ಕರುವಿನ ಬಳಿಗೆ ಕಳುಹಿಸುತ್ತದೆ. ನಂತರ ಹಿಂತಿರುಗಿ ಬಂದ ಗೋವನ್ನು ತಿನ್ನದೆ, ತಾನೇ ಗುಡ್ಡದಿಂದ ಹಾರಿ ಪ್ರಾಣ ಬಿಡುತ್ತದೆ.

ಶ್ರೀ ರವಿಂದ್ರರವರು ತಮ್ಮ 'ಆದಿಯೂ... ನೆಟ್‌ನ ಪಾಠವೂ' ಕವನ ಸಂಕಲನದ 'ಅರ್ಬುತನ ಗೀತೆ'ಯಲ್ಲಿ ಪುಣ್ಯಕೋಟಿ ಗೋವನ್ನು ಬದುಕಿಸಿ ತಾನು ಪ್ರಾಣಬಿಟ್ಟ ಹುಲಿಯ ಕಂದನು ತನಗೆ ಬೇಟೆಯಾಟವ ಕಲಿಸುವವರು ಯಾರು? ಎಂದು ಕಟ್ಟಿರುವ ದೃಶ್ಯ ಮನ ಕರಗುತ್ತದೆ. ಈ ಕವನ ಸ್ವಲ್ಪವಾದರೂ ಆ ಹುಲಿಯ ವಂಶದ ಬಗ್ಗೆ ಮರುಕ ಹುಟ್ಟಿಸುತ್ತದೆ.

ಆ ಗೋವಿನ ಪ್ರಾಣ ಉಳಿಸಿದ ಹುಲಿಯು ಆ ಗೋವಿನಷ್ಟೇ ಒಳ್ಳೆಯ ಪ್ರಾಣಿ ಎಂದು ಯಾಕೆ ಯಾರಿಗೂ ಅನಿಸಲಿಲ್ಲ. ಇದು ಒಳ್ಳೆಯತನಕ್ಕೆ ಮಾಡಿದ ಒಂದು ರೀತಿಯ ಅಪಚಾರ ಅಲ್ಲವೇ? ಎಂದು ಯೋಚಿಸಿ. ಹೌದಲ್ಲವೇ ಎಂದು ಅನಿಸಿದ್ದರೆ ಈಗ ಮುಂದೆ ಓದಿ.

ಅಂಕ– 05:

ಶ್ರೀ ಎ.ಎನ್.ಮೂರ್ತಿರಾವ್ ಕನ್ನಡದ ಹೆಸರಾಂತ ಸಾಹಿತಿಗಳು. ಇವರು 'ವ್ಯಾಘ್ರ ಗೀತೆ' ಎಂಬ ಲಲಿತ ಪ್ರಬಂಧ ಬರೆದಿದ್ದಾರೆ. ಅದರಲ್ಲಿ ಇರುವ ಕಥೆಯ ಸಂಕ್ಷಿಪ್ತ ರೂಪ ಹೀಗಿದೆ:

ಹಳ್ಳಿಯಲ್ಲಿ ವಾಸವಿದ್ದ ಶ್ಯಾನುಭೋಗರೊಬ್ಬರು ತಮ್ಮ ಲೆಕ್ಕದ ಪುಸ್ತಕ (ಖಿರ್ದಿ ಪುಸ್ತಕ) ತೆಗೆದುಕೊಂಡು ತಾಲ್ಲೂಕಿನ ತಹಶೀಲ್ದಾರ್ ಕಛೇರಿಯಲ್ಲಿ ತೋರಿಸಿಕೊಂಡು ನಡೆದುಕೊಂಡು ಹಳ್ಳಿಗೆ ಹೋಗುವಾಗ ಸಂಜೆ ಆಗುತ್ತದೆ. ಹಳ್ಳಿ ದಾರಿಯಲ್ಲಿ ಇವರೊಬ್ಬರೇ ನಡೆದು ಹೋಗುತ್ತಿರುವಾಗ ಹಿಂದುಗಡೆ ಹುಲಿಯೊಂದು ಬರುತ್ತಿರುವ ಅನಿಸಿಕೆ ಅವರಿಗೆ ಬರುತ್ತದೆ. ಹಸಿದ ಹುಲಿಯೊಂದು ಅವರನ್ನು ಹಿಂಬಾಲಿಸಿ ಬರುತ್ತಿರುತ್ತದೆ. ಈಗ ಶ್ಯಾನುಭೋಗರು ಯೋಚನೆಮಾಡಿ ಹುಲಿ ಹಿಂದಿನಿಂದ ಹಾರಿ ಯಾರನ್ನೂ ಹಿಡಿಯುವುದಿಲ್ಲ ಎಂದು ಮುಂದೆ ಮುಂದೆ ಹೋಗುತ್ತಾರೆ. ಹುಲಿ ಅವರ ಮುಂದೆ ಜಿಂಗನೆ ಹಾರಿಬಂದಾಗ, ಅವರು ತಕ್ಷಣ ಹಿಂತಿರುಗಿ ನಡೆಯುತ್ತಾರೆ. ಹುಲಿ ಮತ್ತೆ ಹಾರಿ ಅವರ ಮುಂದೆ ಬರುತ್ತದೆ. ಇವರು ಮತ್ತೆ ಹಿಂತಿರುಗಿ ನಡೆಯುತ್ತಾರೆ. ಹೀಗೆ ಬಹಳಷ್ಟು ಸಾರಿ ಆದಮೇಲೆ ಅವರು ನಿಂತಲ್ಲೇ ಸುತ್ತಲು ಪ್ರಾರಂಭ ಮಾಡುತ್ತಾರೆ. ಹುಲಿಗೆ ತಮ್ಮ ಕೈಯಲಿದ್ದ ಖಿರ್ದಿ ಪುಸ್ತಕದಿಂದ ಹೊಡೆದು, ಆ ಹುಲಿ ಒಂದು ಕ್ಷಣ ಗಲಿಬಿಲಿ ಗೊಂಡಾಗ, ಇವರು ಓಡಲು ಪ್ರಾರಂಭ ಮಾಡಿ, ಎಡವಿ ಅಲ್ಲಿಯೇ ಬಿದ್ದು ಮೂರ್ಛೆ ಹೋಗುತ್ತಾರೆ. ಎಚ್ಚರವಾದಾಗ ಅವರ ಮನೆಯಲ್ಲಿ ಇರುತ್ತಾರೆ. ಆ ದಾರಿಯಲ್ಲಿ ಎತ್ತಿನ ಗಾಡಿಯಲ್ಲಿ ಬರುತ್ತಿದ್ದ ಹಳ್ಳಿಯ ಕೆಲವರು ದಾರಿಯಲ್ಲಿ ಬಿದ್ದಿದ್ದ ಶ್ಯಾನುಭೋಗರನ್ನು ಮನೆಗೆ ಕರೆದುಕೊಂಡು ಬಂದಿರುತ್ತಾರೆ. 'ತಾನು ಯಾವ ರೀತಿ ನೆಲದ ಮೇಲೆ ಬಿದ್ದಿದ್ದೆ' ಎಂದು ಶ್ಯಾನುಭೋಗರು ಕೇಳಿದಾಗ, 'ಮುಖ ಕೆಳಗೆ ಇತ್ತು, ಬೆನ್ನು ಮೇಲೆ ಇತ್ತು, ಯಾರೆಂದು ತಿರುಗಿಸಿ ನೋಡಿದಾಗ ತಾವೆಂದು ಗೊತ್ತಾಯಿತು' ಎಂದು ಹಳ್ಳಿಗರು ಹೇಳುತ್ತಾರೆ. ಈಗ ಶ್ಯಾನುಭೋಗರಿಗೆ ತಾವು ಹೇಗೆ ಬದುಕಿ ಉಳಿದೆ ಎಂದು ಅರ್ಥ ಆಗುತ್ತದೆ! ಹುಲಿ ತನ್ನ ಧರ್ಮ ಬಿಡದೆ, ಶ್ಯಾನುಭೋಗರನ್ನು ಹಿಂದಿನಿಂದ ಹಿಡಿದು ತಿಂದಿರುವುದಿಲ್ಲ. ಕೆಳಗೆ ಬೀಳುವಾಗಲೂ ಅವರ ಬೆನ್ನು ಮೇಲೆ ಇರುತ್ತದೆ. ಅದೇ ಸಮಯದಲ್ಲಿ ಹುಲಿಗೆ ಎತ್ತಿನ ಗಾಡಿಯ ಗಂಟೆಯ ಸದ್ದು ಕೇಳಿ ಇನ್ನು ಅಲ್ಲಿ ಬಹಳಷ್ಟು ಜನ ಬರುತ್ತಾರೆ. ಆಗ ತನಗೆ ಅಪಾಯ ಎಂದು ತಿಳಿದು, ಶ್ಯಾನುಭೋಗರನ್ನು ಹಾಗೆಯೇ ಬಿಟ್ಟು ಹೊರಡುತ್ತದೆ. ಈಗ ನೋಡಿ ಈ ಹುಲಿಯೂ ಕೂಡ ಶ್ಯಾನುಭೋಗರನ್ನು ಹಿಂದಿನಿಂದ ಹಾರಿ ಹಿಡಿಯಬಹುದಾಗಿದ್ದರೂ, ತನ್ನ ವಂಶ ಪುಣ್ಯಕೋಟಿ ಹಸುವನ್ನು ಉಳಿಸಿದ ಹುಲಿಯ ವಂಶ ಎಂದು ನೆನಪಿಸಿಕೊಂಡು, ಅಧರ್ಮದ ಕೆಲಸ ಮಾಡದೇ ಹಾಗೆಯೇ ಹಿಂತಿರುಗಿ ಹೋಗುತ್ತದೆ. ಈಗ ಹೇಳಿ, ಅಧರ್ಮ ಮಾಡದ ಜನರನ್ನು "ಈ ಹುಲಿಯ ವಂಶ" ಎಂದು ಏಕೆ ಕರೆಯಬಾರದು?

ಅಂಕ– 06:

ಈಗ ಮತ್ತೊಮ್ಮೆ ಹಿಂತಿರುಗಿ ನೋಡಿದಾಗ ಮತ್ತಾವರದ ಅಜ್ಜಿ ಅಪ್ಪನನ್ನು 'ಹುಲಿ ತರಹ' ಎಂದು ಏಕೆ ಅಂದರು ತಿಳಿಯಿತು. ಸಿಂಹ ರಾಜನೇ ಇರಬಹುದು. ರಾಜನ ಸಹಜ ಗುಣ ತನ್ನ ರಾಜ್ಯವನ್ನು ವಿಸ್ತಾರಗೊಳಿಸಿಕೊಳ್ಳುವುದು. ಅಪ್ಪ ಆ ಕಾಲದಲ್ಲಿ ಶ್ಯಾನುಭೋಗರಾಗಿದ್ದಾಗ ಬಹಳಷ್ಟು ಆಸ್ತಿ ಮಾಡುವ ಅವಕಾಶ ಇದ್ದರೂ ಅಧರ್ಮದ ಮಾರ್ಗ ಹಿಡಿಯಲಿಲ್ಲ. ಅವರು ರಾಜ್ಯವನ್ನು ವಿಸ್ತರಿಸುವ ರಾಜನ ದಾರಿ ಹಿಡಿಯದೆ ಧರ್ಮವನ್ನು ಪಾಲಿಸುವ ಹುಲಿಯ ಮಾರ್ಗ ಹಿಡಿದ್ದರು! ನಮ್ಮ ಮತ್ತಾವರದ ಅಜ್ಜಿ ಸ್ಕೂಲಿಗೆ ಹೋಗಿಲ್ಲ. ಆದರೂ ಒಂದೇ ಒಂದು ಮಾತಿನಲ್ಲಿ ಅಪ್ಪನ ವ್ಯಕ್ತಿತ್ವ ಹಿಡಿದಿಟ್ಟಿದ್ದರು! ಆ ನನ್ನ ಅಪ್ಪ ನನಗೆ ಆದರ್ಶ.

***

ಇದು ಕರ್ಮಫಲವೇ?

– ಕೆ.ಆರ್. ವೆಂಕಟೇಶ್ (ಮನೋಹಂಸ)

ಈ ಲೇಖನದ ಶೀರ್ಷಿಕೆಯನ್ನು ಮೊದಲು ನಾನು "ಕರ್ಮಫಲ" ಎಂದು ಕೊಡಬೇಕೆಂದುಕೊಂಡಿದ್ದೆ. ಆದರೆ ಇವನ್ಯಾರಪ್ಪ ದ್ವಾಪರಯುಗದ ಶ್ರೀಕೃಷ್ಣನು ಕರ್ಮಫಲದ ಬಗ್ಗೆ ಮಾತನಾಡಿದ ಹಾಗೆ ಅಥವಾ ಇಂದಿನ ಯಾವುದಾದರೂ ಸ್ವಾಮೀಜಿಯ ಹಾಗೆ ಪ್ರವಚನ ನೀಡುತ್ತಿದ್ದಾನೆ ಎಂಬ ಭಾವನೆ ಬರಬಾರದಲ್ಲವೇ..? ಆದಾಗ್ಯೂ ಇಲ್ಲಿ ನಾನೇ ನನಗೆ ಪ್ರಶ್ನೆ ಹಾಕಿಕೊಳ್ಳುತ್ತಿದ್ದೇನೆಯೋ ಹೊರತು, ದೃಢವಾಗಿ ಅದೇ ಎಂದು ಘೋಷಣೆ ಮಾಡುತ್ತಿಲ್ಲ. ಈ ಘಟನೆಯನ್ನು ನಮ್ಮ ತಂದೆಯವರು ಚಾಚೂತಪ್ಪದೆ ನನಗೆ ಹೇಳಿದ ರೀತಿ ಈ ಲೇಖನ ಬರೆಯುವಂತೆ ಮಾಡಿದೆ.

ಇರಲಿ, ಈಗ ವಿಷಯಕ್ಕೆ ಬರೋಣ. ಈ ಲೇಖನದ ಶೀರ್ಷಿಕೆಗೆ (ಪ್ರಶ್ನೆಗೆ) ಕಾರಣ ನಮ್ಮ ಮನೆಯಲ್ಲಿ 26 ವರ್ಷಗಳ ಹಿಂದೆ ನಡೆದ ಘಟನೆ. ಅದು 1996. ಆಗ ನಾನು ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಗೋವಾದ ಸ್ಟೀಲ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದೆ. ಅಪ್ಪ ನಿವೃತ್ತಿಯಾಗಿ ಹತ್ತು ವರ್ಷಗಳಾಗಿತ್ತು. ಅಕ್ಕಂದಿರಿಬ್ಬರಿಗೂ ಮದುವೆಯಾಗಿತ್ತು. ನಾನು ಬೇರೆ ಊರಿನಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಅಪ್ಪ ಅಮ್ಮ ಮನೆಯಲ್ಲಿ ಇಬ್ಬರೇ ಇದ್ದರು.

ಇದೇ ವರ್ಷದಲ್ಲಿ ಮೈಸೂರಿನಲ್ಲಿ ಇಂಜಿನಿಯರಿಂಗ್ ಮುಗಿಸಿದ ನಮ್ಮ ಸೋದರಮಾವನ ಮಗ ಮುಕುಂದನಿಗೆ ಬೆಂಗಳೂರಿನಲ್ಲಿ ಕೆಲಸ ಸಿಕ್ಕಿತ್ತು. ಮಾವ ಮೈಸೂರಿನಲ್ಲಿ ನೆಲೆಸಿದ್ದರಿಂದ ತಮ್ಮ ಮಗ ಬೆಂಗಳೂರಿನಲ್ಲಿ ಒಬ್ಬನೇ ಇರಬೇಕಲ್ಲಾ ಎಂಬ ಯೋಚನೆ. ಬೆಂಗಳೂರಿನಲ್ಲಿ ರೂಂ ಅಥವಾ ಪುಟ್ಟ ಮನೆಯೂ ದುಬಾರಿ. ಅಲ್ಲದೇ ದಿನಾ ಹೋಟೆಲ್ ಊಟ ಸರಿಹೋಗುವುದಿಲ್ಲ. ಏನು ಮಾಡುವುದು ಎಂಬ ಯೋಚನೆಯಲ್ಲಿದ್ದರು. ಆಗ ನಾನು ಬೇರೆ ಊರಿನಲ್ಲಿದ್ದುದರಿಂದ ನಮ್ಮ ಮಾವ ತನ್ನ ಅಕ್ಕ ಭಾವ ಇಬ್ಬರೇ ದೊಡ್ಡ ಮನೆಯಲ್ಲಿರುವುದರಿಂದ ಒಂದೆರಡು ವರ್ಷ ತಮ್ಮ ಮಗನನ್ನು ನಮ್ಮನೆಯಲ್ಲಿ ಇರಿಸಲು ಸ್ವಲ್ಪ ಸಂಕೋಚದಿಂದಲೇ ಕೇಳಿಕೊಂಡರು.

ಹೇಗಿದ್ದರೂ ಅಪ್ಪ ಅಮ್ಮ ಇಬ್ಬರಿಗೂ ಅರವತ್ತು ದಾಟಿತ್ತು. ಅವರಿಗೂ ಆಧಾರವಾಗುತ್ತದೆ ಎಂದು ಇಬ್ಬರೂ ಒಪ್ಪಿಕೊಂಡರು.

ಮಾವನ ಮಗ ಮುಕುಂದ ಬೆಂಗಳೂರಿಗೆ ಬಂದು ನಮ್ಮ ಮನೆ ಸೇರಿದ. ನನ್ನ ಕೋಣೆಯನ್ನು ಅವನಿಗೆ ನೀಡಲಾಗಿತ್ತು. ಕೆಲಸಕ್ಕೆ ಬೆಳಿಗ್ಗೆ 8.30ಕ್ಕೆ ಬಿಟ್ಟರೆ ಸಂಜೆ 6.30ಕ್ಕೆ ಮನೆ. ವಾರಕ್ಕೆ ಆರು ದಿನ ಕೆಲಸ. ಭಾನುವಾರ ಮನೆ. ಇಲ್ಲಾ ಬೆಂಗಳೂರಿನ ಸ್ನೇಹಿತರು ಒಂದೆಡೆ ಸೇರಿ ಒಂದಷ್ಟು ಕಾಲ ಕಳೆಯುವುದು. ಹೀಗಿತ್ತು ಅವನ ದಿನಚರಿ.

ಒಮ್ಮೆ ಅವನು ಮೂರು ದಿವಸ ಒಟ್ಟಿಗೇ ರಜವಿದ್ದುದರಿಂದ ತನ್ನ ಮನೆ ಅಂದರೆ ಮೈಸೂರಿಗೆ ಹೋಗಿದ್ದನು. ಅಲ್ಲಿಂದ ವಾಪಸ್ ಬರಬೇಕಾದರೆ ಅಮೇರಿಕಾದಲ್ಲಿರುವ ಅವನ ಹತ್ತಿರದ ಸ್ನೇಹಿತನ ತಾಯಿ ಇವನು ಮೈಸೂರಿಗೆ ಬಂದಿರುವುದು ತಿಳಿದು, "ನನ್ನ ಮಗ ಒಂದು ಚಿನ್ನದ ಸರ ಇಲ್ಲೇ (ಮೈಸೂರಿನಲ್ಲಿ) ಬಿಟ್ಟು ಹೋಗಿದ್ದಾನೆ. ಅದನ್ನು ಅಮೇರಿಕಾದಲ್ಲಿರುವ ನನ್ನ ಮಗಳಿಗೆ ತಲುಪಿಸಬೇಕು.. ಅವನ ಇನ್ನೊಬ್ಬ ಸ್ನೇಹಿತ ಬೆಂಗಳೂರಿನಿಂದ ಅಮೇರಿಕಾಗೆ ಇನ್ನು ಮೂರ್ನಾಲ್ಕು ದಿನದಲ್ಲಿ ಹೊರಡುತ್ತಿದ್ದಾನೆ. ಅವನಿಗೆ ತಲುಪಿಸಿಬಿಡು" ಎಂದು ಅವನ ಮನೆ ದೂರವಾಣಿ ನಂಬರ್ ಕೊಟ್ಟು ಚಿನ್ನದ ಸರವನ್ನು ಒಂದು ಪೊಟ್ಟಣದಲ್ಲಿ ಮುಕುಂದನ ಕೈಗೆ ಕೊಟ್ಟರು.

ಮುಕುಂದ ಆ ಚಿನ್ನದ ಸರದೊಂದಿಗೆ ಬೆಂಗಳೂರಿಗೆ ವಾಪಸಾದ. ಅದನ್ನು ಅವನಿರುವ ಅಂದ್ರೆ ನನ್ನ ಕೋಣೆಯಲ್ಲಿರುವ ಮೇಜಿನ ಡ್ರಾಯರ್ ಒಳಗೆ ಇಟ್ಟನು. ಹೇಗಿದ್ದರೂ ಇನ್ನು ಮೂರು ದಿವಸಕ್ಕೆ ತನ್ನ ಸ್ನೇಹಿತನ ಸ್ನೇಹಿತನಿಗೆ ತಲುಪಿಸಬೇಕು ಎಂದು ಆ ಪೊಟ್ಟಣವನ್ನು ಡ್ರಾಯರ್‌ನಲ್ಲಿ ಮೂಲೆಯಲ್ಲಿಟ್ಟನು.

ಮಾರನೆಯ ದಿನ ನಮ್ಮನೆ ಕೆಲಸದಾಕೆ ಕೆಲಸಕ್ಕೆ ಬಂದಳು. ಹದಿನೈದು ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದವ್ಳು, ನಂಬಿಕಸ್ಥೆ. ಯಾವತ್ತೂ ಏನೂ ಅವಳ ಉಪಸ್ಥಿತಿಯಲ್ಲಿ ಕಳುವಾಗಿಲ್ಲ. ಅವಳೇ ಮುಕ್ಕಾಲುಪಾಲು ಕೆಲಸಕ್ಕೆ ಬರುತ್ತಿದ್ದಳು. ಏನಾದರೂ ತನಗೆ ತೊಂದರೆ ಇದ್ದಲ್ಲಿ ಮಗಳನ್ನು ಕಳುಹಿಸುತ್ತಿದ್ದಳು. ಮಗಳೂ ಬಹಳ ಒಳ್ಳೆಯವಳು. ಆದರಂದು ಅಪರೂಪವಾಗಿ ಹೊಸಕೋಟೆಯಿಂದ ಬಂದಿದ್ದ ತನ್ನ ತಂಗಿಯ ಮಗಳು ಮಂಜುಳಾ ಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದಳು. ಒಬ್ಬಳೇ ಸುಮ್ಮನೆ ಕುಳಿತಿರಲು ಬೇಸರವಾಗುವುದೆಂದು ಮಂಜುಳಾಗೆ ಗುಡಿಸಲು ಹೇಳಿದಳು. ನಂತರ ಎಲ್ಲಾ ಕೆಲಸ ಮುಗಿಸಿ ಹೋದಳು.

ಮಾರನೆಯ ದಿವಸ ಸಾಯಂಕಾಲ ಆಫೀಸ್ ಕೆಲಸ ಮುಗಿಸಿ ಬಂದ ಮುಕುಂದ ಕಾಫಿ ಕುಡಿದು ಟಿವಿ ನೋಡುತ್ತಾ ನಂತರ ರಾತ್ರಿ ತನ್ನ ರೂಮಿಗೆ ಬಂದು ಏನೋ ತೆಗೆದುಕೊಳ್ಳಲು ಡ್ರಾಯರ್ ತೆಗೆದಿದ್ದಾನೆ. ವಸ್ತುಗಳು ಕೊಂಚ ಚೆಲ್ಲಾಪಿಲ್ಲಿಯಾಗಿವೆ. ಆತಂಕ ಪಡುವ ವಿಷಯವೇನೆಂದರೆ ಅಲ್ಲಿದ್ದ ಚಿನ್ನದ ಸರದ ಪೊಟ್ಟಣ ಇಲ್ಲ. ಎದೆ ಧಗ್ ಎಂದಿತಂತೆ. ಮೊನ್ನೆತಾನೇ ಇಲ್ಲಿ ಇಟ್ಟಿರುವ ಸರ ಹೇಗೆ ಮಾಯವಾಗಲು ಸಾಧ್ಯ.

ಅಲ್ಲೇ ಎಷ್ಟೇ ಹುಡುಕಿದರೂ ಸಿಗದೆ ಕಡೆಗೆ ವಿಧಿಯಿಲ್ಲದೆ ನನ್ನ ಅಪ್ಪ ಅಮ್ಮನಿಗೆ ಹೇಳಿದನು. ಅವರೂ ದಿಗ್ಭ್ರಾಂತರಾದರು. ನಮಗೆ ಕೊಟ್ಟಿದ್ದರೆ ಬೀರುವಿನ ಒಳಗೆ ಇಡುತ್ತಿದ್ದೆವು. ಹೀಗ್ಯಾಕೆ ಮಾಡಿದೆ. ಡ್ರಾಯರ್‌ಗೆ ಲಾಕ್ ಇಲ್ಲವೇ ಎಂದು ಕೇಳಿದರು. ಮುಕುಂದ ಯಾರಾದರೂ ಮನೆಗೆ ಬಂದಿದ್ದರಾ ಎಂದು ಕೇಳಿದಾಗ ಯಾರೂ ಇಲ್ಲ ಎಂದು ತಿಳಿಯಿತು. ಹೇಳಿಕೇಳಿ ಚಿನ್ನದ ಸರ ಅದೂ ಸ್ನೇಹಿತನದು. ಇನ್ನೆರಡು ದಿವಸದಲ್ಲಿ ಅವನ ಸ್ನೇಹಿತನಿಗೆ ತಲುಪಿಸಬೇಕು. ಎರಡು ಸಾವಿರ ಬೆಲೆಬಾಳುವ ಸರ. ದಿಕ್ಕೇ ತೋಚದೇ ನಮ್ಮ ಮನೆ ಕೆಲಸದವಳಾಕೆ ಹೇಗೆ ಎಂದು ವಿಚಾರಿಸಿದ. ಅಪ್ಪ ಅಮ್ಮ ಅವಳು ಬಹಳ ನಂಬಿಕಸ್ಥೆ. 15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾಳೆ. ಏನೂ ಕಳುವಾಗಿಲ್ಲ ಎಂದು ಸಮರ್ಥಿಸಿಕೊಂಡರು. ಆದರೆ ನಿನ್ನೆ ಅವಳ ಜೊತೆ ತಂಗಿಯ ಮಗಳನ್ನು ಕರೆದುಕೊಂಡು ಬಂದಿದ್ದಳು ಆ ಹುಡುಗಿಯೇ ಮನೆ ಗುಡಿಸಿದಳು ಎಂದಾಗ ಮುಕುಂದನಿಗೆ ಅನುಮಾನ ಹೆಚ್ಚಾಯಿತು. ಒಂದು

ರೀತಿಯಲ್ಲಿ ಕಳ್ಳ(ಳ್ಳಿ) ಸಿಕ್ಕಿಬಿದ್ದಾಯಿತು. ಮುಕುಂದ ಕೆಲಸದಾಕೆ ಮನೆ ಗೊತ್ತಾ ಈಗಲೇ ಹೋಗೋಣ ಎಂದಾಗ ಅಮ್ಮ ಅಪ್ಪ ಗೊತ್ತಿಲ್ಲವೆಂದರು. ಮಾರನೆಯ ದಿನ ಬೆಳಿಗ್ಗೆ ಅವಳು ಕೆಲಸಕ್ಕೆ ಬಂದೊಡನೆಯೇ ಕೇಳಬೇಕು ಎಂದುಕೊಂಡರು. ಅಂದು ನಿದ್ದೆಯಿಲ್ಲದ ರಾತ್ರಿಯಾಯಿತು ಮುಕುಂದನಿಗೆ.

ಬೆಳಿಗ್ಗೆ ಕೆಲಸದಾಕೆ ಬಂದೊಡನೆಯೇ ಅವಳನ್ನು ಸ್ವಲ್ಪ ಮುಜುಗರದಿಂದಲೇ ಅಮ್ಮ ವಿಚಾರಿಸಲು ಅವಳು ಅಮಾಯಕತೆ ವ್ಯಕ್ತಪಡಿಸಿದಳು. ನಿನ್ನ ತಂಗಿಯ ಮಗಳು ಏನಾದರೂ? ಎಂದು ಅನುಮಾನ ವ್ಯಕ್ತಪಡಿಸಿದಾಗ ಅವಳು ಪ್ರಾಮಾಣಿಕವಾಗಿ, 'ನನಗೆ ಗೊತ್ತೇ ಇಲ್ಲ, ಇದ್ದರೂ ಇರಬಹುದು, ಕೇಳಬೇಕು, ನನ್ನ ತಂಗಿ ಹಾಗೂ ಅವಳ ಮಗಳು ಹೊಸಕೋಟೆಗೆ ಮೊನ್ನೆ ಮಧ್ಯಾಹ್ನ ಹೊರಟರು" ಎಂದಳು. ನನ್ನದೇ ತಪ್ಪು. ಅವಳನ್ನು ಮನೆ ಗುಡಿಸಲು ಬಿಟ್ಟಿದ್ದು ಎಂದು ಕೆಲಸದಾಕೆ ಅಪರಾಧಿ ಮನೋಭಾವದಿಂದ ಹಲುಬಿದಳು.

ಮುಕುಂದನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಆದರೆ ಅದನ್ನು ಅಲ್ಲಿಗೇ ಬಿಡುವಂತ ಸ್ಥಿತಿಯಲ್ಲಿರಲಿಲ್ಲ. ಆಫೀಸಿಗೆ ಫೋನ್ ಮಾಡಿ ಹುಷಾರಿಲ್ಲ ಎಂದು ಹೇಳಿ ರಜೆ ಹಾಕಿ ನಮ್ಮ ಅಮ್ಮ ಹಾಗೂ ಕೆಲಸದಾಕೆಯನ್ನು ಕರೆದುಕೊಂಡು ಬಸ್‌ನಲ್ಲಿ ಹೊಸಕೋಟೆಗೆ ಹೋಗಿ, ಅಲ್ಲಿಂದ ಇವರ ತಂಗಿಯ ಮನೆ ಒಳಗೆ 2 ಕಿಲೋಮೀಟರ್ ಆಟೋದಲ್ಲಿ ಹೋಗಿ ಸೇರಿದರು. ಇವರನ್ನು ನೋಡಿದೊಡನೆಯೇ ಕೆಲಸದಾಕೆಯ ತಂಗಿಗೆ ಆಶ್ಚರ್ಯವಾಯಿತು.

ನಡೆದದ್ದೆಲ್ಲಾ ತಿಳಿಸಿದಾಗ "ಮಗಳನ್ನು ಅಂಗಡಿಗೆ ಕಳಿಸಿದ್ದೀನಿ, ಬರಲಿ ಒದ್ದು ವಿಚಾರಿಸ್ತೀನಿ" ಎಂದಳು. ಮಗಳು ಮಂಜುಳಾ ಬಂದು ಇವರನ್ನು ನೋಡಿದೊಡನೆಯೇ ಅವಳಿಗೆ ಬೆವರಿಳಿಯಲು ಶುರುವಾಯಿತು. ಚಿನ್ನದ ಸರದ ಬಗ್ಗೆ ವಿಚಾರಿಸಲು. "ನಾನು ತೆಗೆದುಕೊಂಡಿಲ್ಲ, ನಾನು ನೋಡೇ ಇಲ್ಲ" ಎಂದು ಹೇಳುತ್ತಲೇ ಇದ್ದಳು. ನಂತರ ಪೋಲೀಸರಿಗೆ ಹಿಡಿದುಕೊಡ್ತೀನಿ ಎಂದು ಗದರಿಸಿದಾಗ ಅದನ್ನು ನಿನ್ನೆ ಪೇಟೆಯಲ್ಲಿ ಸೇಟು ಅಂಗಡಿಯಲ್ಲಿ ಮಾರಿದ್ದೇನೆ ಎಂದಳು. ಕೂಡಲೇ ಅವಳನ್ನು ಕರೆದುಕೊಂಡು ಅರ್ಧ ಕಿಲೋಮೀಟರ್ ದೂರದಲ್ಲಿದ್ದ ಅಂಗಡಿಗೆ ಹೋಗಿ ವಿಚಾರಿಸಿದಾಗ ಸಾವಿರ ರುಪಾಯಿಗೆ ಮಾರಿರುವುದು ಗೊತ್ತಾಯಿತು. ಅದು 2000ರಷ್ಟು ಬೆಲೆಬಾಳುವ ಸರ. ಮೊದಲು ಸೇಟು ಕೊಡುವುದಿಲ್ಲವೆಂದು ಗಲಾಟೆ ಮಾಡಿದನು. ನಂತರ ಪರಿಸ್ಥಿತಿಯ ಸೂಕ್ಷ್ಮತೆ ಅರಿವು ಮಾಡಿಸಿದಾಗ ಒಪ್ಪಿದನು. ಕೆಲಸದಾಕೆ ಹಾಗೂ ತಂಗಿಯ ಬಳಿ 200 ರುಪಾಯಿ ಇತ್ತು. ಮುಕುಂದನೇ ಇನ್ನು 800 ರುಪಾಯಿ ಹಾಕಿ ಸರವನ್ನು ಬಿಡಿಸಿಕೊಂಡು ಬಂದರು. ತನ್ನ ತಂಗಿಯ ಮಗಳಿಂದಾದ ಈ ಅವಘಡಕ್ಕೆ ಮನೆ ಕೆಲಸದಾಕೆ ತಲೆ ತಗ್ಗಿಸುಂತವಾಯಿತು. ಆ ಹುಡುಗಿಗೂ ಅವರ ತಾಯಿಯಿಂದ ಬಾಸುಂಡೆ ಬಿದ್ದಿತ್ತು. ಸಾವಿರ ರುಪಾಯಿ ಎಲ್ಲಿ ಎಂದರೆ ಅಲ್ಲಿದೆ ಇಲ್ಲಿದೆ ಎಂದು ನೆಪವೊಡ್ಡಲು ಶುರುಮಾಡಿದಳು. ಕಡೆಗೆ 300 ರುಪಾಯಿ ಸಿಕ್ಕಿತು. ಬಡತನದಲ್ಲಿದ್ದ ಅವರಿಂದ ಅದನ್ನು ವಾಪಸು ಕೇಳುವುದಕ್ಕೆ ಮನಸ್ಸಾಗದೆ ಹಾಳಾಗಿ ಹೋಗಲಿ ಎಂದು ಬಿಟ್ಟರು. ಹೊಸಕೋಟೆಯಿಂದ ಮತ್ತೆ ಮನೆಗೆ ವಾಪಸಾದರು.

ಈ ವಿಷಯವನ್ನು ತನ್ನ ಅಪ್ಪ ಅಮ್ಮನಿಗೆ ತಿಳಿಸುವುದು ಬೇಡವೆಂದು ಮುಕುಂದ ನನ್ನ ಅಪ್ಪ ಅಮ್ಮನಲ್ಲಿ ಬೇಡಿಕೊಂಡನು. ತಿಳಿದರೆ ನೊಂದುಕೊಳ್ಳುತ್ತಾರೆ ಎಂದು, ಕಡೆಗೆ ಬಾಯಿಗೆ ಬಂದಿದ್ದ ಹೃದಯ ಸ್ವಸ್ಥಾನಕ್ಕೆ

ಸೇರಿತ್ತು. ಭಾನುವಾರದಂದು ಮುಕುಂದ ತನ್ನ ಸ್ನೇಹಿತನ ಸ್ನೇಹಿತನಿಗೆ ಚಿನ್ನದ ಸರ ಕೊಟ್ಟು ಇದರ ಹಿಂದೆ ಇಷ್ಟೆಲ್ಲಾ ನಡೆದಿದ್ದರೂ ಏನೂ ನಡೆದಿಲ್ಲ ಎಂಬಂತೆ ಇದ್ದು ಕೈ ತೊಳೆದುಕೊಂಡನು. ಮನಸ್ಸು ನಿರಾಳವಾಯಿತು. ಆದರೆ 500 ರುಪಾಯಿ ತನ್ನ ಕೈಯಿಂದ ಹಾಕಿದ್ದಲ್ಲದೆ ಒಂದು ದಿನವಿಡೀ ಓಡಾಟ.

ಈ ವಿಚಿತ್ರ ಘಟನೆ ಕೇಳಿದ ಮೇಲೆ ನನ್ನ ತಲೆಯಲ್ಲಿ ಹತ್ತಾರು ಪ್ರಶ್ನೆಗಳು ಎದ್ದವು.

ನಡೆದೆದ್ದಲ್ಲಾ ಕಾಕತಾಳೀಯವೇ?

ಅಥವಾ

ಒಂದಕ್ಕೊಂದು ಹೆಣೆದಂತೆ ಎಲ್ಲಾ ವಿಧಿ ನಿಯಮದಂತೆ ನಡೆಯಿತೇ?

ಯಾರಿಗೋ ಸೇರಬೇಕಾದ ಚಿನ್ನದ ಸರ ಮುಕುಂದನ ಕೈ ಸೇರಿದ್ದೇಕೆ? ಅದೂ ನಾಲ್ಕು ದಿವಸಗಳ ಮಟ್ಟಿಗೆ!!

ಯಾವತ್ತೂ ತಾನು ಅಥವಾ ತನ್ನ ಮಗಳು ಕೆಲಸಕ್ಕೆ ಬರುವ ಕೆಲಸದಾಕೆ ಅವತ್ತು ತಂಗಿಯ ಮಗಳನ್ನು ಕರೆದುಕೊಂಡು ಬಂದಿದ್ದು ವಿಧಿ ನಿಯಮದಂತೆ ಆದದ್ದೇ?

ಬೆಲೆಬಾಳುವ ಚಿನ್ನದ ಸರವೆಂದು ತಿಳಿದೂ ಮುಕುಂದ ಅದನ್ನು ಡ್ರಾಯರ್‌ನಲ್ಲಿ ಲಾಕ್ ಮಾಡದೇ ಇಟ್ಟದ್ದೇಕೆ? ಅಜಾಗರೂಕತೆಯೇ ಅಥವಾ ಗ್ರಹಚಾರವೇ?

ಅಪರಚಿತರ ಮನೆಗೆ ಬಂದ ಆ ಹುಡುಗಿ ಮಂಜುಳಾ ಡ್ರಾಯರ್‌ಗೆ ಕೈ ಹಾಕಿದ್ದೇಕೆ?

15 ವರ್ಷಗಳಲ್ಲಿ ಯಾವ ವಸ್ತುವೂ ಕೆಲಸದಾಕೆಯಿಂದ ಕಳುವಾಗದೆ ಇರುವಲ್ಲಿ ಅಂದು ತಮ್ಮ ಮನೆಯಲ್ಲಿದ್ದ ಮುಕುಂದನಿಗೆ ತಮ್ಮ ಮನೆಯ ಕೆಲಸದವಳ ಕಡೆಯಿಂದ ಆದ ಅವಘಡಕ್ಕೆ ಕಾರಣ ಏನು? ಹೀಗೆ...

ಕಡೆಗೂ ಸರಿಯಾದ ಉತ್ತರ ಸಿಗದೇ ಇದು (ಮುಕುಂದನ) ಕರ್ಮಫಲವೇ? ಎಂಬ ಪ್ರಶ್ನೆಯಿಂದಲೇ ಕೊನೆಯಾಯಿತು.

*****

ಊಟ ಮಾಡುವುದು ಅಂದರೆ ಮುಕ್ಕುವುದಲ್ಲ

- ಗೌರಿ ಭಟ್ಟ

ದಕ್ಷಿಣ ಕನ್ನಡದ ಬಹುತೇಕ ಎಲ್ಲಾ ದೇವಸ್ಥಾನಗಳಲ್ಲೂ ಮಧ್ಯಾಹ್ನ ಊಟದ ವ್ಯವಸ್ಥೆ ಇರುತ್ತದೆ. ಆಗಾಗ ನಾನು ಹಾಗೂ ನನ್ನ ಯಜಮಾನರು ದೇವಸ್ಥಾನಕ್ಕೆ ಹೋಗಿ ಯಥಾನುಶಕ್ತಿ ಸೇವೆ ಸಲ್ಲಿಸಿ, ಊಟಮಾಡಿ ಬರುತ್ತೇವೆ. ದೇವಸ್ಥಾನದ ಸಾರು, ಸಾಂಬಾರು, ಪಾಯಸಗಳ ರುಚಿ ಮನೆಯಲ್ಲಿ ಮಾಡಿದರೆ ಬಾರದು. "ದೇವರ ಪ್ರಸಾದವಾದುದರಿಂದ ಅಷ್ಟು ರುಚಿ ಬರುತ್ತದೆ" ಅಂತ ಎಲ್ಲರೂ ಹೇಳುತ್ತಾರೆ. ಕಳೆದ ಭಾನುವಾರ ನಮ್ಮವರಿಗೆ ದೇಸ್ಥಾನದ ಸಾರಿನ ನೆನಪಾಯಿತು. ಯಾವುದಾದರೂ ದೇವಸ್ಥಾನದಲ್ಲಿ ಊಟಮಾಡಿ ಬರೋಣ ಅಂದರು.

"ರೀ, ಪಾವಂಜೆ ದೇವಸ್ಥಾನದಲ್ಲಿ ತುಂಬಾ ಚೆನ್ನಾಗಿರುತ್ತದಂತೆ. ಈ ಸಲ ಅಲ್ಲಿಗೇ ಹೋಗೋಣ" ಅಂದೆ. ಬೆಳಿಗ್ಗೆ ತಿಂಡಿ ತಿಂದು, ಸ್ನಾನ, ಪೂಜೆ ಮುಗಿಸಿ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋದೆವು. ದೇವರಿಗೆ ಪಂಚಾಮೃತಾಭಿಷೇಕ ಸೇವೆ ಸಲ್ಲಿಸಿ, ಮಂಗಳಾರತಿ ಸ್ವೀಕರಿಸಿದ ಮೇಲೆ ಭೋಜನಶಾಲೆಯ ಕಡೆಗೆ ತೆರಳಿದೆವು. ಹೊಟ್ಟೆ ಚುರು-ಚುರುಗುಡುತ್ತಾ ಇತ್ತು. 'ಘಂ' ಅಂತ ಬರುವ ಸಾರಿನ ವಾಸನೆ ನಮ್ಮಿಬ್ಬರ ಹಸಿವನ್ನು ಕೆರಳಿಸುತ್ತಿತ್ತು.

"ಎಲ್ಲರೂ ಅಂಗಿ, ಬನಿಯನ್ನು ತೆಗೆದು ಊಟಕ್ಕೆ ಕುಳಿತುಕೊಳ್ಳಿ". ಸಾರ್ವಜನಿಕ ಪ್ರಕಟಣೆ ಆಗುತ್ತಾ ಇತ್ತು.

ಪಕ್ಕದ ಹಳೇಯಂಗಡಿ, ಕಲ್ಲಡ್ಕ, ಪಕ್ಷಿಕೆರೆ ಮುಂತಾದ ಪ್ರದೇಶದ 7ರಿಂದ 14 ವರ್ಷದೊಳಗಿನ ಗಂಡು ಮಕ್ಕಳು ಬೇಸಿಗೆ ಶಿಬಿರಾರ್ಥವಾಗಿ ಸಂಸ್ಕೃತ ಶ್ಲೋಕಗಳನ್ನೂ, ಪಾಠಗಳನ್ನೂ ಕಲಿಯಲು ಬಂದವರಂತೆ. ಒಟ್ಟು ಹತ್ತು-ಹದಿನೈದು ಮಕ್ಕಳಿದ್ದಾರೆ.

ಮಕ್ಕಳೂ ಸೇರಿ ನಾವು ಇಪ್ಪತ್ತೈದು ಜನರು ಊಟಕ್ಕೆ ಕುಳಿತಿದ್ದೆವು. ಶಿವರಾಮ ಭಟ್ಟರೊಬ್ಬರೇ ಎಲ್ಲರನ್ನೂ ಸುಧಾರಿಸುತ್ತಲಿದ್ದರು. ಅವರು ನೋಡಲು ಭೀಮಸೇನನಂತೇ ಇದ್ದರು. ಅಷ್ಟೇ ಗಟ್ಟಿಯಾಗಿ ಮಾತನಾಡುತ್ತಾ ಎಲ್ಲರನ್ನೂ ಅನ್ವಯಿಸಿ,

'ಅನಿರುದ್ಧ, ಊಟದ ಬಟ್ಟಲನ್ನ (ತಟ್ಟೆಯನ್ನು) ಎಡಗೈಯಲ್ಲಿ ಮುಟ್ಟಬಾರದು ಅಂತ ಎಷ್ಟು ಸಲ ಹೇಳಿದ್ದೇನೆ? ಮುಸುರೆ ಆಗುತ್ತೆ. ಇನ್ನೊಂದು ಸಲ ಮುಟ್ಟಿದರೆ ಕೈ-ಮೇಲೇ ಹೊಡೆತೇನೆ" ಅಂದರು.

ಊಟಕ್ಕೆ ಬಟ್ಟಲು ಇಟ್ಟು, ಎಲ್ಲರ ಬದಿಯಲ್ಲಿ ನೀರಿನ ತಟ್ಟೆ (ಲೋಟ) ಇಟ್ಟು, ಬಟ್ಟಲಿನಲ್ಲಿ ಚಟ್ನಿ ಬಡಿಸಿ ಅನ್ನ ಬಡಿಸುತ್ತಿದ್ದಂತೆಯೇ ಕೆಲವರು ಅನ್ನಕ್ಕೆ ಚಟ್ನಿ ಕಲಿಸಿಕೊಂಡು ತಿನ್ನಲು ಶುರು ಮಾಡಿಯೇ ಬಿಟ್ಟರು. "ಅನಿರುದ್ಧ, ಊಟ ಶುರು ಮಾಡಬೇಡ. ಏನು ಅವಸರ? ಶ್ಲೋಕ ಹೇಳಿದಿಯಾ? ಅಭಿಶಿಂಚನ ಮಾಡಿದೆಯಾ?" ಊಟ ಪ್ರಾರಂಭ ಮಾಡಿದವರ ಮುಖ ಹುಣಸೇಹಣ್ಣು ತಿಂದವರಂತೇ ಆಗಿತ್ತು.

ಮಕ್ಕಳೆಲ್ಲಾ ಅನ್ನಪೂರ್ಣೇ, ಸದಾಪೂರ್ಣೇ..... ಅಂತ ಆರಂಭಿಸಿ ಅನ್ನ ಬೃಹ್ಮನಿಗೆ ವಂದಿಸಿ, ಬಟ್ಟಲಿನ ಸುತ್ತಲೂ ಚಿತ್ರಗುಪ್ತನಿಗೆ ಅನ್ನ ಇಟ್ಟು ಪ್ರಸಾದದಂತೆಯೇ ಊಟವನ್ನು ಮಾಡುವ ರೀತಿ ನನಗೂ ನನ್ನ ಬಾಲ್ಯವನ್ನು ನೆನಪಿಗೆ ತಂದಿತು. ನಾವು ಏಳು ಜನ ಮಕ್ಕಳು ಇದೇರೀತಿ ಶ್ಲೋಕವನ್ನು ಹೇಳಿ, ಅಪ್ಪಯ್ಯ, ಅಣ್ಣಂದಿರ ಅಭಿಶಿಂಚನ ಆದಮೇಲೇ ಊಟ ಮಾಡಬೇಕಿತ್ತು. ಎಷ್ಟೇ ಹಸಿವಾದರೂ ಊಟದ ಬಟ್ಟಲಿಗೆ ಮೊದಲು ಕೈ ಹಾಕುವಂತಿರಲಿಲ್ಲ. ಅವಸರ ಮಾಡುವಂತಿರಲಿಲ್ಲ. "ನಿಧಾನವಾಗಿ ಊಟ ಮಾಡಿ. ಊಟ ಮಾಡುವಾಗ ಯಮಧರ್ಮ ಕೂಡಾ ಕಾಯುತ್ತಾನೆ" ಅನ್ನುತ್ತಿದ್ದರು. ನನ್ನ ಆಯಿ ಯಾವ ಕ್ರಮದಲ್ಲಿ ಬಡಿಸುತ್ತಾಳೋ ಹಾಗೇ ಊಟ ಮಾಡಬೇಕಿತ್ತು. ಊಟ ಮಾಡುವಾಗ ಮಾತನಾಡಬಾರದಿತ್ತು. ಮೇಲೋಗರಗಳ ರುಚಿಯ ಬಗೆಗೆ ಆಡಿಕೊಳ್ಳುವಂತಿರಲಿಲ್ಲ. ಹಾಗೆ ಮಾಡಿದರೆ, ಅದು ಅನ್ನಬ್ರಹ್ಮನಿಗೆ ಮಾಡುವ ಅವಮಾನವಂತೆ. ಎಷ್ಟು ಬೇಕೋ ಅಷ್ಟೇ ಹಾಕಿಸಿಕೊಳ್ಳಬೇಕು. ಬಾಳೆಯಲ್ಲಿ ಏನೂ ಉಳಿಸಬಾರದಿತ್ತು. ನನ್ನ ಅಜ್ಜಿ ಹೇಳುತ್ತಿದ್ದರು– "ನಾವು ಊಟ ಮಾಡಿದ ಬಾಳೆಎಲೆಯಲ್ಲಿ ಇನ್ನೊಬ್ಬರು ಊಟಮಾಡುವಂತಿರಬೇಕಂತೆ.

ಅನಿರುದ್ಧ!, ಊಟದ ಬಟ್ಟಲನ್ನ (ತಟ್ಟೆಯನ್ನು) ಎಡಗೈಯಲ್ಲಿ ಮುಟ್ಟಬಾರದು ಅಂತ ಎಷ್ಟು ಸಲ ಹೇಳಿದ್ದೇನೆ? ಮುಸುರೆ ಆಗುತ್ತೆ. ಇನ್ನೊಂದು ಸಲ ಮುಟ್ಟಿದರೆ ಕೈಮೇಲೇ ಹೊಡೀತೇನೆ"

"ಹೇ ಮಾಣಿ, ನೆಲದ ಮೇಲೆ ಸ್ವಲ್ಪ ನೀರು ಹಾಕು. ಅನಿರುದ್ಧ ಅದರಲ್ಲಿ ಕೈ ಅದ್ದು". ಪಕ್ಕದ ಹುಡುಗನಿಗೆ ಹೇಳಿದರು ಭಟ್ಟರು. ಅನಿರುಧ್ಧನ ಕೈ ಮಡಿ ಆಯಿತು.

"ಎಲ್ಲಾ ಅನ್ನಕ್ಕೂ ಸಾಂಬಾರು ಹಾಕಿ ಮೆತ್ತುಕೊಂಡಿದ್ದೀಯ. ನೋಡು ಒಂದೇ ಒಂದು ಅಗುಳೂ ಹೊಟ್ಟೆ ಒಳಗೆ ಇಳಿಯಲಿಲ್ಲ. ಎಲ್ಲಾ ಅನ್ನ ಖಾಲಿ ಮಾಡಬೇಕು. "ಅನ್ನಬ್ರಹ್ಮ" ಬಟ್ಟಲಲ್ಲಿ ಬಿಟ್ಟರೆ ಈಗ ನಾನು ಬೆನ್ನಮೇಲೆ ನಾಲ್ಕು ಬಿಡುತ್ತೇನೆ".

ನಾನು ಚಿಕ್ಕವಳಿರುವಾಗ ಮನೆಯಲ್ಲಿ ಹಿರಿಯರು ಹೇಳುತ್ತಿದ್ದರು, "ಊಟದ ಬಟ್ಟಲಿನಲ್ಲಿ ಏನನ್ನೂ ಬಿಡಬಾರದು" ಎಂದು. ಮತ್ತೆ ಸತ್ತಮೇಲೆ ನರಕದಲ್ಲಿ ನಾವು ಬಟ್ಟಲಿನಲ್ಲಿ ಬಿಟ್ಟ ರಾಶಿ ಖಾಲಿ ಮಾಡಿಸುತ್ತಾರಂತೆ. ಎದುರಿಗೆ ಯಮನ ಕಿಂಕರರು ನಿಂತಿರುತ್ತಾರಂತೆ. ನೋಡಿದರೆ ಭಯ ಹುಟ್ಟಿಸುವ ಕಪ್ಪು ಬಣ್ಣದ ಧಡೂತಿ ಶರೀರ, ಕೆಂಪು ಕಣ್ಣು, ದಪ್ಪ ಮೀಸೆ, ಕೋರೆ ಹಲ್ಲುಗಳು ಅವರದ್ದು. ಖಾಲಿ ಮಾಡದೇ ಇದ್ದರೆ ಕೈಯಲ್ಲಿರುವ ಗರಗಸದಂತಹ ಹಲ್ಲುಗಳಿರುವ ಛಾಟಿಯಿಂದ ಹೊಡೆಯುತ್ತಾರಂತೆ. ಇದೇ ತರಹದ ಭಯ ಹುಟ್ಟಿಸಿ ಬಟ್ಟಲಿನಲ್ಲಿನ ಅನ್ನ ಖಾಲಿ ಮಾಡಿಸುತ್ತಿದ್ದರು ಅಥವಾ ನಮಗೆ ಎಷ್ಟು ಬೇಕೋ ಅಷ್ಟೇ ಹಾಕಿಸಿಕೊಂಡು ತಿನ್ನುವ ಅಭ್ಯಾಸ ಮಾಡಿಸುತ್ತಿದ್ದರು.

ಅನಿರುದ್ಧ ಊಟಮಾಡದೇ ಪಕ್ಕದಲ್ಲಿ ಕುಳಿತ ಗೆಳೆಯನೊಡನೆ ಏನೋ ಸನ್ನೆ ಮಾಡಿ ಹೇಳುತ್ತಾ ಇದ್ದ. ಶಿವರಾಮ ಭಟ್ಟರು ಅವನ ಹಿಂದೆಯೇ ನಿಂತಿದ್ದವರು ಅನಿರುದ್ಧನ ಬೆನ್ನಿಗೆ ಒಂದು ಗುದ್ದು ಬಿಟ್ಟರು. ಆಗ ನನಗೆ ತುಂಬಾ ಬೇಸರ ಆಯಿತು.

"ಅನಿರುದ್ಧ, ಎಲ್ಲರದ್ದೂ ಊಟ ಮುಗೀತಾ ಬಂತು, ಬೇಗ ಬೇಗ ಮಾಡು. ಹೊರಗಡೆ ಬೇರೆಯವರೂ ಕಾಯ್ತಾ ಇದ್ದಾರೆ. ಮುಂದಿನ ಊಟದ ಪಂಕ್ತಿಗೆ ಕೃಷ್ಣ ಭಟ್ಟರು ಕಾಯ್ತಾ ಇದ್ದಾರೆ. ಗೊತ್ತಲ್ಲ, ಅವರು ಬಂದರೆ ಹೇಗಿರುತ್ತೆ ಅಂತ. ಊಟಬೇಗ ಮಾಡೋ". ಇನ್ನೊಂದು ಗುದ್ದು ಅನಿರುದ್ಧನಿಗೆ.

ನನ್ನ ಪಕ್ಕದಲ್ಲೇ ಕುಳಿತಿದ್ದ ಅನಿರುದ್ಧ. ಅವನ ಕಣ್ಣಲ್ಲಿ ನೀರಿರಲಿಲ್ಲ. ಅವನಿಗೆ ಹೊಡೆತ, ಬೈಗುಳ ಅಭ್ಯಾಸವಾದಂತಿತ್ತು. ನನಗೆ ಬಹಳ ಬೇಸರವಾಗಿತ್ತು. ಅನಿರುದ್ಧನಿಗೆ ಹೊಡೆತ, ಬೈಗುಳ ಸಿಕ್ಕುತ್ತಿದ್ದಂತೇ ಬೇರೆ ಮಕ್ಕಳ ಬಟ್ಟಲು ಖಾಲಿ ಆಗುತ್ತಿತ್ತು. ಸಾರು, ಸಾಂಬಾರು ಆದಮೇಲೆ ಅನ್ನಕ್ಕೆ ಮಜ್ಜಿಗೆ ಹಾಕಿದರು ಶಿವರಾಮ ಭಟ್ಟರು.

ನೀರು ಮಜ್ಜಿಗೆ ಅನ್ನದೊಂದಿಗೆ ಕಲಸಿ ಊಟಮಾಡಲು ಸ್ವಲ್ಪ ಕಷ್ಟ ಹಾಗೂ ಅದಕ್ಕೆ ಅನುಭವ ಬೇಕು. ನಾನು ಮಜ್ಜಿಗೆಯನ್ನು ಲೋಟದಲ್ಲಿ ಹಾಕಿಸಿ ಕುಡಿಯಲು ಆಲೋಚಿಸಿ ಲೋಟದಲ್ಲಿನ ನೀರನ್ನು ಕುಡಿದು ಖಾಲಿ ಮಾಡಿದೆ.

"ಅನಿರುಧ್ಧಾ, ಮಜ್ಜಿಗೆ ಲೋಟದಲ್ಲಿ ಕುಡಿಯಬಾರದು ಕೇಳಿತಾ?" ಅವರು ನನಗೇ ಹೇಳಿದಂತೆ ಅನ್ನಿಸಿತು. ನಾನು ನೀರಿನ ಲೋಟವನ್ನು ಯಥಾಸ್ಥಾನದಲ್ಲಿ ಇಟ್ಟೆ. ನನ್ನ ಎದುರಿಗೆ ಕುಳಿತಿದ್ದವರೊಬ್ಬರು ಎರಡೂ ಕೈಯಲ್ಲಿ ಎಂಜಲು ಬಟ್ಟಲನ್ನು ಎತ್ತಿ ಮಜ್ಜಿಗೆಯನ್ನು ಕುಡಿದೇಬಿಟ್ಟರು.

"ಅನಿರುಧ್ಧ! ಎಂತದು ಮಾರಾಯ, ಎಡಗೈಯಲ್ಲಿ ಎಂಜಲು ಬಟ್ಟಲು ಎತ್ತಿ ಕುಡಿಯಬಾರದು. ನನಗೆ ಬರೋ ಸಿಟ್ಟಿಗೆ" ಅನ್ನುತ್ತಲೇ ಅನಿರುದ್ಧನ ಬೆನ್ನಿನ ಮೇಲೆ ಇನ್ನೊಂದು ಗುದ್ದು ಬೀಳುತ್ತಿತ್ತು, ಅಷ್ಟರಲ್ಲಿ ನಾನು, "ಪಾಪ ಅನಿರುಧ್ಧ. ಎಂತಾ ಶಿವರಾಮಣ್ಣ? ಅವನಿಗೇಕೆ ಗುದ್ದು?" ಎಂದು ಕೇಳಿದೆ.

ಅದಕ್ಕೆ ಅವರು, "ಹೌದಮ್ಮಾ, ಊಟಮಾಡುವುದು ಅಂದರೆ ಮುಕ್ಕುವುದಲ್ಲ. ಅದು ಒಂದು ಕಲೆ. ಊಟ ಮಾಡುವಾಗ ಒಟ್ರಾಶಿ ಮಾಡುವುದಲ್ಲ. ಅದಕ್ಕೆ ರೀತಿ ರಿವಾಜು ಇದೆ. ಈ ಮಕ್ಕಳು ಬೇಸಿಗೆ ರಜೆಯಲ್ಲಿ ಶಿಬಿರಾರ್ಥವಾಗಿ ಇಲ್ಲಿಗೆ ಬಂದಿದ್ದಾರೆ. ಅವರಿಗೆ ಒಳ್ಳೆಯ ಸಂಸ್ಕಾರ ಕೊಡುವುದು ನನ್ನ ಕರ್ತವ್ಯ. ಇನ್ನು ಅನಿರುಧ್ಧ, ನನ್ನ ಅಣ್ಣನ ಮಗ. ಅವನಲ್ಲಿ ನನಗೆ ವಿಶೇಷ ಸಲುಗೆ ಹಾಗೂ ಅವನ ಮೇಲೆ ನನ್ನ ಜವಾಬ್ದಾರಿ ಜಾಸ್ತಿ ಇದೆ. ಹಾಗಾಗಿ ನಾನು ಅವನಿಗೆ ಏಟೂ ಕೊಡಬಹುದು. ಬಿಸಿಗೆ ಅಲ್ಲವೇ ಬೆಣ್ಣೆ ಕರಗುವುದು? ಇಲ್ಲಿ ಬಿಸಿ ಮಾಡಿದರೆ ನೋಡಿ, ಅವರೆಲ್ಲರೂ ಚುರುಕಾಗುತ್ತಾರೆ. ನನ್ನ ಕೆಲಸ ಸಲೀಸಾಗಿ ಆಗುತ್ತದೆ."

"ದೇವಸ್ಥಾನಕ್ಕೆ ಬಂದ ಭಕ್ತಾದಿಗಳಿಗೆ ನೇರವಾಗಿ ಹೇಳಲಾಗುವುದಿಲ್ಲ. ಅವರು ಅದನ್ನು ಅನುಸರಿಸುವುದೂ ಇಲ್ಲ. ನಾನು ಅನಿರುಧ್ಧನಿಗೆ ಹೇಳುವ ಮೂಲಕ ಎಲ್ಲರಿಗೂ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿದ್ದೇನೆ ಎನ್ನುವ ಸಮಾಧಾನವಿದೆ. ನೀವೂ ಸರಿ ಅನ್ನಿಸಿದರೆ ಒಪ್ಪಿಕೊಳ್ಳಬಹುದು. ಇಲ್ಲದಿದ್ದರೆ ನನಗೆ ಬೇಸರವಿಲ್ಲ." ಸ್ವಲ್ಪ ಕಟುವಾಗಿಯೇ ಹೇಳಿದರು.

"ಅನಿರುದ್ಧ!, ಊಟ ಆಯ್ತಾ? ನಿನ್ನದು ಊಟ ಮುಗಿದ ಕೂಡಲೇ ನಿನ್ನ ಪಾಡಿಗೆ ನೀನು ಎದ್ದು ಹೋಗುವುದಲ್ಲ. ಆಪೋಶನ ತಗೆದುಕೋ. ಅನ್ನಕ್ಕೂ, ಅನ್ನದಾತನಿಗೂ ಕೃತಜ್ಞತೆ ಸಲ್ಲಿಸು.." ಊಟ ಮುಗಿಸಿ ಅವಸರದಲ್ಲಿ ಏಳುತ್ತಿರುವವರೆಲ್ಲಾ ಸ್ವಸ್ಥಾನದಲ್ಲಿ ಕುಳಿತುಕೊಂಡರು. ಸ್ವಲ್ಪ ಹೊತ್ತು ಕಾದು ಸರದಿಯಲ್ಲಿ ಕೈತೊಳೆಯಲು ಹೋಗುತ್ತಿರುವಾಗ, "ಹೇ, ಅನಿರುದ್ಧ! ಪಕ್ಕದವರಿಗೆ ನಿನ್ನ ಎಂಜಲು ಕೈಯನ್ನು ತಾಗಿಸಬೇಡ. ಎಂಜಲು ಕೈಯ್ಯನ್ನು ಮೇಲ್ಮುಖವಾಗಿ ಹಿಡಿದುಕೊಂಡು ಹೋಗಿ ಕೈ ತೊಳೆದುಕೋ." ಎಲ್ಲರೂ ಅನಿರುದ್ಧನನ್ನೇ ಅನುಸರಿಸಿದೆವು.

ಊಟದ ಪ್ರಾರಂಭದಿಂದ ಕಡೆಯವರೆಗೆ ಎಷ್ಟೊಂದು ನಿಯಮಗಳು! ಮಕ್ಕಳಿಗೆ ಊಟದ ಸಂಪ್ರದಾಯವನ್ನು ಮರೆಯದೇ ಕಲಿಸುತ್ತಿರುವ ಹಾಗೂ ನನ್ನ ಚಿಕ್ಕಂದಿನಲ್ಲಿ ಕಲಿತು, ಈಗ ಮರೆತ ಕೆಲವು ಊಟದ ಶಿಸ್ತುಗಳನ್ನು ನೆನಪಿಸಿದ ಶಿವರಾಮ ಭಟ್ಟರಿಗೆ ಮನಸ್ಸಿನಲ್ಲೇ ವಂದಿಸುತ್ತಾ, ನಾನು ಹಾಗೂ ನನ್ನ ಯಜಮಾನರು ಭಟ್ಟರಿಗೆ ನಮಸ್ಕಾರ ಹೇಳಿ ಬಂದೆವು. ***

ಮನಜ್ವಾಲೆ

– ಶಾಂತಿವಾಸು

ಬರಲಿ ನಿನ್ನರಿಯಲು ಅರಿತು ನುರಿತನೇಕರು, ನೀ ಗುಪ್ತಗಾಮಿನಿ....
ನಿನ್ನ ಪ್ರವಾಹಕ್ಕುಂಟೆ ಆದಿ ಅಂತ್ಯ, ಸ್ಪರ್ಶ ನಿನ್ನಿಚ್ಛೆ.
ನೀನಾಗಿರುವೆ ಕೆಂಪರಿಸಿನದ ಮಂದಹಾಸಿನಿ...

ಉಕ್ಕೇರಿ, ಹರಿದು, ಸೆಟೆಗೊಂಡ ನಿನ್ನೊಡಲು ತಾಳಲು ಪರಿಪರಿ ವಿರೂಪ...
ಬಾಲ್ಯ, ಯವ್ವನ, ಮುದಿತನಕೆ ಕನ್ನಡಿ ಹಿಡಿದ ಪ್ರತಿರೂಪ....

ಹುಟ್ಟಹುದು ಸನಾತನ, ವರ್ತಮಾನದಿರುವು, ಕಾಣದ ಭವಿಷ್ಯ...
ಅನುಕ್ಷಣ ಪಾತಾಳದಿ ಹುಟ್ಟಿ, ಪವಿತ್ರಳಾಗೇ ನಗುವ ನಿನಗೆ ನೀಡುವರಾರು ಸಾಕ್ಷ್ಯ

ನಿನ್ನ ಗರ್ಭಚಿಪ್ಪಲಿ ಉರಿದು, ಹೊರಬಂದ ವಜ್ರಕ್ಕುಂಟೆ ಸರಿಸಮಾನ....
ಧರಿಸಿ ಮೆರೆವವರು ನೆನೆಯರು ನಿನ್ನ ಬಸಿರ ಬಿಸಿಯುಸಿರ ದುಗುಡ ದುಮ್ಮಾನ...

ಕಾದು ಕಾದು, ಕೆನೆಕಟ್ಟಿದ ಪದರದಡಿ ಬಿಕ್ಕಿ ಬಿಕ್ಕಿ ತುಡಿವ ನಿನ್ನನುಭವದಗ್ನಿ..
ಉಕ್ಕಿ ಉಕ್ಕಿ ಹರಿದು, ನಿಲುಕದ ವಜ್ರಗನ್ನಡಿಗಾಗಿ ಮಿಡಿವುದು "ಶಾವಾ" ಜೀವದ ಜ್ವಾಲಾಮುಖಿ...

***

ಪ್ರಾಸ ವೈವಿಧ್ಯ

–ಶೀಲಾ ಅರಕಲಗೂಡು

(ಆರು ವಿವಿಧ ಪ್ರಾಸಗಳ ತಿಳುವಳಿಕೆಗಾಗಿ ಕೆಲ ಮುಕ್ತಕಗಳನ್ನು ರಚಿಸಿ ಈ ಕೆಳಗೆ ಕೊಟ್ಟಿದ್ದೇನೆ. ಮೊದಲೆರಡು ಮುಕ್ತಕಗಳಲ್ಲಿ ಪ್ರಾಸಗಳ ಹೆಸರುಗಳ ಪರಿಚಯ ಮಾಡಿಕೊಟ್ಟು ನಂತರ ಪ್ರತಿಯೊಂದು ಪ್ರಾಸದಲ್ಲೂ ಎರಡೆರಡು ಮುಕ್ತಕಗಳನ್ನು ರಚಿಸಿದ್ದೇನೆ. ಮೊದಲೆರಡು ಪರಿಚಯದ ಮುಕ್ತಕಗಳಲ್ಲಿ ಮೊದಲನೆಯದು ಗಜ ಪ್ರಾಸದಲ್ಲಿದ್ದರೆ ಎರಡನೆಯದು ಸಿಂಹ ಪ್ರಾಸದಲ್ಲಿದೆ. ಕಡೆಯ ಎರಡು ಮುಕ್ತಕಗಳನ್ನು ಮುಕ್ತಾಯ ನುಡಿಗಳೆಂದು ರಚಿಸಿದ್ದೇನೆ. ಅವು ಕ್ರಮವಾಗಿ ಗಜ ಹಾಗೂ ಸಿಂಹ ಪ್ರಾಸದಲ್ಲಿವೆ.)

ಪ್ರಾಸಗಳು ಹಲವಿಹವು ಸಿಂಹ ಗಜ ವೃಷಭ ಅಜ ।
ಪ್ರಾಸವಿವೆ ಶರಭ ಹಯ ಹೆಸರುಗಳು ಮಧುರ ॥
ತ್ರಾಸವೇನಿಲ್ಲವನು ತಿಳಿದು ಪ್ರಯೋಗಿಸಲು ।
ಗ್ರಾಸ ಬುದ್ಧಿಗೆ ಮನಕೆ - ಜ್ಞಾನ ದಾಹಿ ॥

ಪ್ರತಿ ಪಾದದಲ್ಲಿರುವ ಮೊದಲ ಪದವನು ನೋಡಿ ।
ಅತಿ ಸೂಕ್ಷ್ಮ ವ್ಯತ್ಯಾಸ ಗೋಚರಿಸಬಹುದು ॥
ಮತಿಯನುಪಯೋಗಿಸುತ ಕಗ್ಗಗಳ ಗಮನಿಸಿರೆ ।
ಮಿತಿದಾಟಿ ನೀನರಿವೆ - ಜ್ಞಾನ ದಾಹಿ ॥

ಮೊದಲಿಗಿದು ರಚಿಸುತಿಹೆ ಪ್ರಾಸ ಸಿಂಹದೊಳಿಹುದು ।
ಮುದಗೊಳಿಸುವಂತಿಹುದು ಈ ಸಿಂಹ ಪ್ರಾಸ ॥
ಹೃದಯ ತಟ್ಟುವ ಸರಳ ಗಂಭೀರ ಪ್ರಾಸವಿದು ।
ಪದತಲದೊಳಿರಿಸಿಹೆನು - ಜ್ಞಾನ ದಾಹಿ ॥

ಪದ ಭಾಗ್ಯವೆಮಗಿರಲಿ ಕನ್ನಡವು ಮೆರೆದಿರಲಿ ।
ಹದವು ಗಾಂಭೀರ್ಯದಲಿ ಸಿಂಹದಂತಿರಲಿ ॥
ಮೃದುಭಾವ ಸೂಸುತ್ತ ಗಟ್ಟಿತನ ತೋರುತ್ತ ।
ಕದ ತೆರೆದು ಸ್ವಾಗತಿಸು - ಜ್ಞಾನ ದಾಹಿ ॥

ಆನೆಯಂತೆಯೆ ಸೊಗಸು ಪ್ರಾಸ ಗಜದೊಳಗಿರಲು ।
ಕಾನನದ ಸೌಗಂಧವೆನಿಸಲೂ ಬಹುದು ॥
ಸೋನೆ ಮಳೆಗರೆವಂತೆ ಭಾಸವಾಗಲು ಬಹುದು ।
ಮೌನದಲಿ ನೀ ತಿಳಿವೆ - ಜ್ಞಾನ ದಾಹಿ ॥

ಗಾಜರಿಯ ರುಚಿಯಂತೆ ಈ ಪ್ರಾಸವೂ ಸೊಗಸು ।
ಸೋಜಿಗವು ಗಜವೀಗ ನಿಮ್ಮೆಡೆಗೆ ಬರಲು ॥
ಹಾಜರಿಯ ಹಾಕುತ್ತ ಪ್ರಾಸವನು ತೋರುತ್ತ ।
ಗೋಜಲನು ಬಿಡಿಸಿಹುದು - ಜ್ಞಾನ ದಾಹಿ ॥

ಬಂತು ಬಂತಿದೊ ವೃಷಭ ಎತ್ತಲ್ಲ ಪ್ರಾಸವಿದು ।
ಗಂತು ಹುಡುಕುತಲಿಲ್ಲ ಬಂದಿಹುದು ನಡೆದು ॥
ನಿಂತು ನೋಡುವ ನಿಮಗೆ ಅರ್ಥವಾಗಿರಬಹುದ ।
ದೆಂತು ರಚಿಸುವುದೆಂದು - ಜ್ಞಾನ ದಾಹಿ ॥

ಸಂತೆಯೊಳು ಬಂತೊಂದು ವೃಷಭ ಮೆಲು ನಡಿಗೆಯಲಿ ।
ಬಂತು ಸಂತೆಗೆ ಶೋಭೆ ಪ್ರಾಸ ನಡೆಯಿಂದ ॥
ನಿಂತು ನೋಡಿದರೆಲ್ಲ ಚೆಂದದೀ ನಡಿಗೆಯನು ।
ಚಿಂತೆ ಕಳೆದಂತಾಯ್ತು - ಜ್ಞಾನ ದಾಹಿ ॥

ಅಃ ಬಹಳ ಕಷ್ಟವಿದು ಪ್ರಾಸವಿದು ಅಜನಾಮ ।
ಓಃ ಬಿಡದೆ ಕಾಡುವುದು, ಪದ ಸಂಖ್ಯೆ ಕಡಿಮೆ ॥
ಅಃ ಬಹಳ ಕಷ್ಟವದು ತಿಣುಕುತಿರೆ ಪದಗಳಿಗೆ ।
ಓಃ ಬೆರಗು ನಿಮಗಾಯ್ತೆ?- ಜ್ಞಾನ ದಾಹಿ ॥

ದುಃಖ ಪಡಬೇಕಿಲ್ಲ ಹಲವಾರು ಪದಗಳಿವೆ ।
ದುಃಖದಾಚೆಗೆ ಬನ್ನಿ ಅಜವು ಹಗುರಹುದು ॥
ದುಃಖ ದುಮ್ಮಾನಗಳು ಕರಗಿ ನೀರಾಗುವುವು ।
ದುಃಖ ಕಾರಣ ಸುಖಕೆ - ಜ್ಞಾನ ದಾಹಿ ॥

ಅಷ್ಟ ಪಾದಗಳಂತೆ ಶರಭವೆಂಬಾ ಮೃಗಕೆ ।
ಪುಷ್ಟವಾಗಿಹುದಿಲ್ಲ ಪ್ರಾಸವದು ಶರಭ ॥
ಇಷ್ಟವಾಗುವುದೆಮಗೆ ಶರಭ ಕಗ್ಗ ಪ್ರಾಸ ।
ಶಿಷ್ಟವೆಂದೆನಿಸುವುದು - ಜ್ಞಾನ ದಾಹಿ ॥

ಧನ್ಯೋಸ್ಮಿ ನಾನೆಂಬೆ ಶಿವರೂಪಿ ಶರಭಕ್ಕೆ ।
ವಿನ್ಯಾಸದದ್ಭುತಕೆ ಅದರ ರೂಪಕ್ಕೆ ॥
ಅನ್ಯೋನ್ಯ ಭಾವದಲಿ ಹಕ್ಕಿ ಸಿಂಹಗಳೆರಡು ।
ವಿನ್ಯಾಸದೊಳಗಿಹವು - ಜ್ಞಾನ ದಾಹಿ ॥

ಹಕ್ಕಿ ಹಾರುವ ತೆರದಿ ಪ್ರಾಸ ಹಯವಿಹುದಿಲ್ಲ ।
ಚುಕ್ಕಿ ಚಂದ್ರಮನಂತೆ ಕಗ್ಗಕ್ಕೆ ಹಯವು ॥
ಪಕ್ಕದೊಳು ಹಯವಿರಲು ಅದನೇರಿ ಸಾಗುತಿರೆ ।
ನಕ್ಕು ನಲಿವುದು ಮನವು - ಜ್ಞಾನ ದಾಹಿ ॥

ದಿಟ್ಟ ಹೆಜ್ಜೆಯ ಹಾಕಿ ಹಯನು ತಾ ನಡೆವಾಗ ।
ಪುಟ್ಟ ಮಕ್ಕಳ ನೋಡಿ ಕೆನೆಯುವುದು ಸೊಗದಿ ॥
ತಟ್ಟಿ ಬೆನ್ನನು ಮೆಲನೆ ಪ್ರೀತಿಯಲಿ ಕರೆಯದಿರೆ ॥
ಸಿಟ್ಟು ತೋರುವುದು ಹಯ - ಜ್ಞಾನ ದಾಹಿ ॥

ಪ್ರಾಸಗಳ ಪರಿಚಯವು ಆಗಿಹುದೆ ನಿಮಗೀಗ? ।
ಪ್ರಾಸವಿದ್ದರೆ ಕಗ್ಗ ವಾಚಿಸಲು ಸೊಗಸು ॥
ಪ್ರಾಸ ವೈವಿಧ್ಯತೆಯನರಿತು ನಕ್ಕರೆ ನೀವು ।
ಹಾಸವೆನ್ನಯ ಮೊಗದಿ - ಜ್ಞಾನ ದಾಹಿ ॥

ಶರಣೆಂಬೆ ನಾ ನಿಮಗೆ ಶಿರಬಾಗಿ ಕರ ಮುಗಿವೆ ।
ತೆರೆದ ಮನದಿಂದಿದನು ಆಲಿಸಿದ್ದಕ್ಕೆ ॥
ಕರೆದು ಮಾರ್ಗವ ತೋರಿ ಅವಕಾಶವನು ಕೊಟ್ಟು ।
ಪೊರೆವ ನಿಮಗಿದೊ ನಮನ - ಜ್ಞಾನ ದಾಹಿ ॥

***

ಭಾಷಾ ವೈವಿಧ್ಯ

ಅನುಸ್ವಾರ ಹಾಗೂ ಅನುನಾಸಿಕಗಳು

– ಗಣಪತಿ ಹೆಗಡೆ

ಸಾಮಾನ್ಯವಾಗಿ ಕನ್ನಡದಲ್ಲಿರುವ ಅಕ್ಷರಗಳನ್ನು ಸ್ವರ ಹಾಗೂ ವ್ಯಂಜನಗಳೆಂದು ವರ್ಗೀಕರಿಸಲಾಗಿದೆ. 'ಅ' ದಿಂದ 'ಅಃ' ತನಕ ಸ್ವರಗಳೆಂದೂ, 'ಕ' ದಿಂದ 'ಳ' ತನಕ ವ್ಯಂಜನಗಳೆಂದೂ ಹೇಳುತ್ತಾರೆ.

'ಸ್ವಯಂ ರಂಜತೇ ಇತಿ ಸ್ವರಃ'. ಸ್ವತಂತ್ರವಾಗಿ ಉಚ್ಚರಿಸಲು ಬರುವ ಅಕ್ಷರಗಳೇ ಸ್ವರಗಳು. ಉಳಿದವುಗಳು ವ್ಯಂಜನಗಳು.

ಕೇಶೀರಾಜನು ಕನ್ನಡ ವರ್ಣಮಾಲೆಯಲ್ಲಿ 47 ಅಕ್ಷರಗಳಿವೆ ಎಂದಿರುವನು.

ಸ್ವರಗಳು– ಅ, ಆ, ಇ, ಈ, ಉ, ಊ, ಋ, ಎ, ಐ, ಒ, ಓ, ಔ	: 12
ವ್ಯಂಜನಗಳು (ವರ್ಗೀಯ)– ಕ ದಿಂದ ಮ	: 25
ವ್ಯಂಜನಗಳು (ಅವರ್ಗೀಯ)– ಯ, ರ, ಲ, ವ, ಸ, ಹ, ಳ, ಱ, ೞ	: 09
ಅನುಸ್ವಾರ– ಅಂ	: 01

ಋ, ಶ, ಷ ಹಾಗೂ ವಿಸರ್ಗ (ಅಃ) ಈ ನಾಲ್ಕು ವರ್ಣಗಳು ಸಂಸ್ಕೃತ ವರ್ಣಮಾಲೆಗೆ ಸೇರಿದವುಗಳು. ಸಂಸ್ಕೃತ ಶಬ್ದಗಳನ್ನು ನೇರವಾಗಿ ಕನ್ನಡದಲ್ಲಿ ಬಳಸುವಾಗ ಈ ಅಕ್ಷರಗಳನ್ನು ಬಳಸುತ್ತಾರೆ.

ಕೇಶಿರಾಜನು ಶಬ್ದಗಳ ಉತ್ಪತ್ತಿಯ ಕ್ರಮವನ್ನು ಈ ಕೆಳಗಿನಂತೆ ತಿಳಿಸಿರುವನು.

'ಅನುಕೂಲ ಪವನನಿಂ ಜೀವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂಗಿನವೋಲ್ ಶಬ್ದದ್ರವ್ಯಂ ಜನಿಯಿಸುಗುಂ। ಶ್ವೇತಮದಱಕಾರ್ಯಂ ಶಬ್ದಂ॥' (ಮಾತನಾಡಬೇಕೆಂಬ ವ್ಯಕ್ತಿಯ ಅಪೇಕ್ಷೆಯಂತೆ ಅನುಕೂಲವಾದ ಗಾಳಿಯ ಸಹಾಯದಿಂದ ನಾಭಿಮೂಲದಲ್ಲಿ ಕಹಳೆಯ ಅಕಾರದಲ್ಲಿ ಶಬ್ದವೆಂಬ ದ್ರವ್ಯವು ಹುಟ್ಟುತ್ತದೆ. ಅದರ ಬಣ್ಣ ಬಿಳಿ. ಆ ದ್ರವ್ಯದ ಕಾರ್ಯವೇ ಶಬ್ದ)

ಶಬ್ದದ ಉತ್ಪತ್ತಿಯಲ್ಲಿ ಇನ್ನೊಂದು ಹೇಳಿಕೆಯನ್ನೂ ತಿಳಿಸಿದ್ದಾನೆ.

'ತನು ವಾದ್ಯಂ ನಾಲಗೆ ವಾ। ದನದಂಡಂ ಕರ್ತೃವಾತ್ಮನವನ ಮನೋವೃ। ತ್ತಿನಿಮಿತ್ತಮಾಗಿ ಶಬ್ದಂ। ಜನಿಯಿಸುಗುಂ ಧವಳವರ್ಣಮಕ್ಷರರೂಪಂ॥

(ದೇಹವೇ ವಾದ್ಯ. ನಾಲಗೆಯು ಬಾಜನೆ ಮಾಡುವ ಅಂದರೆ ವಾದ್ಯವನ್ನು ನುಡಿಸುವ ಕುಡುಹು (ದಂಡ). ಬಾಜಿಸುವವನು ಆತ್ಮ. ಅವನ ಮನಸ್ಸಿನ ಅಪೇಕ್ಷೆಯಂತೆ ಶಬ್ದವು ಬಿಳಿಯ ಬಣ್ಣದಿಂದ ಅಕ್ಷರದ ರೂಪದಲ್ಲಿ ಉತ್ಪತ್ತಿಯಾಗುತ್ತದೆ.)

ಕೇಶಿ ರಾಜನ ಈ ಹೇಳಿಕೆಗಳು 'ವೈಜ್ಞಾನಿಕವೋ ಅಥವಾ ಭಾವನಾತ್ಮಕ/ಆಧ್ಯಾತ್ಮಿಕವೋ' ಎನ್ನುವದನ್ನು ತಿಳಿದವರು ಹೇಳಬೇಕು.

ಆದರೆ ಈ ಸ್ವರ ಹಾಗೂ ವ್ಯಂಜನಗಳು ಉತ್ಪತ್ತಿಯಾಗುವದು ಬಾಯಿಯ ಬೇರೆ ಬೇರೆ ಸ್ಥಾನಗಳಲ್ಲಿ ಎನ್ನುವದು ವ್ಯಾಕರಣವನ್ನು ತಿಳಿದವರಿಗೆಲ್ಲಾ ಗೊತ್ತು ಹಾಗೂ ವೈಜ್ಞಾನಿಕವಾಗಿಯೂ ಸಿದ್ಧವಾದ ವಿಷಯ. (ಉದಾ: ಅ, ಕ, ಹ–ಕಂಠ್ಯ, ಮುಂತಾದವು.)

ಆದರೆ ಇವೆಲ್ಲವುಗಳ ಕುರಿತಾಗಿ ಇಂದಿನ ಲೇಖನದಲ್ಲಿ ಪ್ರಸ್ತಾಪಿಸುವದಿಲ್ಲ. ಅನುಸ್ವಾರ ಹಾಗೂ ಅನುನಾಸಿಕಗಳ ಕುರಿತಾಗಷ್ಟೆ ಗಮನ ಹರಿಸೋಣ.

ಮೂಗಿನ ಬಳಕೆಯಿಂದಾಗುವ ಅಕ್ಷರಗಳು ಅನುನಾಸಿಕಗಳು ಒಟ್ಟೂ 5. ಙ, ಞ, ಣ, ನ, ಮ.

ಙ ಕಂಠದಲ್ಲಿ, ಞ ತಾಲಲ್ಲಿ, ಣ ಮೂರ್ಧನ್ಯದಲ್ಲಿ, ನ ದಂತದಲ್ಲಿ, ಮ ಓಷ್ಠದಲ್ಲಿ ಹುಟ್ಟಿಕೊಳ್ಳುತ್ತದೆ

ಅನುಸ್ವಾರವೂ ಮೂಗಿನ ಬಳಕೆಯಿಂದಾಗುತ್ತದೆ.

Anusvara is a symbol used in many Indic scripts to mark a type of nasal sound, typically transliterated ⟨ṃ⟩. Depending on its location in the word and the language for which it is used, its exact pronunciation can vary. Wikipedia

ಅನುಸ್ವಾರ ಅಂದರೆ 'ಅಂ'. ಉಚ್ಚಾರದಲ್ಲಿ ಅಮ್. ಅಂದರೆ ಓಷ್ಠ ಅರ್ಥಾತ್ ತುಟಿಯಿಂದ ಹುಟ್ಟಿಕೊಳ್ಳುವದು.

ಆದರೆ 'ಅಂ' ಅನ್ನು ವರ್ಗೀಯ ವ್ಯಂಜನಗಳ ಹಿಂದೆ ಸೇರಿಸಿದಾಗ ಏನಾಗುತ್ತದೆ ನೋಡೋಣ.

ಕಂಬ ಎನ್ನುವದನ್ನು ಕಂ+ಬ ಅಂದರೆ ಕಮ್+ಬ ಅಂತ ತಿಳಿದರೆ ಕಮ್ಬ ಎಂದಾಗುತ್ತದೆ. ಇಲ್ಲಿ ಮ್ ಓಷ್ಠ.
ಕಂಬ=ಕಂ+ಬ=ಕಮ್+ಬ=ಕಮ್ಬ.

ಆದುದರಿಂದ ಕಮ್ಬ ಎನ್ನುವಲ್ಲಿ ಯಾವುದೇ ದೋಷ ಕಾಣುವದಿಲ್ಲ.

ಕಂಪು ಎನ್ನುವಲ್ಲಿಯೂ ಹೀಗೇ ಆಗುತ್ತದೆ
ಕಂಪು=ಕಂ+ಪು=ಕಮ್+ಪು=ಕಮ್ಪು.

ಆದರೆ ಅಂಕ ಎನ್ನುವಲ್ಲಿ ಅಮ್+ಕ ಮಾಡಿದಲ್ಲಿ ಅಮ್ಕ ಎಂದಾಗುತ್ತದೆ. ಇದು ದೋಷಯುಕ್ತವಾಗಿದೆ ಅಂತ ಯಾರಾದರೂ ಹೇಳಬಹುದು.

ಅಂಕ=ಅಂ+ಕ=ಅಮ್+ಕ. ಆದರೆ ಇಲ್ಲಿ ಅಮ್ಕ ಅಂತಾಗುವದಿಲ್ಲವಲ್ಲ. ಇದು ಯಾಕೆ?

ಈಗ ಇದನ್ನು ಗಮನಿಸಿ:

ಙ ಕಂಠದಲ್ಲಿ, ಞ ತಾಲಲ್ಲಿ, ಣ ಮೂರ್ಧನ್ಯದಲ್ಲಿ, ನ ದಂತದಲ್ಲಿ, ಮ ಓಷ್ಠದಲ್ಲಿ ಹುಟ್ಟಿಕೊಳ್ಳುತ್ತದೆ.

ಹೀಗೆ ಙ ವೂ ಸೇರಿ ಕ ಕಾರ ಕಂಠದಲ್ಲಿಯೂ, ಚ ಕಾರ ತಾಲದಲ್ಲಿಯೂ, ಟ ಕಾರ ಮೂರ್ಧದಲ್ಲಿಯೂ, ತ ಕಾರ ದಂತದಲ್ಲಿಯೂ, ಪ ಕಾರ ಓಷ್ಠದಲ್ಲಿಯೂ ಹುಟ್ಟಿಕೊಳ್ಳುತ್ತವೆ.

ಅನುಸ್ವಾರವನ್ನು ಬಳಸುವಾಗ ವರ್ಗೀಯ ವ್ಯಂಜನ ಬಂದಲ್ಲಿ 'ಂ' ಅಥವಾ ಅಮ್ ಬದಲಿಗೆ ವರ್ಗೀಯ ಅನುನಾಸಿಕಗಳನ್ನು ಬಳಸಬೇಕು. (ಕೆಲವರು ಅನುಸ್ವಾರದ ಬದಲಿಗೆ ಬಿಂದು ಎಂದು ಬಳಸುತ್ತಾರೆ–ಬಿಂದು–ವಿಸರ್ಗ)

ಉದಾಹರಣೆಗೆ.

ಅಂಕ=ಅಂ+ಕ=ಅಙ್+ಕ=ಅಙ್ಕ (ಅಮ್ಕ ಆಗಬಾರದು)

ಮಂಗ=ಮಂ+ಗ=ಮಙ್+ಗ=ಮಙ್ಗ

ಚಂಚಿ=ಚಂ+ಚಿ=ಚಞ+ಚಿ=ಚಞ್ಚಿ

ಮುಂಜಿ=ಮುಂ+ಜಿ=ಮುಞ್+ಜಿ=ಮುಂಜಿ

ಬಂಟ=ಬಂ+ಟ=ಬಣ್+ಟ=ಬಣ್ಟ

ಚಂಡು=ಚಂ+ಡು=ಚಣ್+ಡು=ಚಣ್ಡು

ತಂದೆ=ತಂ+ದೆ=ತನ್+ದೆ=ತನ್ದೆ

ಜಂತು=ಜಂ+ತು=ಜನ್+ತು=ಜನ್ತು (ಜಮ್ತು ಆಗಬಾರದು)

ಸೊಂಪು=ಸೊಂ+ಪು=ಸೊಮ್+ಪು=ಸೊಮ್ಪು

ನಂಬು=ನಂ+ಬು=ನಮ್+ಬು=ನಮ್ಬು

ಹೀಗೆ ಅನುಸ್ವಾರದ (ಅಂ) ಬದಲಿಗೆ ಅನುನಾಸಿಕಗಳನ್ನು ಬಳಸಿ ಬರೆಯಬಹುದೆಂದು ಅಂತ ನನ್ನ ಅನಿಸಿಕೆ.

ಅವರ್ಗೀಯ ವ್ಯಂಜನದಲ್ಲಿ ಸ್ವಲ್ಪ ವ್ಯತ್ಯಾಸ ಉಂಟು.

ಅಂಶ ಎನ್ನುವಲ್ಲಿ ಅಂವ್+ಶ=ಅಂವ್ಶ (ಅಮ್ಶ ಅಲ್ಲ)

ಕಂಸ ಎನ್ನುವಲ್ಲಿ ಕಂವ್+ಸ=ಕಂವ್ಸ (ಕಮ್ಸ ಅಲ್ಲ)

ಸಂಯುಕ್ತದಲ್ಲಿ ಸಂವ್+ಯುಕ್ತ=ಸಂವ್ಯುಕ್ತ (ಸಮ್ಯುಕ್ತ ಅಲ್ಲ)

(ಇಲ್ಲಿ ಓಷ್ಠದಲ್ಲಿ ಉತ್ಪತ್ತಿಯಾಗುವದಿಲ್ಲ.) ಅಂತಲೂ ಹೇಳಬಹುದು.

*****

ಯಾರಿವನು

- ರೇಣುಕಾ ದೇಸಾಯಿ

ಸುಸ್ಪುಷ್ಟ ದೇಹದ ಬಲಿಷ್ಟ ತೋಳುಗಳ
ವಜ್ರ ಶರೀರದ ಧೀರ್ಘದೇಹಿ
ಧೀರ ಲಲಾಟದ ವೀರನು
ಯಾರಿವನು?

ಮಾಗಿಯ ಕಾಲದ ಮುಂಜಾವಿನಲಿ
ಕನ್ಯಾಕುಮಾರಿ ಗರ್ಭಗುಡಿಯಲಿ
ಧ್ಯಾನಸ್ಥನಾದ ಧೀರನು
ಯಾರಿವನು?

ಭಾರತಮಾತೆಯ ಪವಿತ್ರಪಾದದಲಿ
ವೇದಭೂಮಿಯ ಕೊನೆಯಂಚಿನಲಿ
ಭಾವಪರವಶನಾಗಿ ನಿಂತಿರುವ ಶೂರನು
ಯಾರಿವನು?

ಗಂಭಿರವದನದ ಕಾವಿಯಧಾರಿ
ನಿರಂತರಾನ್ವೇಷಕ ಮಾನವಕೇಸರಿ
ಸನಾತನಧರ್ಮದ ಉತ್ತರಾಧಿಕಾರಿ
ಯಾರಿವನು?

ಸನ್ಯಾಸಿಯಾದರೂ ಕೋಟಿ ಭಾರತೀಯರ ಸಂಸಾರಿ
ಶಾರದಾಮಾತೆ ರಾಮಕೃಷ್ಣರ ಪೂಜಾರಿ
ಸನಾತನ ಧರ್ಮದ ಪುನರುತ್ಥಾನದ ರೂವಾರಿ
ಯಾರಿವನು?

(ಪ್ರೇರಣೆ: ಕುವೆಂಪು ಅವರ 'ಯಾರಿವನು' ಪಾಠ)

*****

ಅಳುವ - ಚೆಲುವ

- ರೇಣುಕಾ ದೇಸಾಯಿ

ಹಾಲು ಬಣ್ಣದ ಚೆಲುವೆ
ಮುಖವೇಕೆ ಮ್ಲಾನವೇ?
ಒಳಗಣ್ಣ ತೆಗೆದು ಕುಸುರಿನಲಿ ನೋಡು ಜೀವನ
ಒಬ್ಬೊಬ್ಬರದು ಒಂದೊಂದು ಸರಿಬೆಸ ಕವನ

ಕಮಲದಂತಹ ನಯನೆರಡು
ತುಂಬಿರಲು ದುಃಖದಾ ಕಡಲು
ಕಣ್ಣೆವೆಯ ಸೇತುವೆಯು ತಡೆದಿಹುದು ಕಣ್ಣೀರ
ಜೀಳಿಸದಿರು ಕೆನ್ನೆಗುಂಟ
ಕದಡೀತು ಮುಖದ ಹಾಲು ಬಣ್ಣ

ಭಗವಂತನ ಆಟದಲಿ ನನ್ನದೊಂದು ಪಾತ್ರ
ಜೊತೆಗೆ ನಿನ್ನದು ಅವನದು
ಯಾರಿಗೆ ಯಾವ ಪಾತ್ರ ಕೊಟ್ಟಿಹನೋ
ಸೂತ್ರಧಾರ ಇಟ್ಟಿಹನು ಅದರಲಿ
ಬಿಡಿಸುವ ಸೂತ್ರ, ಅರಿಯಬೇಕು ಅವನ ತಂತ್ರ

ಸಕಲವನು ಕೊಟ್ಟಿಹನು ಕೊಡುಗೈಲಿ
ಮರೆತಿರಲು ಒಂದು, ನೆನಪಿಸು ಅವನಲಿ
ಕೈ ಚೆಲ್ಲಿ ಕೂಡ್ರ ಬೇಡ ಅವನೆ ನೆನಪಿಸಲಿಯೆಂದು
ಸಮಯ ಕೊಡು, ಉಪ್ಪು ನೀರು ಒಳ್ಳೆಯದಲ್ಲ
ದೇಹಕೆ ಹರಿಸಬೇಡ ದಿನವೂ ಹೊರಗೆ

***

ಮಿನಿ ಕಥೆ

ಹೀಗೊಂದು ದೃಷ್ಟಿ...

– ನಾಗರತ್ನ ಎಂ.ಜಿ.

ಐದು ವರ್ಷದ ಮಗಳು ಭರಣಿ, ಶಾಲೆಯ ವಾರ್ಷಿಕೋತ್ಸವದಲ್ಲಿ ನೃತ್ಯ ಮಾಡಿ ಎಲ್ಲರಿಂದ ಭೇಷ್ ಅನ್ನಿಸಿಕೊಂಡು ಬಹುಮಾನ ಕೈಯಲ್ಲಿ ಹಿಡಿದು ಕುಣಿಯುತ್ತ ತಮ್ಮೊಂದಿಗೆ ಮನೆಗೆ ಬಂದಾಗ ಆರತಿಗೆ ಸ್ವರ್ಗಕ್ಕೆ ಮೂರೇ ಗೇಣು. ಉತ್ಸಾಹದಲ್ಲಿ ಒಂದು ವಾರದ ಹಿಂದೆ ತಾನೆ ಹಳ್ಳಿಯಿಂದ ಬಂದಿದ್ದ ಮುತ್ತಜ್ಜಿ ಸಾಕಮ್ಮಜ್ಜಿಗೆ "ಬಿಗ್ ಅಜ್ಜಿ ಏನ್ ಗೊತ್ತಾ?" ಎಂದು ಶಾಲೆಯ ಕಾರ್ಯಕ್ರಮದ ವರದಿ ಒಪ್ಪಿಸಿದ್ದೇ ಒಪ್ಪಿಸಿದ್ದು. ಮತ್ತೆಮತ್ತೆ ಡಾನ್ಸ್ ಮಾಡಿ ಮನೆಯಲ್ಲಿ ಗೆಜ್ಜೆ ಶಬ್ದ ತುಂಬಿಸಿ ಕಡೆಗೆ 'ಉಸ್ಸಪ್ಪ' ಎನ್ನುತ್ತಾ ಕೂತಳು.

ಸಾಕಮ್ಮಜ್ಜಿ ಹಳ್ಳಿಯಿಂದ ಬಂದಾಗ "ಇವರ್‍ಯಾರು? ಅನ್ನುವ ಮುಗ್ಧ ಪ್ರಶ್ನೆಗೆ ಆರತಿ, 'ಇವ್ರು ನಮ್ಮಜ್ಜಿ' ಅಂದಾಗ, "ಅಯ್ಯೋ ನಮ್ಮಜ್ಜಿ ಜಾನಕೀ ಅಜ್ಜಿ ಅಲ್ವಾ", ಅವಳ ಅಮ್ಮಮ್ಮನ್ನು ನೆನೆಸಿಕೊಂಡು ಹೇಳಿದಾಗ ಆರತಿ "ಇವ್ರು ಅವರಿಗಿಂತ ದೊಡ್ಡಜ್ಜಿ" ಎಂದು ಸಮಜಾಯಿಷಿ ಕೊಟ್ಟಳು.

"ಓಹ್! ಬಿಗ್ ಅಜ್ಜೀನಾ" ಎನ್ನುತ್ತಾ ಅವರನ್ನು ಹಾಗೆ ಕರೆಯುತ್ತಿದ್ದಳು.

ಈಗ ಕುಣಿದು ಕುಣಿದು ಸುಸ್ತಾಗಿ ನಂತರ ಊಟ ಸೇರದೇ ತಿಂದದ್ದೆಲ್ಲ ಕಕ್ಕಿ ಏದುಸಿರು ಬಿಡುತ್ತಾ ಕೂತಾಗ ಆರತಿಗೆ ದಿಕ್ಕೇ ತೋಚಲಿಲ್ಲ. ಗಂಡನತ್ತ ನೋಡುತ್ತಾ, "ರೀ.. ಡಾಕ್ಟರ್ ಹತ್ರ ಹೋಗೋಣ" ಅಂದಾಗ ಗೂನು ಬೆನ್ನಿನ ಸಾಕಮ್ಮಜ್ಜಿ ಕೋಲು ಕುಟ್ಟುತ್ತಾ ಬಂದು, "ಡಾಕ್ಟರೂ ಬೇಡ, ಮಣ್ಣು ಬೇಡ. ಆ ಕೂಸಿಗೆ ದೃಷ್ಟಿ ಆಗಿದೆ. ಒಂದಷ್ಟು ದೃಷ್ಟಿ ತೆಗೆದು ಹಾಕು. ಬೆಳಿಗ್ಗೆ ಎಲ್ಲ ಸರಿಯಾಗುತ್ತೆ" ಅಂದರು.

"ಆದ್ರೆ ಅಜ್ಜಿ.. ದೃಷ್ಟಿ ತೆಗೆಯೋದು ಹೇಗೆ.., ನಂಗೆ.. " ಎನ್ನುತ್ತಾ ರಾಗ ಎಳೆದಾಗ, "ಅಯ್ಯೋ ಅದ್ಯಾವ ಬ್ರಹ್ಮ ವಿದ್ಯೆ. ತೊಗೊಂಡ್ಬಾ ಇಲ್ಲಿ.. ಹಂಚಿಕಡ್ಡಿ, ಪೊರಕೆ.. ನಾನು ತೆಗಿತೀನಿ" ಅನ್ನುತ್ತಾ ಅಲ್ಲೇ ಕೂತರು.

"ಕಡ್ಡಿ ಪೊರಕೆ ಎಲ್ಲಿಂದ ತರೋದಜ್ಜಿ ಇಲ್ಲಿ ಯೂಸ್ ಮಾಡೋದು ಬೊಂಬಾಯಿ ಪೊರಕೆ. ಅದನ್ನು ಹಚ್ಚಿದ್ರೆ ಇಲ್ಲಿ ಗೋಡೆ ಎಲ್ಲ ಕಪ್ಪಾಗುತ್ತೆ...".

"ಕರ್ಮ.. ಹೋಗ್ಲಿ ಅಕ್ಕಪಕ್ಕ ಎಲ್ಲಾದ್ರೂ ಸಗಣಿ ಇದ್ರೆ ತೊಗೊಂಡು ಬಾ, ಸಗಣಿ ನೀರು ಮಾಡಿಕೊಡು.. ಒಂದು ಲೋಟದಲ್ಲಿ ಮೆಣಸಿನಕಾಯಿ, ಉಪ್ಪು, ಮೂರು ಚೂರು ಬಿಳಿ ಬಟ್ಟೆ ಹಾಕಿ, ಹೊತ್ತಿಸಿ, ನೀವಾಳಿಸಿ ಸಗಣಿ ನೀರಲ್ಲಿ ಬೋರಲು ಹಾಕಿದ್ರೆ ದೃಷ್ಟಿ ಆಗಿರೋದು ಎಲ್ಲ ಕೊಚ್ಕೊಂಡು ಹೋಗುತ್ತೆ. ಹುಂ ನಡಿ ಬೇಗ...".

ಒಳ್ಳೆ ಧರ್ಮ ಸಂಕಟ ಬಂತಲ್ಲ. "ಅಜ್ಜಿ, ಇದು ಬೆಂಗಳೂರು. ನಾವು ಇರೋದು ಅಪಾರ್ಟ್ಮೆಂಟ್. ಸಗಣಿ ಎಲ್ಲಿ ಬರುತ್ತೆ ಇಲ್ಲಿ?" ಮುಖ ಕಿವುಚಿದಳು ಆರತಿ.

"ಏನು ಊರೋ ಏನ್ ಕಥೇನೋ, ಮಕ್ಕಳಿಗೆ ದೃಷ್ಟಿ ತೆಗೆಯೋ ಅಭ್ಯಾಸಾನೇ ಇಲ್ವಾ ಇಲ್ಲಿ ಯಾರಿಗೂ..? ಕೆಮ್ಮಿದ್ದಕ್ಕೆ ಸೀನಿದ್ದಕ್ಕೆ ಎಲ್ಲದಕ್ಕೂ ಡಾಕ್ಟ್ರೇನಾ ಚು.. ಚು.. ಏನ್‌ಕಾಲ ಬಂತಪ್ಪಾ? ಈಗೇನು ಮಾಡೋದು?" ಅಜ್ಜಿ ಪೇಚಾಡುತ್ತಾ, "ಸರಿ.. ಹೋಗ್ಲಿ.. ಇನ್ನೊಂದು ಸುಲಭವಾಗಿ ಇರೋ ಉಪಾಯ ಇದೆ. ಉಪ್ಪು ಮೆಣಸಿನಕಾಯಿ ನೀವಾಳಿಸಿ ಒಲೆಗೆ ಹಾಕಣ" ಅಂದಾಗ, "ಅಜ್ಜಿ, ಅದು ಆಗಲ್ಲ ಗ್ಯಾಸ್ ಸ್ಟವ್ ಮೇಲೆ ಮೆಣಸಿನಕಾಯಿ ಹಾಕಿದ್ರೆ ಮನೆಯೆಲ್ಲಾ ಘಾಟಾಗುತ್ತೆ", ಮತ್ತೆ ಕೈ ಚೆಲ್ಲಿದಳು ಆರತಿ.

"ಸರಿ ಮಾರಾಯ್ತಿ, ಒಂದು ಹಿಡಿ ಉಪ್ಪಾದ್ರೂ ಕೊಡು ಹೋಗ್ಲಿ. ಅದ್ನೇ ನೀವಾಳ್ತೀನಿ. ಅದಾದ್ರೂ ಇದ್ಯಾ ಇಲ್ವಾ..?" ಗೊಣಗಿದರು ಅಜ್ಜಿ.

"ಹೂಂ, ಕೊಟ್ಟೆ.. ಕೊಟ್ಟೆ.." ಅನ್ನುತ್ತಾ ಆರತಿ ಒಂದು ಹಿಡಿ ಹರಳು ಉಪ್ಪನ್ನು ತಂದುಕೊಟ್ಟಳು.

"ಎಲ್ಲಿ.. ಕರಿ ಮಗೂನಾ..". ಸುಸ್ತಾಗಿ ತೂಕಡಿಸುತ್ತಿದ್ದ ಭರಣಿಯನ್ನು ಕರೆದು ತೊಡೆಯ ಮೇಲೆ ಕೂರಿಸಿಕೊಂಡಲು ಆರತಿ. ಎಡಕೈ ಮುಷ್ಟಿಯಲ್ಲಿ ಉಪ್ಪಿರಿಸಿ ಬಲದಿಂದ ಎಡಕ್ಕೆ ನಿವಾಳಿಸುತ್ತಾ,

"ಹಾದಿ ಕಣ್ಣು ಬೀದಿ ಕಣ್ಣು.. ಕಾಗೆ ಕಣ್ಣು ಗೂಬೆ ಕಣ್ಣು.. ನಾಯಿ ಕಣ್ಣು ನರಿ ಕಣ್ಣು.. ರಂಡೇರ್ ಕಣ್ಣು ಮುಂಡೇರ್ ಕಣ್ಣು.. ಸುಡುಗಾಡು ಕಣ್ಣು ಶುಂಠಿ ಕಣ್ಣು.., ಕಲ್ಲಪ್ಪ ಕರಗಿ ಹೋಗ್ಲಿ, ಛೀ.. ಪೋ.., ಛೀ.. ಪೋ.., ಛೀ.. ಪೋ" ಎಂದು ರಾಗವಾಗಿ ಪ್ರವರ ಹಾಡಿ, "ಥೂ.. ಅಂತ ಮೂರು ಸಲ ಅನ್ನು" ಎನ್ನುತ್ತಾ ಮರಿಮಗಳಿಗೆ ಹೇಳಿ, ಅವಳು "ಥು ಥು ಥು" ಅಂದ ಮೇಲೆ, "ಎಲ್ಲಿ ಒಂದು ಬಟ್ಟಲಲ್ಲಿ ನೀರು ಕೊಡು" ಎನ್ನುತ್ತಾ ಆ ನೀರಲ್ಲಿ ಉಪ್ಪನ್ನು ಹಾಕಿದರು.

"ಇದು ಕರಗಿದ ಮೇಲೆ ಗಿಡಕ್ಕೆ ಹಾಕು. ಅದಾದ್ರೂ ಇದ್ಯಾ ಇಲ್ಲಿ ಅಥವಾ..." ಎಂದರು ಗುರ್ ಎನ್ನುತ್ತಾ.

"ಇಲ್ಲೇ ಕೆಳಗಡೆ ಗಾರ್ಡನ್ ಇದೆ ಅಜ್ಜಿ, ಹಾಕ್ತೀನಿ" ಅನ್ನುತ್ತಾ ಆರತಿ ಬಟ್ಟಲು ತೆಗೆದಿಟ್ಟಳು.

"ಇರು, ಇನ್ನೂ ಮುಗಿದಿಲ್ಲ. ನಿನ್ನ ಸೆರಗು ಕೊಡು".

"ಸೆರಗಾ..." ರಾಗ ಎಳೆದಳು ಕುರ್ತಾ ಹಾಕಿದ್ದ ಆರತಿ.

“ಅಯ್ಯೋ.. ಸರಿ, ನಿನಗೆಲ್ಲಿದೆ ಸೆರಗು” ಎನ್ನುತ್ತಾ, ಸೊಂಟಕ್ಕೆ ಸಿಕ್ಕಿಸಿದ್ದ ತಮ್ಮ ಸೆರಗನ್ನೇ ತೆಗೆದು ಮೂರು ಸಲ ಮುಖದಿಂದ ಇಳಿ ತೆಗೆದರು. “ಹೂಂ, ಈಗ ನಿನ್ನ ಕೂದಲಲ್ಲಿ ಮೂರು ಸಲ ಇಳಿ ತೆಗಿ” ಅನ್ನುತ್ತಾ,

ಅವಳು “ಅದೂ..” ಎಂದು ಬಾಯಿಬಿಡುವ ಮುನ್ನವೇ..., “ಸರಿ ಸರಿ ನಿನ್ನ ತುಂಡು ಕೂದಲಲ್ಲಿ ಅದೂ ಆಗಲ್ಲ ಬಿಡು” ಎಂದು ಪೂರಾ ಬಿಳಿಯಾಗಿದ್ದರೂ ಉದ್ದಕ್ಕಿದ್ದ ತಮ್ಮ ಜಡೆಯಿಂದಲೇ ಮೂರು ಬಾರಿ ಮುಖದಿಂದ ಇಳಿ ತೆಗೆದು, “ಸರಿ ನೆಟಿಗೆ ತೆಗಿತೀಯಾ? ಅದು ನನಗಂತೂ ಆಗಲ್ಲ ನನ್ ಕೈಯಲ್ಲಿ ನೆಟಿಕೆ ತೆಗೆಯೋ ಶಕ್ತಿ ಇಲ್ಲ” ಎನ್ನುತ್ತಾ ಸುಕ್ಕು ಗಟ್ಟಿದ ತಮ್ಮ ಕೈಯನ್ನು ಆಡಿಸಿದರು. “ಹುಂ, ನೆಟಿಕೆ ತೆಗೀತೀನಿ” ಎನ್ನುತ್ತಾ ಆರತಿ ತನ್ನ ಮಗಳ ಕೆನ್ನೆ ಮುಟ್ಟಿ ನೆಟಿಕೆ ತೆಗೆದಳು. ‘ಪಟ ಪಟ’ ಎನ್ನುತ್ತಾ ನೆಟಿಕೆ ಬಂದಾಗ “ನೋಡಿದ್ಯಾ.. ಎಷ್ಟು ದೃಷ್ಟಿ ಆಗಿದೆ ಎಂದರು ಅಜ್ಜಿ.

“ಹುಂ.. ಹೌದು” ಎಂದು ತೂಕಡಿಸುತ್ತಿದ್ದ ಮಗಳನ್ನು ಮಲಗಿಸಿ ಬಂದು, “ಅಜ್ಜಿ.. ಡಾಕ್ಟು ಬೇಡ್ವಾ..” ಎಂದು ಅನುಮಾನದಿಂದ ಮತ್ತೆ ರಾಗ ಎಳೆದಾಗ, "ಸುಮ್ನೆ ಮಲ್ಕೋ ಹೋಗು ಪೆದ್ದಮ್ಮ ಏನು ಆಗಲ್ಲ" ಎನ್ನುತ್ತಾ ನಿರಾಳವಾಗಿ ಹಾಸಿಗೆಯತ್ತ ನಡೆದರು.

ಪತಿಯತ್ತ ನೋಡಿ ಒಮ್ಮೆ ನಿಡುಸುಯ್ದು ತಾನು ಮಲಗಲು ಹೊರಟ ಆರತಿ ಕದಲದೆ ಒಳ್ಳೆ ನಿದ್ರೆ ಮಾಡುತ್ತಿದ್ದ ಭರಣಿಯ ಮೇಲೆ ಕೈ ಹಾಕಿ ತಾನು ನಿದ್ರೆಗೆ ಜಾರಿದಳು.

ಬೆಳಿಗ್ಗೆ ಎದ್ದ ಕೂಡಲೇ ಅಮ್ಮ ಹಸಿವು ಎಂದ ಭರಣಿಗೆ ಹಾಲು ಕೊಟ್ಟು, “ಹೌ ಆರ್ ಯು ಪುಟ್ಟಾ” ಎಂದಾಗ, “ಐ ಆ್ಯಮ್ ಫೈನ್” ಎಂದು ಜಿಗಿಯುತ್ತ “ಬಿಗ್ ಅಜ್ಜಿ ಎಲ್ಲಿ” ಎನ್ನುತ್ತಾ ಮಗಳು ಅವರ ಕೋಣೆಗೆ ಹೋದಾಗ ನೆಮ್ಮದಿಯ ಉಸಿರು ಬಿಟ್ಟು ಆರತಿ, “ಅಜ್ಜಿ ನೋಡಿ ಮಗು ಹುಷಾರಾಗಿದೆ” ಎಂದಳು ಸಂಭ್ರಮದಿಂದ.

“ಮತ್ತೇನು ಎಂಭತ್ತು ವರ್ಷ ನಾವು ಹಾಗೆ ಸುಮ್ನೆ ಮಕ್ಳನ್ನ ಸಾಕಿದ್ವಿ ಅನ್ಕೊಂಡ್ಯಾ?” ಎಂದು ವಿಜಯದ ನಗೆ ಬೀರಿದರು ಸಾಕಮ್ಮಜ್ಜಿ.

“ಓ, ದಿಸ್ ದೃಷ್ಟಿ ಈಸ್ ಗ್ರೇಟ್” ಎಂದು ಕೊಳ್ಳುತ್ತಾ, ಅದೇನೇನೋ ಹೇಳಿದ್ರಲ್ಲ... ಅದನ್ನೆಲ್ಲ ಅಜ್ಜಿ ಹತ್ರ ಕೇಳಿ ಬರೆಸಿಟ್ಕೋಬೇಕು, ಯೂಸ್ ಆಗ್ತಿರತ್ತೆ ಎಂದುಕೊಳ್ಳುತ್ತಾ ಅಡುಗೆಮನೆ ಕಡೆ ಹೆಜ್ಜೆ ಹಾಕಿದಳು ಆರತಿ.

*****

ಸಣ್ಣ ಕತೆ

ಆನಂದದ ಮೂಲ

– ಗಿರಿಜಾ ರಾಜ್

"ನನಗ್ಯಾಕೋ ಬೇಜಾರು ರೀ.." ಮೃದುಲಾ ಪ್ರೀತಿಯ ಗಂಡನ ಮುಂದೆ ಹೇಳಿಕೊಂಡಳು.

ಶಶಿ ತನ್ನ ಮನದನ್ನೆ ಕಡೆ ನೋಡಿ "ಅಂದುಕೊಂಡೆ, ನಾನು ಆಫೀಸಿನಿಂದ ಬರೋ ಹೊತ್ತಿಗೆ ಸುಂದರವಾಗಿ ಅಲಂಕಾರ ಮಾಡಿಕೊಂಡು ಸ್ವಾಗತಿಸುವ ನನ್ನ ಅರಗಿಣಿಗೆ ಏನಾಯಿತಪ್ಪ ಇವತ್ತು? ತಲೆ ಬಾಚಿಲ್ಲ, ಅಂದವಾಗಿ ಹೆರಳು ಹಾಕಿಲ್ಲ. ಯಾವಾಗಲೂ ಮುಡಿಯುವ ಹಾಗೆ ಬಲಬದಿಗೆ ಗುಲಾಬಿ ಮುಡಿದಿಲ್ಲ. ಹಣೆಯಲ್ಲಿ ನಗುವ ತಿಲಕವಿಲ್ಲ. ಯಾಕೆ ಬೇಜಾರು ಚಿನ್ನಾ?" ಎಂದು ಮುದ್ದು ಮಡದಿಯ ಪಕ್ಕದಲ್ಲಿ ಕುಳಿತು ಲಲ್ಲೆಗೆರೆಯುತ್ತ ಕೇಳಿದ.

ಮುಖ ಉಬ್ಬಿಸಿ ನಲ್ಲೆ ಮತ್ತೆ ಉಲಿದಳು. "ಯಾಕೋ ಗೊತ್ತಿಲ್ಲಪ್ಪ, ತುಂಬ ಬೇಜಾರು".

"ಬಾ, ಒಂದು ಒಳ್ಳೆಯ ಸಿನೆಮಾ ನೋಡಿ ಬರೋಣ".

"ಊಹುಂ ಬೇಡ..., ಎಂಥ ಸಿನೇಮಾ ಆದರೂ ಮುಂದಾಗೋದೆಲ್ಲಾ ಗೊತ್ತಾಗಿ ಬಿಡುತ್ತೆ, ಹೋಗ್ರಿ" ಎಂದು ಮುಖ ತಿರುವಿದಳು.

"ಹೋಟೆಲ್ಗೆ...?"

"ಊಹುಂ"

"ಬೋಂಡಾ ಬಜ್ಜಿ ಮಾಡಲು ಅಡುಗೆಯವರಿಗೆ ಹೇಳಲಾ?

"ಊಹುಂ"

"ಸೀರೆ ಕೊಡಿಸಲಾ?"

"ಊಹುಂ, ಬೀರು ತುಂಬಾ ತುಂಬ್ಹೋಗಿದೆ, ಜಾಗ ಎಲ್ಲಿದೆ?"

"ಸರಿ, ಒಡವೆ ಕೊಡಿಸಲಾ" ಎಂದ ನಿಟ್ಟುಸಿರು ಬಿಡುತ್ತಾ.

"ಊಹುಂ, ಲಾಕರ್ ತುಂಬಿದೆ" ಎಂದು ಬೇಜಾರಿನಿಂದ ಮುಖ ಸಿಂಡರಿಸಿದಳು.

"ಹೋಗಲಿ ತಂಗಾಳಿ ಬೀಸುತ್ತಿದೆ, ಪಾರ್ಕಿನವರೆಗೂ ವಾಕ್ ಹೋಗೋಣ" ಎಂದ. ಈ ಸಲಹೆ ಮೃದುಲೆಗೆ ಇಷ್ಟವಾದಂತೆ ಕಂಡಿತು.

"ಹಾಗೆ ಕೂದಲು ಸರಿಪಡಿಸಿಕೊಂಡು, ಬಟ್ಟೆ ಬದಲಾಯಿಸಿ ಬಂದುಬಿಡುತ್ತೇನೆ ತಡೆಯಿರಿ" ಎಂದು ಒಳಕ್ಕೆ ನಡೆದಳು. ಹೋಗುವ ಮುನ್ನ ಮನೆಯಲ್ಲೇ ಅವಳ ಸಹಾಯಕ್ಕೆಂದು ಊರಿನಿಂದ ಕರೆಸಿಕೊಂಡವಳಿಗೆ ಎಚ್ಚರವಾಗಿರೆಂದು ಹೇಳಿ ದಂಪತಿ ವಾಕಿಂಗ್ ಹೊರಟರು.

ಮೃದುಲಾ ಶ್ರೀಮಂತ ತಂದೆ-ತಾಯಿಯರ ಒಬ್ಬಳೇ ಮಗಳು. ಎಲ್ಲದಕ್ಕೂ ಆಳುಕಾಳು, ಯಾವುದಕ್ಕೂ ಕೊರತೆ ಇಲ್ಲ. ಅವಳು ಬಯಸಿದ್ದು ಯಾವುದೇ ಪ್ರಯತ್ನ, ಹೋರಾಟಗಳಿಲ್ಲದೆ ಕ್ಷಣಾರ್ಧದಲ್ಲಿ ಕಣ್ಮುಂದೆ ಪ್ರತ್ಯಕ್ಷವಾಗುತ್ತಿತ್ತು. ಕಷ್ಟಪಡದೆ ಸಿಕ್ಕಿದ್ದರ ಮೇಲೆ ಎಷ್ಟು ಬೇಗ ಬಂತೋ ಅಷ್ಟೇ ಬೇಗ ವ್ಯಾಮೋಹ ಹೊರಟು ಹೋಗುತ್ತಿತ್ತು. ಇನ್ನು ಮದುವೆ ಮಾಡಿಕೊಟ್ಟಿದ್ದು ಶ್ರೀಮಂತರ ಮನೆಗೇ. ತಮ್ಮ ಒಬ್ಬಳೇ ಮಗಳು ತನ್ನ ಗಂಡನ ಮನೆಯಲ್ಲಿ ಕಷ್ಟ ಪಡಲಿ ಎಂದು ಯಾವ ತಂದೆ-ತಾಯಿ ಇಷ್ಟಪಡುತ್ತಾರೆ?

ಹೆಂಡತಿಗೆ ದಾರಿಯಲ್ಲಿ ಅದು ಇದು ತೋರಿಸುತ್ತ, ಏನೇನೋ ತಮಾಷೆ ಮಾಡುತ್ತಾ ನಗಿಸಲು ನೋಡಿದನು. ಆದರೂ ಚೆಂದದ ತುಟಿಗಳ ಮೇಲೆ ಮಂದಸ್ಮಿತ ಮೂಡಲೇ ಇಲ್ಲ. ಸ್ವಲ್ಪ ದೂರ ಹೋದ ನಂತರ ಅಲ್ಲಿ ಅರ್ಧಂಬರ್ಧ ಮುಗಿಸಿದ್ದ ಕಟ್ಟಡ ಕಂಡಿತು. ಒಂದು ಪಕ್ಕದಲ್ಲಿ ವಾಚ್‌ಮನ್ ಶೆಡ್ ಇತ್ತು. ಝಿಂಕ್‌ಶೀಟ್ ಹೊದಿಸಿ ಬರಿ ಇಟ್ಟಿಗೆಯಲ್ಲಿ ಒಂದೇ ಪುಟ್ಟ ಕೊಠಡಿ ಕಟ್ಟಲಾಗಿತ್ತು. ಅದಕ್ಕೆ ಯಾವ ಪ್ಲಾಸ್ಟಿಂಗೂ ಇರಲಿಲ್ಲ. ತೆರೆದ ಬಾಗಿಲಿನಿಂದ ಒಳಗಿನದು ಪೂರ್ತಿ ಕಾಣುತ್ತಿತ್ತು. ಇಬ್ಬರು ಮಕ್ಕಳು ಮತ್ತು ಗಂಡ-ಹೆಂಡತಿ ತುಂಬಾ ಖುಷಿಯಾಗಿ ಬಿಸಿಬಿಸಿ ಹೊಗೆಯಾಡುವ ಚಹಾ ಯಾ ಕಾಫಿ ಹೀರುತ್ತ, ಒಂದೊಂದು ಗುಟುಕಿನ ಮೇಲೂ ನ್ಯಾಯಯುತ ಹಕ್ಕಿದೆ ಎನ್ನುವಂತೆ ನಗುತ್ತಾ ಖುಷಿಯಿಂದ ಮಾತನಾಡುತ್ತಿದ್ದರು. ಒಂದೊಂದು ಹನಿ ಕಾಫಿ ಯಾ ಚಹಾದ ಹಿಂದೆ ಬೆವರಿನ ಬೆಲೆ ಇತ್ತೆಂಬುದನ್ನು ಅವರೆಂದೂ ಮರೆಯಲಾರರು.

ಅದೇನೆನ್ನಿಸಿತೋ ಮೃದುಲೆಗೆ. "ನಾನು ಅವರೊಂದಿಗೆ ಕುಳಿತು ಚಹಾ ಕುಡಿಯಬೇಕೆಂದು ಆಸೆಯಾಗುತ್ತಿದೆ" ಎಂದಳು. ಗಂಡ ತುಂಬಾ ನಕ್ಕುಬಿಟ್ಟ. "ಏನಾಗಿದೆ ನಿನಗೆ ಮೃದುಲಾ? ಹುಚ್ಚೇನೇ ನಿನಗೆ? ಆ ಚಹಾ.... ಯಾವ ನೀರೋ, ಸರಿಯಾಗಿ ಚಹಾ ಪೌಡರ್, ಸಕ್ಕರೆ ಹಾಕಿರುತ್ತಾರೋ ಇಲ್ವೋ? ಇನ್ನು ಅವರು ಕುಳಿತಿರುವ ಜಾಗ ನೋಡು.. ಕೊಳಕು! ನಿನಗೇನೋ ಆಗಿದೆ. ಅಲ್ಲಿ ಕುಳಿತು ಕುಡಿದರೆ, ಅದೂ ಆ ಚಹ! ರೋಗ ಬರುತ್ತದೆ ಅಷ್ಟೇ!" ಎಂದ.

"ಆದರೆ ಆ ಸಂತೋಷ ನೋಡಿ, ಅಷ್ಟು ಮನಃಪೂರ್ವಕವಾಗಿ ಯಾವತ್ತು ನಕ್ಕಿದ್ದೇವೆ ನಾವು? ಎಲ್ಲಾ ಇದೆ... ಆದರೂ.." ಎನ್ನುತ್ತಿದ್ದಂತೆ ಕಣ್ಣಿನಿಂದ ಎರಡು ಹನಿಗಳು ಉರುಳಿದವು. "ನನಗ್ಯಾಕೋ ಬೇಜಾರು!" ಅನ್ನುವ ಉದ್ಗಾರ ಅವಳ ಬಾಯಿಂದ ಮತ್ತೆ ಹೊರಟಾಗ ಶಶಿ ಅವಾಕ್ಕಾದ.....

***

ಎಲ್ಲಿ ಹೋದರು ತಿಪ್ಪೆ ದೇವರು

- ಶಾಂತಾ ನಾಗಮಂಗಲ

ಅಂದು ಎಂದೋ ತಂದು ತಂಗಳುಪೆಟ್ಟಿಗೆಯಲ್ಲಿಟ್ಟು ಮರೆತಿದ್ದ ಮೆಂತ್ಯಸೊಪ್ಪಿನ ಕಂತೆಯ ಆವಿಷ್ಕಾರ ಧೀಢೀರ್ ಅಂತಾ ಆಯ್ತು. ಅಯ್ಯೋ ಹೋಯ್ತಲ್ಲಾ ಅನ್ಯಾಯವಾಗಿ.. ಹಾಳಾದ್ದು ಮರೆವು. ಈ ಫ್ರಿಡ್ಜ್ ತುಂಬಾ ಕಿಷ್ಕಿಂಧಾ ಪಟ್ಣ. ಅದಕ್ಕೇ ಹೀಗೆ ಕಾಣದೇ ಹೋದದ್ದು.. ಅಂತಾ ನನ್ನವರ ಮುಂದೆ ಹೋಗಿ ನಿಂತು ಅಲವತ್ತುಕೊಳ್ತಾ ಇದ್ದೆ. ಬೆಳಗಿನ ತಿಂಡಿಯನ್ನು ಗಡದ್ದಾಗಿ ತಿಂದು, ಉಯ್ಯಾಲಾಸನದಲ್ಲಿ ಆಸೀನರಾಗಿ, ವಿಷ್ಣುವಿನಂತೆ ಊಂಜಲ್ ಸೇವೆ ಮಾಡಿಕೊಳ್ಳುತ್ತಾ ದೇಶ-ವಿದೇಶದ ಸಮಸ್ಯೆಗಳ ಮಹಾಪೂರದಲ್ಲಿ ಮುಳುಗಿ, ಅವುಗಳಿಗೆ ಪರಿಹಾರ ಹೇಗೆ ಎಂದು ಯೋಚಿಸುತ್ತಾ ಧ್ಯಾನಮಗ್ನರಾಗಿದ್ದ (ಪಾಪ ತೂಕಡಿಸುತ್ತಾ ಅಂತ ಮಾನಕಳಿಯೋದ್ಯಾಕೆ) ನನ್ನವರು ಕಣ್ತೆರೆದು ನೋಡಿ, "ಆ.. ಹೋದ್ರೆ ಹೋಯ್ತು, ತಿಪ್ಪೆಗೆಸಿ" ಅಂತಾ ಈ ಮೆಂತೆಸೊಪ್ಪಿನ ಸಮಸ್ಯೆಗೆ ಪರಿಹಾರ ಸೂಚಿಸಿ ಮತ್ತೆ ಪೇಪರ್ ಪ್ರಪಂಚ ಪರ್ಯಟನೆಯಲ್ಲಿ ತೊಡಗಿದರು. ನಾನು ತೆಪ್ಪಗೆ ಒಳಗೆ ಹೋದೆ.

ಆದರೆ ಈಗ ನನಗೆ ಮೆಂತ್ಯದ ಸೊಪ್ಪು ಕೊಳೆತು ಹಾಳಾದ ಚಿಂತೆಗಿಂತ ತಿಪ್ಪೆಯ ಚಿಂತೆ ಶುರುವಾಯ್ತು ನೋಡಿ. ನನ್ನವರೇನೋ ಸುಲಭವಾಗಿ ತಿಪ್ಪೆಗಿಸಿ ಎಂದುಬಿಟ್ರು. ಎಲ್ಲಿಂದ ತರೋದು ತಿಪ್ಪೆನಾ? ಕೊನೆಯಪಕ್ಷ ಪತಿಯ ಈ ಒಂದು ಅಣತಿಯನ್ನಾದರೂ ಪಾಲಿಸಬೇಡವೇ? ಈ ಬೆಂಗಳೂರಿನ ನೆಲ ಎಂದರೆ ಮಣ್ಣು ಎನ್ನುವದನ್ನೇ ಮರೆಸುವಂತ ಸಿಮೆಂಟ್ ಆಚ್ಛಾದಿತ ಪೋರ್ಟಿಕೋ, ಕಾಸಗಲದ ಹಿತ್ತಲು ಅಥವಾ ಹಿತ್ತಲೇ ಇಲ್ಲದೆ, ಬಾಲ್ಕನಿಗಳೇ ಹಿತ್ತಲಾಗಿರುವ ಮನೆಗಳಲ್ಲಿ ತಿಪ್ಪೆಗುಂಡಿ ಇರಲು ಸಾಧ್ಯವೇ? "ಹಿತ್ತಲಿಲ್ಲದವರಿಗೆ ಹಿರಿತನವಿಲ್ಲ" ಅಂತಾ ಒಂದು ಗಾದೇನ ನಮ್ಮಮ್ಮ ಯಾವಾಗಲೂ ಹೇಳೋಳು. ಒಂದು ದೊಡ್ಡ ಮೂರಂಕಣದ ಮನೇನೇ ಕಟ್ಟಬಹುದಾದಷ್ಟು ದೊಡ್ಡ ಹಿತ್ತಲಿನ ಒಡತಿ. ಅವಳಿಗೇನು ಗೊತ್ತು, ಈಗ ಹಿರಿತನವೆಲ್ಲಾ ಕಟ್ಟಿದ ಮನೆಯ ಚದುರಡಿಗಳಿಗೆ ಸುರಿಯುವ ತಾರುಮಾರಾದ ಕಾಸಿನ ಲೆಕ್ಕದಲ್ಲಿ ಅಂತಾ. ಸದ್ಯಕ್ಕೆ ನಾನು, ಕೊಳೆತ ಸೊಪ್ಪಿನ ಕಂತೆಯನ್ನು ಆಧುನಿಕರ ಪರಿಭಾಷೆಯಲ್ಲಿ ಡಸ್ಟ್‌ಬಿನ್ ಆಗಿರೋ ನಮ್ಮ ಮನೆಯ ತಿಪ್ಪೆಗೆ ಅದರಲ್ಲೂ ಹಸಿ ಕಸದ ಡಬ್ಬಕ್ಕೆ ಹಾಕಿ ಕೈತೊಳೆದುಕೊಂಡೆ. ಈಗೆಲ್ಲಾ ನಮಗೆ ಬೇಡದ್ದನ್ನು "ಡಸ್ಟ್‌ಬಿನ್‌ಗೆ ಹಾಕು" ಅಥವಾ ಅಚ್ಚ ಕನ್ನಡದಲ್ಲಿ "ಕಸದ ಡಬ್ಬ"ಕ್ಕೆ ಹಾಕು ಅನ್ನೋ ಪ್ರಯೋಗವೇ ಜಾಸ್ತಿ. ಆದರೆ ಬಹಳ ದಿನಗಳ ನಂತರ ಈ "ತಿಪ್ಪೆ" ಶಬ್ದದ ಪ್ರಯೋಗ ಕೇಳಿ ನನ್ನ ಮನೋಬುದ್ಧಿಗಳು ಆ ಪದದ ಸುತ್ತಲೇ ಸುತ್ತುತ್ತಾ ಕೋಳಿಯಂತೆ ತಿಪ್ಪೆ ಕೆದಕುವ ಕೆಲಸ ಮಾಡತೊಡಗಿದವು.

ಹಿಂದೆಲ್ಲಾ ಮನೆ ಮುಂದಗಡೆ ಅಂಗಳ ಅಂತಾ ಇಲ್ಲದೇ ಹೋದರೂ, ಚಿಕ್ಕದೋ ದೊಡ್ಡದೋ ಮನೆಗೊಂದು ಹಿತ್ತಲು ಇದ್ದೇ ಇರ್ತಾ ಇತ್ತು. ಹಿತ್ತಲಿನ ಒಂದು ಮೂಲೆಯಲ್ಲಿ ಒಂದು ತಿಪ್ಪೆಗುಂಡಿಯೂ ಇರ್ತಿತ್ತು. ಹೆಸರೇ ಹೇಳೋ ಹಾಗೆ ಇದು ಒಂದು ಗುಂಡಿ. ಅವರವರ ಅಗತ್ಯಕ್ಕೆ ತಕ್ಕಂತೆ ಅದರ ಆಳ ಅಗಲ. ಒಟ್ಟಲ್ಲಿ ಒಂದು ಗುಂಡಿ. ದನಕರು ಇರೋರ ಮನೆಯಾದರೆ ದಿನಾ ದಿನಾ ಮಂಕರಿ, ಮಂಕರಿ ಸಗಣಿ, ಗಂಜಲ, ಕೊಟ್ಟಿಗೆ

ಗುಡಿಸಿದ ಕಸ –ಇಷ್ಟೂ ಹಿಡಿಬೇಕು. ಅಲ್ಲದೇ ಅದು ಕಡಿಮೆ ಅಂದರೆ ಒಂದು ವರ್ಷದಷ್ಟು ಕಾಲವದರೂ ಅಲ್ಲೇ ಕೊಳೆತು ಗೊಬ್ಬರ ಆಗಬೇಕು. ಆಮೇಲೆ ಅದನ್ನು ತಮ್ಮ ತಮ್ಮ ಹೊಲ ಗದ್ದೆ ತೋಟಗಳಿಗೆ ಹೊಡೆಸಬೇಕು. ಅಲ್ಲಿಯವರೆಗೆ ಅಷ್ಟು ಕಸದ ರೂಪದ ರಸವನ್ನು ಹಿಡಿದಿಟ್ಟುಕೊಳ್ಳುವಷ್ಟು ಆಳ ಅಗಲ ಬೇಕಾಗ್ತಿತ್ತು. ಅದಕ್ಕೆ ಸಾಧಾರಣವಾಗಿ ಒಂದಾಳುದ್ದದ ಗುಂಡಿಯನ್ನು ತೋಡಿಸಿ ಈ ಕೊಟ್ಟಿಗೆ ಕಸ ಒಟ್ಟು ಮಾಡ್ತಾ ಇದ್ರು. ಒಂದು ಗುಂಡಿ ತುಂಬ್ತಿದ್ದಂತೆ ಅದರ ಮೇಲೆ ಮಣ್ಣು ಹೊಡೆಸಿ, ಗೊಬ್ಬರವಾಗೋದಕ್ಕೆ ಬಿಟ್ಟು, ಇನ್ನೊಂದು ಗುಂಡಿಗೆ ಕಸ ಸುರಿಯಾಕೆ ಶುರು ಮಾಡೋರು. ಯಾವ ಕೃಷಿಇಲಾಖೆಯ, ಕೃಷಿಪದವೀಧರರ ಸಲಹೆ, ಕಿವಿಮಾತುಗಳಿಲ್ಲದೆಯೇ ಅನುಭವದಿಂದಲೇ ಕಲಿತ ಕಸದಿಂದ ರಸದ, ಜೀವರಸದ ಪಾಠದ ಅನುಷ್ಠಾನ.

ಈ ತಿಪ್ಪೆಗುಂಡಿ ಮುಖ್ಯವಾಗಿ ದನ ಎಮ್ಮೆಯ ಸಗಣೀನ ಒಟ್ಟು ಮಾಡಿ ಕೊಳೆಸಿ ಕೊಟ್ಟಿಗೆ ಗೊಬ್ಬರವಾಗಿಸೋ ಜಾಗವೇ ಆಗಿರ್ತಿತ್ತು. ಈಗೆಲ್ಲಾ ಈ ಕೊಟ್ಟಿಗೆ ಗೊಬ್ಬರದ ಬೆಲೆ ಗಗನಕ್ಕೇರಿದೆ ಅಂತಾ ಓದಿದ ನೆನಪು. ಈ ಕಸದ ಗುಂಡಿಗೆ ತಿಪ್ಪೆಗುಂಡಿ ಅಂತಾ ಹೆಸರು ಬರಕ್ಕೂ ಈ ದನದ ಸಗಣಿನೇ ಕಾರಣ ಇರಬೇಕು ಅನ್ಸತ್ತೆ. ಸಗಣಿಗೆ ತೊಪ್ಪೆ ಅಂತಲೂ ಕರಿಯೋದುಂಟಲ್ಲಾ. ತೊಪ್ಪೆಯನ್ನು ಹಾಕೋ ಗುಂಡಿ ತೊಪ್ಪೆ ಗುಂಡಿ. ಕ್ರಮೇಣ ತಿಪ್ಪೆಗುಂಡಿ ಆಗಿರಬಹುದೇ? ಇರಬೇಕು. ಏಕೆ ಅಂತೀರಾ? ಊರಿನ ಬೀದಿಯಲ್ಲಿ ಅಲ್ಲಲ್ಲಿ ಮುನಿಸಿಪಾಲಿಟಿಯೋರು ಇಟ್ಟಿರ್ತಿದ್ದ ಕಸ ಹಾಕೋ ತೊಟ್ಟಿಗಳಿಗೆ ಕಸದತೊಟ್ಟಿ ಅಂತಾಲೇ ಕರೀತಿದ್ದರೆ ಹೊರ್ತು ತಿಪ್ಪೆಗುಂಡಿ ಅಂತಿರಲಿಲ್ಲ. ಆ ಕಸದ ತೊಟ್ಟಿಗಳನ್ನು ಎರಡು ಮೂರು, ಅಬ್ಬಬ್ಬಾ ಅಂದರೆ ಒಂದು ವಾರಕ್ಕೊಮ್ಮೆಯಾದರೂ ಮುನಿಸಿಪಾಲಿಟಿ ಯವರು ಖಾಲಿ ಮಾಡಬೇಕಾಗ್ತಿತ್ತು. ಇಲ್ಲ ಅಂದರೆ ಹಾದಿ ಬೀದಿಲೆಲ್ಲಾ ರಂಪ. "ಘಂ ಅಂತಾ ಬರ್ತಾ ಇದೆ ಕಾರ್ಪೋರೇಶನ್ ಲಾರಿ.." ಅನ್ನುವಂತೆ ಮೂಗು ಮುಚ್ಚಿ ಓಡಾಡಬೇಕಾಗ್ತಿತ್ತು. ಆದರೆ ಹಿತ್ತಲಲ್ಲಿ ಇರ್ತಿದ್ದ ತಿಪ್ಪೆಗುಂಡಿ ಮಾತ್ರ ವಿಶ್ವೋದರನಾದ ಭಗವಂತನಂತೆ ಎಲ್ಲವನ್ನೂ ಸ್ವಾಹಾ ಮಾಡ್ತಾ, ಬಾಯಿ ತೆಕ್ಕೊಂಡು ಕೂತಿರ್ತಿತ್ತು ವರ್ಷವಾದರೂ. ವರ್ಷ ಕಳೀತಿದ್ದ ಹಾಗೆ, ಹಸನಾದ ಕೊಟ್ಟಿಗೆ ಗೊಬ್ಬರ ರೆಡಿ. ಹೊಲ ಗದ್ದೆ ತೋಟಗಳಿಗೆ ಗೊಬ್ಬರ ಹೊಡಸೋ ಕೆಲಸ ಶುರು. ಅದಕ್ಕೇ ಅಂತಲೇ ಆಯಾ ಊರುಗಳಲ್ಲಿ ಕೆಲವರು ಎತ್ತಿನಗಾಡಿ ಇಟ್ಟಕೊಂಡಿರ್ತಿದ್ರು. ಅವರು ಬಂದು ತಿಪ್ಪೆಗೊಬ್ಬರ ಸಾಗಿಸೋ ದಿನ ಊರಿನ ಹೈಕಳುಗಳಿಗೆ ಸಡ್ಡೆಯೋ ಸಡ್ಡೆ. ಯಾರ ಮನೆ ತಿಪ್ಪೆಗೊಬ್ಬರ ಎತ್ತಸೋದಿದ್ರು, ಅದೆಲ್ಲಿಂದ ವಾಸನೆ ಬರ್ತಾ ಇತ್ತೋ, ಊರ ಹೈಕಳಗಳೆಲ್ಲಾ ತಿಪ್ಪೆ ಸುತ್ತ ಕುಕ್ಕುರುಗಾಲಲ್ಲಿ ಕೂತು, ತಾವು ಎಂದೋ ಸುರಿದ ಯಾವ್ಯಾವುದೋ ರೀತಿಯ ಕಸವೆಲ್ಲಾ ಮಣ್ಣಾಗಿ ಹೋಗುವ ನೈಸರ್ಗಿಕ ವಿಸ್ಮಯವನ್ನು, ಅದರ ಹಿಂದೆ ಯಾರ ಕೈವಾಡವಿದೆ ಎಂಬುದನ್ನು ಕಣ್ಣಾರೆ ಕಾಣುವ ಕುತೂಹಲ. ಈ ಹೈಕಳ ಜೊತೆಗೆ ಅವುಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಕಾಗೆಗಳ ದಂಡು. ಇವಕ್ಕೇನು ಇಲ್ಲಿ ಕೆಲಸ ಅಂತೀರಾ? ಕಸವನ್ನು ರಸವಾಗಿಸುವ ಏಜೆಂಟ್ ತಿಪ್ಪೆಹುಳುಗಳನ್ನು ತಿನ್ನೋ ಆಸೆ ಅವುಗಳಿಗೆ. ಮಕ್ಕರಿಯಲ್ಲಿ ಹಾಕ್ಕಕ್ಕೆ ಅಂತಾ ಒಂದು ಬಾರಿ ಗೊಬ್ಬರವನ್ನು ಎಲೆಗುದ್ದಲಿಯಿಂದ ಎತ್ತಿದರೆ ಸಾಕು ಬೆಳ್ಳನೆಯ ಕರಿಮೂತಿಯ ಬುಡ್ಡನೆಯ ಹುಳುಗಳು ಪುತು ಪುತು ಅಂತಾ ಹೊರಕ್ಕೆ ಬರ್ತಾ ಇದ್ವು. ಕಾದು ಕೂತಿರುತ್ತಿದ್ದ ಕಾಗೆಬಳಗಕ್ಕೆ ಅವತ್ತು ತಾಜ್ ಶೆರಟಾನ್‌ನ ಸ್ಪೆಷಲ್ ಮೀಲ್. ಒಟ್ಟಲ್ಲಿ ಅಂದು ತಿಪ್ಪೆದೇವರ ಸನ್ನಿಧಿಯಲ್ಲಿ ಪರಿಷೆ ಕೂಡಿದಂತೆ ಹುಯ್ಲೋ ಹುಯ್ಲು.

ಅಂದಹಾಗೆ, ಗೋವನ್ನು ತಾಯಿಯಾಗಿ, ಎತ್ತನ್ನು ಬಸವಣ್ಣನಾಗಿ ಕಾಣುವ, ಗೌರವಿಸುವ, ಹಸುವಿನ ಸಗಣಿಯಿಂದಲೇ ಪಿಳ್ಳಾರಿ ಗಣಪನನ್ನು ಮಾಡಿ ಎರಡು ಗರಿಕೆ ಹುಲ್ಲು ಸಿಕ್ಕಿಸಿ ಪೂಜಿಸುವ ಭಾವುಕರಾದ ನಮಗೆ ಮುಖ್ಯವಾಗಿ ಹಸು–ಎತ್ತುಗಳು ಉತ್ಪಾದಿಸುವ ಕಸವನ್ನು ತುಂಬುವ ಗುಂಡಿಯನ್ನು ಸಮಯ ಬಂದಾಗ ತಿಪ್ಪೆದೇವರು ಎಂದು ಗೌರವಿಸುವುದರಲ್ಲಿ ಅಚ್ಚರಿ ಏನಿದೆ ಹೇಳಿ? ಈಗಿನ ಎಳೆಯರಿಗೆ ಈ ಭಾವುಕತೆ, ಅಂತಹ ವಾತಾವರಣವನ್ನೇ ಕಾಣದವರಿಗೆ ಬರಲು ಸಾಧ್ಯವೇ?

ಈ ತಿಪ್ಪೆಗಳಿದ್ದ ಕಾಲದಲ್ಲಿ ಕಸದ ಸಮಸ್ಯೆ ಬಹುಪಾಲ ಇರಲೇ ಇಲ್ಲ ಎನ್ನಬಹುದು. ಅಲ್ಲದೇ ನಾವೆಲ್ಲಾ ನಾಗರಕರಾದೆವು ಅನ್ನುವ ಹೆಸರಿನಲ್ಲಿ ಬಗೆಬಗೆಯ ಕಸಗಳನ್ನು ಹುಟ್ಟಿಸಿ ಕಸವನ್ನು ಒಂದು ಸಮಸ್ಯೆಯಾಗಿಸಿ, ಅದರ ವಿಲೇವಾರಿಗೆ ಸಂಬಂಧಿಸಿದಂತೆ ಲಂಚ ರುಷವತ್ತಿನ ಮಾಫಿಯಯಾವನ್ನು ಸೃಷ್ಟಿಸಿದ್ದೀವಲ್ಲಾ. ಹಿಂದೆಲ್ಲಾ ಒಂದೊಂದು ಮನೆಯಲ್ಲಿ ಬೀಳ್ತಿದ್ದ ಕಸವೆಲ್ಲಾ ಕಾಸು ಖರ್ಚಿಲ್ಲದೆ ಅವರವರ ಹಿತ್ತಲಲ್ಲೋ, ಅಥವಾ ಕಾಂಪೌಂಡಲ್ಲಿ ಹಾಕಿರುತ್ತಿದ್ದ ನಾಲ್ಕಾರು ಹೂಗಿಡಗಳ ಬುಡದಲ್ಲೋ ಗೊಬ್ಬರವಾಗಿ, ಹೂವಾಗಿ, ಕಾಯಾಗಿ ತನಿರಸವಾಗಿಬಿಡುತ್ತಿತ್ತು. ಅಲ್ಲದೆ ಬಾಳೆಎಲೆ ದೊನ್ನೆ, ಮುತ್ತುಗದೆಲೆ, ಅಡಿಕೆಹಾಳೆ – ಇಂಥವುಗಳಲ್ಲೇ ಅಲ್ಲವೇ ತಿಂದು, ಕುಡಿದು ಮಾಡ್ತಾ ಇದ್ದದ್ದು. ದೇವಸ್ಥಾನ, ಭಜನೆ ಮಠಗಳಲ್ಲಿ ಚರಪುಗಿರುಪು ಕೊಡ್ತಾ ಇದ್ದದ್ದು? ತಿಂದು ಎಲ್ಲಿ ಬಿಸಾಕಿದರೂ ಸದ್ದಿಲ್ಲದೆ ನೆಲದಾಯಿ, ಬೀದಿಯಲ್ಲಿ ಅಕಸ್ಮಾತ್ತಾಗಿ ಅನಾಥರಂತೆ ಬಿದ್ದಿರುವ ಮಕ್ಕಳನ್ನು ತನ್ನ ತೋಳೊಳಕ್ಕೆ ಎಳೆದುಕೊಳ್ಳುವಂತೆ ಎಳೆದುಕೊಂಡು ಬಿಡ್ತಾ ಇದ್ಲು. ಈ ಪಾಟಿ ಪ್ಲಾಸ್ಟಿಕ್ ಬಳಕೆ, ಬಗೆಬಗೆಯ ಪ್ಯಾಕೇಜಿಂಗ್ ವಸ್ತುಗಳು ಇಲ್ಲದಿದ್ದಾಗ, ಹಸಿಕಸ ಒಣಕಸಗಳ ವಿಂಗಡನೆಯ ರಗಳೆಯೇ ಇರಲಿಲ್ಲ. ಬಹುಪಾಲು ಹಸಿಕಸವೇ. ಅವೇ ತಿಪ್ಪೇದೇವರಿಗೆ ನಿತ್ಯ ನೈವೇದ್ಯವಾಗಿಬಿಡುತ್ತಿದ್ದವು. ಇನ್ನು ತೆಂಗಿನಕಾಯಿಯ ಕರಟ, ಮೊಟ್ಟೆ, ಕಾಗದದ ರಟ್ಟಿನಂತಹವು ಬಚ್ಚಲಲ್ಲಿರುತ್ತಿದ್ದ ನೀರೊಲೆ ಅನ್ನುವ ಯಜ್ಞೇಶ್ವರನ ಹವಿಸ್ಸಾಗಿ ಅರ್ಪಿತವಾಗುತ್ತಿದ್ದವು. ಇನ್ನು ಮನೆ ಮನೆ ಕಸದ ವಿಲೇವಾರಿಯ ಪ್ರಶ್ನೆ ಎಲ್ಲಿ ಬಂತು? ಲಂಬೋದರನಾಗಿ, ವಿಶ್ವೋದರನಂತೆ ನಾವು ಹುಟ್ಟುಹಾಕಿದ ಕಸವನ್ನು ತನ್ನ ಉದರದಲ್ಲಿ ವರ್ಷಗಟ್ಟಲೆ ಇಟ್ಟುಕೊಂಡು ಜೀರ್ಣಿಸಿ, ರಸವಾಗಿಸಿ ನಮಗೇ ಕೊಡುಗೆಯಾಗಿ ಕೊಡುತ್ತಿದ್ದ ತಿಪ್ಪೆಗುಂಡಿಯನ್ನು ತಿಪ್ಪೇದೇವರು ಎಂದು ನಮ್ಮ ಹಿರಿಯರು ಕರೆದದ್ದರಲ್ಲಿ ಅಚ್ಚರಿಯೇನಿಲ್ಲ ಅಲ್ಲವೇ?

ಅಷ್ಟೇಕೆ ನಮ್ಮಲ್ಲಿ ಈ ತಿಪ್ಪೆ ವಿಶೇಷಣದ ಹೆಸರನ್ನು ವ್ಯಕ್ತಿಗಳಿಗೆ ಇಡೋ ಪದ್ಧತಿಯೂ ಇದೆಯಲ್ಲವೇ? ತಿಪ್ಪೇಸ್ವಾಮಿ, ತಿಪ್ಪೇರುದ್ರಸ್ವಾಮಿ ಮುಂತಾಗಿ ತಿಪ್ಪಣ್ಣ, ತಿಪ್ಪಮ್ಮರೂ ಇದ್ದಾರೆ. ಬೇಡ ಅಂತಾ ಮೂಲೆಗೆ ತಳ್ಳಿದ ಕಸ ಬೆಳೆದು ರಾಶಿಯಾಗುವಂತೆ, ಹುಟ್ಟಿದ ಮಕ್ಕಳು ಹೇಗಾದರೂ ಚೆನ್ನಾಗಿ ಬದುಕಿ ಬಾಳಲಿ, ಎತ್ತರೆತ್ತರಕ್ಕೆ ಬೆಳೆಯಲಿ ಅಂತಾ ಹೀಗೆ ಹೆಸರಿಡೋರು ಅಂತಾ ನಮ್ಮ ಮುತ್ತಜ್ಜಿಯ ಬಾಯಲ್ಲಿ ಕೇಳಿದ್ದೆ. ತಮಿಳಲ್ಲೂ 'ವದಕ್ಕಿನ ಕುಪ್ಪೆ ವಸರುಂ' ಅಂದರೆ 'ಒತ್ತರಿಸಿದ ಕಸ ವರ್ಧಿಸುತ್ತೆ' ಅನ್ನೋ ಗಾದೆ ಮಾತಿದೆ. ತಮಿಳರೂ ಕುಪ್ಪುಸ್ವಾಮಿ, ಕುಪ್ಪಮ್ಮಾಳ್ ಎಂದೆಲ್ಲಾ ಹೆಸರಿಡುವುದುಂಟು. ಅಲ್ಲಿಯೂ ಕುಪ್ಪೆ – ಅಂದರೆ ಕಸ ಎಂದೇ ಅರ್ಥ. ಬಹುಶಃ ಅವು ನಮ್ಮ ತಿಪ್ಪಮ್ಮ, ತಿಪ್ಪಣ್ಣಗಳಂತಿರಬಹುದೇನೋ. ತಿಪ್ಪೇಸ್ವಾಮಿಯ ರೂಪದಲ್ಲಿ ಶಿವನ ಆರಾಧನೆಯೂ

ನಮ್ಮಲ್ಲಿರುವುದರಿಂದ ಅದು ಪರ್ಯಾಯವಾಗಿ ಶಿವನ ಹೆಸರೇ ಆಗಿರುತ್ತಿತ್ತು ಕೂಡ. ತಿಪ್ಪೇರುದ್ರಸ್ವಾಮಿ ಹೆಸರಿನಲ್ಲಿ ಈಶ್ವರನ ಗುಡಿಗಳೂ ನಮ್ಮ ಕರ್ನಾಟಕದಲ್ಲಿವೆಯಲ್ಲ. ಮಾನವಕುಲದ ಒಳಿತೇ ದೇವರ ಉದ್ದೇಶವಾಗಿದ್ದಲ್ಲಿ, ತಿಪ್ಪೆಯಷ್ಟು ಮನುಕುಲದ ಒಳಿತಿನ ಸಾಧನ ಇನ್ನಾವುದಿರಲು ಸಾಧ್ಯ ಹೇಳಿ? ಶಿವ ತನ್ನ ಹೆಸರಿನೊಂದಿಗೆ ತಿಪ್ಪೆಯನ್ನು ಜೋಡಿಸಿಕೊಂಡು ಅದರ ಮಹತ್ವವನ್ನು ಮತ್ತೂ ಎತ್ತರ ಬಿತ್ತರಗೊಳಿಸಿದ್ದಾನೆ ಎನ್ನಬಹುದೇನೋ.

"ತಿಪ್ಪೆ ಸಾರಿಸೋದು" ಅನ್ನೋ ನುಡಿಗಟ್ಟಿನ ಬಳಕೆನೂ ನಮ್ಮ ಕನ್ನಡ ಭಾಷೆಯಲ್ಲಿದೆ. ಕಣ್ಣಿಗೆ ಢಾಳಾಗಿ ಕಾಣೋ ಹುಳುಕನ್ನು ಮುಚ್ಚೋ ಪ್ರಯತ್ನ ಯಾರಾದರೂ ಮಾಡ್ತಾ ಇದ್ರೆ ಅಥವಾ ಯಾವುದಾದರೂ ಒಂದು ವಿವಾದದಲ್ಲಿ ನ್ಯಾಯ ಎಲ್ಲಿದೆ ಎಂದು ಖಚಿತವಾಗಿ ಗೊತ್ತಿದ್ದೂ ಹೇಳದೆ ಗೊಣಗುಟ್ಟೋರನ್ನು ತಿಪ್ಪೆ ಸಾರಿಸಿಬಿಡ್ತಾರೆ ಅಂತಾ ದೂಷಿಸೋದುಂಟು. ಎಷ್ಟು ಪವರ್‌ಫುಲ್ ನುಡಿಗಟ್ಟು ಇದು ನೋಡಿ. ಏನ್ ಮಾಡಿದ್ರೆ ತಾನೇ ತಿಪ್ಪೆಯ ಹೊಲಸನ್ನು ಸಾರಿಸಿ ರಂಗೋಲಿ ಇಟ್ಟು ಮುಚ್ಚಕ್ಕಾಗತ್ತೆ ಹೇಳಿ? ಹಾಗೆಯೇ ಕೆಲವು ಸತ್ಯಗಳನ್ನು, ಕೆಲವು ಹುಳುಕುಗಳನ್ನು ಮುಚ್ಚಕ್ಕಾಗಲ್ಲ. ಅಂಥಹವನ್ನು ಮುಚ್ಚಿಡೋರ ಮನೋಬುದ್ಧಿಗಳು ತಿಪ್ಪೆಯೇ ಸರಿ ಎನ್ನಬೇಕಷ್ಟೆ. ಈಗ ತಿಪ್ಪೆ ಇಲ್ಲ. ಆದರೆ ತಿಪ್ಪೆಸಾರಿಸೋ ಮಂದಿ ಮಾತ್ರ ಬೇಕಾದಷ್ಟು ಸಿಗ್ತಾರೆ.

ಈ ತಿಪ್ಪೆ ಸಾರಿಸು ನುಡಿಗಟ್ಟಿನ ಮೂಲವೂ ತೊಪ್ಪೆಯೇ ಆಗಿರಬೇಕು. ಹಿಂದೆಲ್ಲಾ ಮನೆಗಳಲ್ಲಿ ಮಣ್ಣಿನ ನೆಲ ಇರ್ತಿದ್ದಾಗ, ಅದನ್ನು ಸಗಣಿ ಅಥವಾ ತೊಪ್ಪೆಯ ಮಿಶ್ರಣದಿಂದ ಸಾರಿಸ್ತಾ ಇದ್ರು. ಮಣ್ಣಿನ ನೆಲದ ಗುಂಡಿ ಹುಳುಕುಪಳುಕು ಎಲ್ಲವನ್ನೂ ಮುಚ್ಚಿಹಾಕ್ತಾ ಇತ್ತು. ಆ ನೆಲ ಸಾರಿಸೋದು ಒಂದು ಗಾರೆಕೆಲಸದ ಹಾಗೆ ಕುಶಲಕರ್ಮವೇ ಆಗಿತ್ತು ಬಿಡಿ. ಸಗಣಿಯನ್ನು ಕದಡಿ ಪಾಯಸದಷ್ಟು ಗಟ್ಟಿದ್ರವ ಮಾಡಿಕೊಂಡು, ಹಳೆ ಬಟ್ಟೆ ತುಂಡಲ್ಲಿ ಅದ್ದಿ ಅದ್ದಿ, ಮೂರಂಕಣ, ನಾಕಂಕಣದ ಮನೆಗಳನ್ನು ಶುಕ್ರವಾರ ಮಂಗಳವಾರ ಗಂಟೆಗಟ್ಟಲೆ ಸಾರಿಸಿದ್ರು ಅಂದ್ರೆ ಆ ನೆಲ ಗಚ್ಚುಗಾರೆಯ ಕೆಲಸಮಾಡಿದಂತೆ ಫಳ ಫಳ ಅಂತಾ ಮರಕತವರ್ಣದ ಪಳುಕಿನ ಕಲ್ಲು ಹಸ್ದಂತೆ ಹಳದಿಮಿಶ್ರಿತ ಹಸಿರು ಬಣ್ಣದ ಛಾಯೆಯನ್ನು ಬೀರ್ತಾ ಇತ್ತು. ಇವೆಲ್ಲಾ ಜನಜೀವನದ ಗತವೈಭವವೇ. ಮುಗಿದ ಅಧ್ಯಾಯವೇ. ಆದರೆ ಅದು ಮುಗಿದು ಹೋದದ್ದಕ್ಕೆ ಬೇಸರವೇನಿಲ್ಲ .

ಈಗ ಸಣ್ಣ ಸಣ್ಣ ಊರುಗಳಲ್ಲಿ ತಿಪ್ಪೆಗುಂಡಿಗಳು ವಿರಳವೇ ಆಗ್ತಾ ಇವೆ. ಹಳ್ಳಿಗಳಲ್ಲಿ ಹಾಲಿಗೆ ಅಂತಾ ಸೀಮೆ ದನ ಸಾಕೋದರಿಂದ, ಕೊಟ್ಟಿಗೆ ಕಸದ ವಿಲೇವಾರಿಗೆ ತಿಪ್ಪೆಗಳು ಬೇಕೇಬೇಕು. ಆದರೆ ನಗರಗಳಲ್ಲೂ ಈಗ ಮೂರು ಮಡಿಕೆಗಳ ತಿಪ್ಪೆಗಳು– ಅರ್ಥವಾಗಲಿಲ್ಲವೇ, ಹಸಿಕಸವನ್ನು ಮನೆಯಲ್ಲೇ ಗೊಬ್ಬರವಾಗಿಸಿಕೊಳ್ಳುವ ಸಾಧನಗಳು ಪ್ರಚಾರಕ್ಕೆ ಬರ್ತಾ ಇವೆ. ನಾವೂ ಒಂದನ್ನು ಇಟ್ಟುಕೊಂಡಿದ್ದೀವಿ ಅನ್ನಿ. ನಮ್ಮ ಮನೆಯ ಮುಕ್ಕಾಲು ಮೂರುಪಾಲು ಹಸಿಕಸವೆಲ್ಲಾ ಈಗ ಗೊಬ್ಬರವಾಗಿ ಗಿಡದ ಬುಡವನ್ನು ಸೇರುತ್ತಿದೆ. ಅದೇನೋ ಸರಿ. ಆದರೆ ಈ ಮಾಡರ್ನ್ ತಿಪ್ಪಮ್ಮನಿಗೆ ಉಪಚಾರ ಜಾಸ್ತಿ ಮಾಡಬೇಕು. ಇವಳಿಗೆ ಹಾಗೆಲ್ಲಾ ಕಸವನ್ನು ಹೇಗೆಂದರೆ ಹಾಗೆ ಎಸೆಯೋ ಹಾಗಿಲ್ಲ. ನಾವು ಮಾತ್ರ ಕಾಯಿಪಲ್ಲೆಗಳನ್ನು ಅಚ್ಚುಕಟ್ಟಾಗಿ ಚಚ್ಚೌಕವಾಗಿ ಕತ್ತರಿಸಿ ಬೇಯಿಸಿ, ಹುರಿದು,

ಕರಿದು, ಬಿಸಿಬಿಸಿಯಾಗಿ ತಿನ್ನೋವಾಗ ನನಗೆ ಮಾತ್ರ ಸಿಪ್ಪೆ, ಬಲಿತ ತಿರುಳು, ತಂಗಳುಪಂಗಳು ಅಂತಾ ಎಸೀತಾರೆ. ಅದೂ ಬೇಕಾಬಿಟ್ಟಿ ಅಂತಾ ಅವಳಿಗೆ ಕೋಪವೋ ಏನೋ. ತರಕಾರಿಯಂತೆ ಸಣ್ಣಗೆ ಕತ್ತರಿಸಿ ಹಾಕದಿದ್ದರೆ ಎಷ್ಟು ದಿನವಾದರೂ ತಿಂದು ಜೀರ್ಣಿಸಿಕೊಳ್ಳದೆ ಹಡತಾಳ ಮಾಡ್ತಾಳೆ. ಈಗೆಲ್ಲಾ ತರಕಾರಿ ಜೊತೆಗೆ ಸಿಪ್ಪೆಗಿಪ್ಪೆನೂ ಹೆಚ್ಚಬೇಕಾದ ಹಣೆಬರಹ ನಮ್ಮದು. ಇರಲಿ, ನಮ್ಮ ಪರಿಸರದ ರಕ್ಷಣೆಗೆ ಅಷ್ಟಾದರೂ ಮಾಡಬೇಡವೇ?

ಈ ಬಗೆಯ ಎಂಥೆಂಥ ಮಾಡರ್ನ್ ಅಪ್-ಟು-ಡೇಟ್ ತಿಪ್ಪೆಗಳೇನೇ ಬಂದರೂ, ನಾವು ಹಿಂದೆ ನೋಡಿದ್ದ ವಿಶಾಲವಾದ ಹಿತ್ತಲಮೂಲೆಯ ತಿಪ್ಪೆಗೆ ಸಮ ಆಗಲ್ಲ ಬಿಡಿ. ಆದರೆ ಎಲ್ಲಿಂದ ತರುವುದು ಹಿತ್ತಲನ್ನು. ಅಲ್ಲಿನ ತಿಪ್ಪೆದೇವರನ್ನು? ಅದು ಕಲಿಸುತ್ತಿದ್ದ ಪರಿಸರದ ಪಾಠವನ್ನು?

*****



(ಚಿತ್ರ ಕೃಪೆ: ಶ್ರೀ ಎಚ್.ಆರ್. ಗುರುರಾಜ ಶಾಸ್ತ್ರಿ)

ಆನಂದನಗರಿಯ ಆನಂದದ ದಿನಗಳು

– ಶ್ರೀಧರ ಬಾಣಾವರ

ಇತ್ತೀಚೆಗೆ ಹಿರಿಯ ಸಾಹಿತಿ ಜ್ಯೋತ್ಸ್ನಾ ಕಾಮತರ 'ಕಲ್ಕತ್ತೆಯ ದಿನಗಳು' ಕೃತಿಯನ್ನು ಓದಿದಾಗ ನನ್ನ ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಹಿಂದಿನ ಮೂರು ವರ್ಷಗಳ ಕಲ್ಕತ್ತೆಯ ವಾಸವೂ ಸಾಕಷ್ಟು ಅನುಭವಗಳಿಂದ ಕೂಡಿತ್ತೆಂಬ ನೆನಪುಗಳು ಮರುಕಳಿಸುತ್ತಾ ಹೋಗಿ, ಅದನ್ನೇಕೆ ಬರಹ ರೂಪಕ್ಕಿಳಿಸಬಾರದೆಂಬ ಯೋಚನೆ ಬಂತು. ನೆನಪುಗಳ ಬಂಡಿಯೇನೋ ವೇಗವಾಗಿ ಮರುಕಳಿಸಿದರೂ ಅದನ್ನು ಅದೇ ವೇಗದಲ್ಲಿ ಬರಹ ರೂಪಕ್ಕೆ ಅಥವಾ ಡಿಜಿಟಲ್ ರೂಪಕ್ಕೆ ಇಳಿಸಲು ಇತ್ತೀಚೆಗೆ ನಾನು ಎದುರಿಸಿದ ಆರೋಗ್ಯ ಸಮಸ್ಯೆಗಳಿಂದಾಗಿ (ಬಲಗೈ ಬಳಕೆಯ ಅಸಮರ್ಥತೆ) ಸಾಧ್ಯವಾಗದಾಯಿತು. ಈಗ ಮೊಬೈಲ್ನಲ್ಲಿ ಒಂದೇ ಬೆರಳಿನಲ್ಲಿ ಟಂಕಿಸುವ ಸಾಧ್ಯತೆಗಳನ್ನು ಕಂಡುಕೊಂಡು ನನ್ನ ಅನುಭವಗಳನ್ನು ಸ್ವಲ್ಪಸ್ವಲ್ಪವೇ ಹಂಚಿಕೊಳ್ಳುವ ಪ್ರಯತ್ನದಲ್ಲಿದ್ದೇನೆ.

ನನ್ನ ಬ್ಯಾಂಕಿನ ವೃತ್ತಿಗೆ ಸಂಬಂಧಿಸಿದಂತೆ ನಾನು ಮೂರು ವರ್ಷಗಳ ಕಾಲ ಕಲ್ಕತ್ತೆಯಲ್ಲಿರಬೇಕಾಯಿತು. ಸಾಮಾನ್ಯವಾಗಿ ದಕ್ಷಿಣದ ರಾಜ್ಯಗಳಿಂದ ಅದರಲ್ಲೂ ಕರ್ನಾಟಕದಿಂದ ಕಲ್ಕತ್ತೆಗೆ ವರ್ಗವಾಗುವ ಯಾವುದೇ ವ್ಯಕ್ತಿ ಅಲ್ಲಿ ಕಳೆಯಬೇಕಾಗುವ ಸಮಯವನ್ನು ವನವಾಸದಂತೆ ಪರಿಗಣಿಸಿ ಅಸಂತೋಷದಿಂದಲೇ ಸೇವೆಸಲ್ಲಿಸಿ ಹಿಂತಿರುಗುವ ಸಂಭವಗಳೇ ಹೆಚ್ಚು. ಇದಕ್ಕೆ ಕಾರಣಗಳು ಅನೇಕವಿವೆ. ಅವೆಲ್ಲವೂ ಸಂದರ್ಭಾನುಸಾರ ನನ್ನ ಲೇಖನ ಸರಣಿಯಲ್ಲಿ ಅನಾವರಣಗೊಳ್ಳುತ್ತಾ ಹೋಗುವ ಸಾಧ್ಯತೆಗಳಿವೆ. ನನಗೆ ಅಲ್ಲಿಯ ವೃತ್ತಿ ಸಂಬಂಧಿತ, ಕೌಟುಂಬಿಕ ಜೀವನ, ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ, ಪ್ರವಾಸಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅನುಭವಗಳು ನಿಜಕ್ಕೂ ಸಂತೋಷಮಯವಾಗಿದ್ದವು. ನನಗೆ ದೊರಕಿದ ಅನೇಕ ಸಂಘಟನೆಯ ಅವಕಾಶಗಳು ನಿಜಕ್ಕೂ ನನ್ನ ಅನುಭವದ ಪರಿಧಿಯನ್ನು ವಿಸ್ತರಿಸಿದವು. ನನ್ನ ಕಲ್ಕತ್ತದ ಮೂರು ವರ್ಷಗಳ ವಾಸವನ್ನು, ನಾನು ಮೆಚ್ಚಿದ ಆಂಗ್ಲ ಕಾದಂಬರಿ ಡೊಮಿನಿಕ್ ಲೇಪಿಯರ್ ರಚಿತ 'ಸಿಟಿ ಆಫ್ ಜಾಯ್'ನ ಕನ್ನಡ ರೂಪ 'ಆನಂದನಗರಿಯ ಆನಂದದ ದಿನಗಳು' ಎಂದು ಉಲ್ಲೇಖಿಸಲು ಇಚ್ಛಿಸುತ್ತೇನೆ.

ಸಧ್ಯದಲ್ಲಿ ನನ್ನ ಅನುಭವಗಳನ್ನು ತುಂಡು ಘಟನೆಗಳಾಗಿ ಕಾಲಾನುಕ್ರಮಕ್ಕೆ ಅಂಟಿಕೊಳ್ಳದೇ ನಿರೂಪಿಸುತ್ತಾ ಹೋಗಬಯಸುತ್ತೇನೆ. ಇದರ ಮೊದಲ ಕಂತು ಇಲ್ಲಿದೆ:

ಭಾಷೆಯ ಗೊಂದಲ: ಕಾಲಿಗೆಡವಿದ ಪರಿಹಾರ

ಒಮ್ಮೆ ನನ್ನ ಪ್ರೀತಿಯ ತರಕಾರಿ ಬೂದುಗುಂಬಳದ ಮಜ್ಜಿಗೆಹುಳಿ ತಿನ್ನುವ ಬಯಕೆಯಾಯಿತು. ಬಂಗಾಲಿ ಅಥವಾ ಹಿಂದಿಯಲ್ಲಿ ಅದರ ಹೆಸರು ತಿಳಿಯುವ ಪ್ರಯತ್ನ ಮೊದಲು ಮಾಡಿದೆ. ಶಾಲೆಯಲ್ಲಿ ಕಲಿತ ಹಿಂದಿಯ "ಕದ್ದೂ" ಪದ ನನಗಿಷ್ಟವಾಗದ ಸಿಹಿಗುಂಬಳದ ಬಳಿಗೆ ಕರೆದೊಯ್ಯಿತು. ನಾನು ಕೊಟ್ಟ ವಿವರಣೆಗಳು ಅಂಗಡಿಯವರಿಗೆ ಅರ್ಥವಾಗಲೇ ಇಲ್ಲ. ಸಾವಿರದ ಒಂಬೈನೂರರ ಕೊನೆಯ ವರ್ಷಗಳು ಅವು. ಹಾಗಾಗಿ

ಗೂಗಲಜ್ಜಿ ಎಂಬುವವಳೊಬ್ಬಳು ಮುಂದೆ ಬರಬಹುದು ಎಂಬ ಕಿಂಚಿತ್ ಸುಳಿವೂ ಆಗ ಇರಲಿಲ್ಲ. ವಿಶ್ವದ ತಂತ್ರಜ್ಞಾನಿಗಳೆಲ್ಲರೂ 'ವೈಟುಕೆ' (Y2K) ಸಮಸ್ಯೆಗೆ ಪರಿಹಾರ ಹುಡುಕುವುದರಲ್ಲಿ ತೊಡಗಿಕೊಂಡಿದ್ದರು. ಮನೆಯ ಬಳಿಯ ಯಾವ ತರಕಾರಿ ಅಂಗಡಿಯಲ್ಲೂ ನನಗೆ ಬೇಕಾದ ಕುಂಬಳ ಕಾಣುತ್ತಿರಲಿಲ್ಲ. ಒಮ್ಮೆ ಸ್ವಲ್ಪ ದೂರದಲಿದ್ದ ಮಾರ್ಕೆಟ್‌ನಲ್ಲಿನ ಅಂಗಡಿಯೊಂದರಲ್ಲಿ ಬೂದುಗುಂಬಳವನ್ನು ಕಂಡು ಖುಷಿಯಾಯಿತು. ಮೊದಲು ಅದರ ಬಂಗಾಳಿ ನಾಮಧೇಯವನ್ನು ತಿಳಿಯುವ ಕುತೂಹಲದಿಂದ ಅಂಗಡಿಯವನನ್ನು ಅದರ ಸ್ಥಳೀಯ ಹೆಸರನ್ನು ಕೇಳಿದೆ. ಯೇ ಕುಂಬಡಾ ಹೈ ಎಂದು ಅವನು ಹೇಳಿದಾಗ ನಾನು ಬೇಸ್ತು ಬಿದ್ದೆನಲ್ಲಾ ಎನಿಸಿತು. ನನಗೆ ಪರಿಚಿತ ಕನ್ನಡ ಪದ ಕುಂಬಳವನ್ನು ಬಳಸುವುದನ್ನೇ ಇದುವರೆಗೆ ಮರೆತುಬಿಟ್ಟಿದ್ದೆ. ಅಂತೂ ನನಗೆ ಬೇಕಾದ ಬೂದುಗುಂಬಳ 'ಕುಂಬಡಾ' ಆಗಿ ದೊರೆಯಿತು.

ಮತ್ತೊಮ್ಮೆ ಸಾಮಾನು ಕಟ್ಟಲು ಬಳಸುವ ಪುಂಡಿ ಹುರಿ ಬೇಕಾಗಿತ್ತು. ಅದನ್ನು ಸೆಣಬಿಂದ ಮಾಡುತ್ತಾರೆಂಬ ತಿಳುವಳಿಕೆ ಇತ್ತು. ಸೆಣಬಿನ ತವರೇ ಬಂಗಾಳವಲ್ತೆ. ಸಮೀಪದ ಅಂಗಡಿಯಲ್ಲಿ ನನಗೆ ತಿಳಿದ ಜ್ಞಾನವನ್ನೆಲ್ಲಾ ಬಳಸಿ ವಿವರಿಸಿದೆ. ಪ್ರಯೋಜನವಾಗಲಿಲ್ಲ. ಬಾಂದ್ನೇಕಾ, ರಸ್ಸಿ, ಜೂಟ್(ಸೆಣಬು) ಎಲ್ಲಾ ಪದಗಳು, ದೇಹ ಭಾಷೆಗಳು ಎಲ್ಲಾ ಮುಗಿದವು. ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಅಂಗಡಿಯ ಹುಡುಗ ನನಗೆ ಬೇಕಾದ ಹುರಿಯನ್ನು ಹಿಡಿದು ಹೊರಬಂದ. ಖುಷಿಯಿಂದ ಖರೀಸಿದ್ದಲ್ಲದೇ ನನ್ನ ಭಾಷಾ ಜ್ಞಾನ ವಿಸ್ತರಿಸಿಕೊಳ್ಳುವ ಪ್ರಯತ್ನ ಸಹ ಮಾಡಿದೆ. ಹುಡುಗ ಸುತ್ಲಿ ಅಂತ ಕೇಳಿದ್ರೆ ಮೊದಲೇ ಕೊಡ್ತಿದ್ದೆ ಅಂತ ಬಂಗಾಳಿಯಲ್ಲಿ ಹೇಳಿದಾಗಲೇ ನನಗೆ ಹೊಳೆದದ್ದು, ಈ ದಾರಕ್ಕೆ ಮೈಸೂರಿನಲ್ಲಿ (ಹತ್ತಾರು ವರ್ಷ ಮೈಸೂರಲ್ಲಿದ್ದೆ) ಸುತ್ಲಿ ಅಂತಾರೆ ಅಂತ.

ಈ ರೀತಿಯ ಪರಿಚಿತ ಪದಗಳು ಎಲ್ಲೆಲ್ಲೂ ಸಲ್ಲುತ್ತವೆ ಎಂಬ ಜ್ಞಾನೋದಯವಾದ ಇನ್ನೂ ಅನೇಕ ಸಂದರ್ಭಗಳು ಮುಂದೂ ಎದುರಾದವು.

ಇನ್ನೊಂದು ಬಂಗಾಳಿಗಳ ಭಾಷೆಯ ಪ್ರಯೋಗ ಕುರಿತಾದ ಘಟನೆ. ಒಮ್ಮೆ ಬಂಗಾಳಿಯೊಬ್ಬನನ್ನು ಮೆಟ್ರೋ ಸ್ಟೇಷನ್ ಬಗ್ಗೆ ವಿಚಾರಿಸಿದರೆ ಅವನಿಗೆ ಅರ್ಥವಾಗಲಿಲ್ಲ. ನಮ್ಮ ದೇಶದಲ್ಲಿ ಮೊದಲ ಮೆಟ್ರೋ ಅಲ್ಲಿ ಆ ಸಮಯದಲ್ಲಿ ಶುರುವಾಗಿತ್ತು. ಅನೇಕ ವಿವರಣೆಗಳ ನಂತರ ಅವನು ಉದ್ಘರಿಸಿದ್ದು "ವೋ ಪಾತೋಳ್ ರೇಲ್". ಮೆಟ್ರೋದ ಅದ್ಭುತ ಬಂಗಾಳೀಕರಣ. ಅಂದಹಾಗೆ ಕಲ್ಕತ್ತಾದ ಹೆಚ್ಚಿನ ಮೆಟ್ರೋ ನಿಲ್ದಾಣಗಳು ಪಾತಾಳದಲ್ಲಿ ಅಂದರೆ ಅಂಡರ್‌ಗ್ರೌಂಡಿನಲ್ಲಿದ್ದವು.

*****

ವಿಶ್ವ ಬೈಸೈಕಲ್ ದಿನ ಹಾಗೂ ನನ್ನ ಸೈಕಲ್ ಸವಾರಿ

– ಗುರುರಾಜ ಶಾಸ್ತ್ರಿ



ಪ್ರತಿ ವರ್ಷ ಜೂನ್ 3ನೇ ತಾರೀಖು ವಿಶ್ವ ಬೈಸೈಕಲ್ ದಿನ ಎಂದು ವಿಶ್ವದ ಎಲ್ಲೆಡೆ ಆಚರಿಸುತ್ತಾರೆ. ಸೈಕಲ್ ಹೊಂದಿರುವ ಯಾರಾದರೂ ಸರಿಯೇ, ಮನೆಯ ಮುಂದಿನ ರಸ್ತೆಯಲ್ಲಾದರೂ ಒಂದೆರೆಡು ಸುತ್ತು ಸೈಕಲ್ ಹೊಡೆದು ಫೋಟೋ ತೆಗೆಸಿಕೊಂಡು ಅದನ್ನು ವಾಟ್ಸಾಪ್ ಫೇಸ್‌ಬುಕ್ಕಿನಲ್ಲಿ ಹಾಕಿದರೇ ಒಂದು ಸಾಧನೆ ಮಾಡಿದಂತೆ. ಈ ವಿಶ್ವ ಬೈಸೈಕಲ್ ದಿನ ಆರಂಭವಾದದ್ದು 2018ರಲ್ಲಿ. ಸಂಯುಕ್ತ ರಾಷ್ಟ್ರಗಳ ಒಕ್ಕೂಟ ಅಂದರೆ ಯುನೈಟೆಡ್ ನೇಶನ್ಸ್ ಜೂನ್ 3, 2018ರಂದು 'ಸೈಕಲ್ ಕೂಡಾ ಜನರನ್ನು ಚುರುಕಾಗಿರಿಸಲು ಒಂದು ಅತ್ಯುತ್ತಮ ಸಾಧನ ಮತ್ತು ಸದಸ್ಯ ರಾಷ್ಟ್ರಗಳು ಸೈಕಲ್ ಚಾಲನೆಯನ್ನು ಪ್ರೋತ್ಸಾಹಿಸಬೇಕು' ಎಂಬ ಪ್ರಸ್ತಾವವನ್ನು ಅನುಮೋದಿಸಿತು. ಅಂದಿನಿಂದ ಶುರುವಾದ ಇದು ಸೈಕಲ್ ದಿನದ ನಾಲ್ಕನೇ ವರ್ಷದ ಆಚರಣೆ.

ಕಳೆದ ಒಂದು ವರ್ಷದಿಂದ ನಾನು ಸೈಕಲ್ ಓಡಿಸುತ್ತಿರುವುದು ನಿಮಗೆಲ್ಲಾ ತಿಳಿದೇ ಇದೆ. ಅದಕ್ಕೆ ಎರಡು ವರ್ಷ ಮುಂಚೆ ನನ್ನ ಅಣ್ಣನ ಮಗ 26 ಸಾವಿರ ರೂಪಾಯಿಯ ಸೈಕಲ್ ಖರೀದಿಸಿ ಐದೋ ಆರೋ ಸಲ ಸೈಕಲ್ ಹೊಡೆದಿದ್ದ ಅಷ್ಟೇ. ನಂತರ ನನ್ನ ಗೆಳೆಯರು ಆರಂಭಿಸಿದರೆಂದು ನಾನೂ ಸೈಕಲ್ ಓಡಿಸಲು ಆರಂಭಿಸಿದ್ದು.

ನನ್ನ ವಾಟ್ಸಾಪಿನಲ್ಲಿ, ಫೇಸ್‌ಬುಕ್ಕಿನಲ್ಲಿ ಸಾಕಷ್ಟು ಫೋಟೋಗಳನ್ನೂ ನೀವೆಲ್ಲಾ ನೋಡಿರುತ್ತೀರಿ. ಈವರೆಗೆ ಸುಮಾರು 3300 ಕಿಲೋಮೀಟರ್ ಸೈಕಲ್ ಚಲಾಯಿಸಿದ್ದೇನೆ ಎಂದು ನಾನು ಹೇಳಿದರೆ ತಕ್ಷಣ ನಿಮ್ಮ ಪ್ರಶ್ನೆ ಅದನ್ನು ಲೆಕ್ಕವಾದರೂ ಹೇಗೆ ಇಡಲು ಸಾಧ್ಯ ಎಂಬುದು. ಇದಕ್ಕೆ ಉತ್ತರ ಸ್ಟ್ರಾವಾ ಎಂಬ ಮೊಬೈಲಿನ ಒಂದು ತಂತ್ರಾಂಶ. ನಾನು ಸೈಕಲ್ ಚಲನೆ ಮಾಡಿದಾಗ ಈ ತಂತ್ರಾಂಶವನ್ನು ಮೊಬೈಲಿನಲ್ಲಿ ಆರಂಭಿಸಬೇಕು. ಸೈಕಲ್ ಹೊಡೆಯುವುದು ನಿಲ್ಲಿಸಿದ ಮೇಲೆ, ಈ ತಂತ್ರಾಂಶ ಓಡುತ್ತಿರುವುದನ್ನು ನಿಲ್ಲಿಸಬೇಕು. ಕಡೆಗೆ ನಾನು ಎಷ್ಟು ದೂರ ಸೈಕಲ್ ಚಲಾಯಿಸಿದೆ, ತೆಗೆದುಕೊಂಡ ಸಮಯ ಎಷ್ಟು, ಮಾರ್ಗದ ನಕ್ಷೆ, ಸರಾಸರಿ ಎಷ್ಟು ವೇಗದಲ್ಲಿ ಸೈಕಲ್ ಚಲಾಯಿಸಿದೆ, ಅತಿ ಹೆಚ್ಚು ವೇಗ ಎಷ್ಟಾಗಿತ್ತು? ಹೀಗೆ ಆದಿನದ ಚಾಲನೆಗೆ ಸಂಬಂಧಪಟ್ಟಂತೆ ಹಲವಾರು ವಿಷಯಗಳನ್ನು ತಂತ್ರಾಂಶ ನೀಡುತ್ತದೆ. ಅಷ್ಟೇ ಅಲ್ಲದೆ, ಈವರೆವಿಗೂ ಅಂದರೆ ತಂತ್ರಾಂಶ ಬಳಸಲು ಆರಂಭಿಸಿದ



ಮೇಲೆ ನನ್ನ ಚಾಲನೆಯ ಮಾಹಿತಿಯನ್ನು ಇದು ತನ್ನಲ್ಲಿ ಅಡಗಿಸಿಕೊಂಡಿರುತ್ತದೆ. ಈ ಸ್ಟ್ರಾವಾ ತಂತ್ರಾಂಶ ಒಂದು ರೀತಿ ವ್ಯಾಯಾಮ ಮಾಡುವವರಿಗೆ, ಓಡುವವರಿಗೆ, ಸೈಕಲ್ ಹೊಡೆಯುವವರಿಗೆ ಫೇಸ್ಬುಕ್ ಇದ್ದಂತೆ.

ಈ ವರ್ಷ ಜೂನ್ 3, 2022ರಂದು ಶುಕ್ರವಾರವಾಗಿತ್ತು. ಹಾಗಾಗಿ ಸಾಕಷ್ಟು ಸೈಕಲ್ ಹೊಡೆಯುವವರ ಗುಂಪುಗಳು ತಮ್ಮ ವಿಶೇಷ ಸೈಕಲ್ ಚಾಲನೆಯನ್ನು ಶನಿವಾರಕ್ಕೆ ಮುಂದೂಡಿದ್ದುವು. ನನ್ನ ಗೆಳೆಯರ ಗುಂಪು ಸಹ ಹಾಗೆಯೇ. ಜೂನ್ 4ರ ಶನಿವಾರದಂದು ಕನಕಪುರ ರಸ್ತೆ ಕಗ್ಗಲೀಪುರದ ಬಳಿ ಇರುವ ಶ್ಯೂರ್ ಶಾಟ್ ಅಕಾಡೆಮಿ ಎಂಬಲ್ಲಿಗೆ ಸೈಕಲ್ಲಿನಲ್ಲಿ ಹೋಗಲು ನಿರ್ಧರಿಸಿದೆವು. ಹೋಗಿ ಬರುವುದೆಲ್ಲ ಸೇರಿ ಸುಮಾರು 70 ಕಿಲೋಮೀಟರ್ ಆಗುತ್ತದೆ ಎಂದು ನನಗೆ ಗೊತ್ತಿತ್ತು. ಅಲ್ಲದೆ ಒಂದೇ ದಿನದಲ್ಲಿ ಅತಿ ಹೆಚ್ಚು ಸೈಕಲ್ ಹೊಡೆದ ನನ್ನ ವೈಯಕ್ತಿಕ ದಾಖಲೆ ಕೂಡ ಇದೇ ಆಗುತ್ತದೆಂದು ಗೊತ್ತಿತ್ತು.

ಅಂದು ಬೆಳಿಗ್ಗೆ 6.15ಕ್ಕೆ ಎಲ್ಲರೂ ವಿಧಾನಸೌಧದ ಬಳಿ ಸೇರಿದೆವು. ಸುಮಾರು 50 ಜನ ಗುಂಪಿನಲ್ಲಿದ್ದರು. 6.30ಕ್ಕೆ ಅಲ್ಲಿಂದ ಹೊರಟು, ಸಿಟಿ ಮಾರ್ಕೆಟ್ ಮಾರ್ಗವಾಗಿ ಕನಕಪುರ ರಸ್ತೆಯ ಮೂಲಕ ಕಗ್ಗಲಿಪುರದ ಶ್ಯೂರ್ ಶಾಟ್ ಅಕಾಡೆಮಿ ತಲುಪಿದ್ದು ಸುಮಾರು 8.15ಕ್ಕೆ.

ಶ್ಯೂರ್ ಶಾಟ್ ಅಕಾಡೆಮಿ 30 ಎಕೆರೆಯಲ್ಲಿರುವ ಒಂದು ತರಬೇತಿ ಕೇಂದ್ರ. ಇಲ್ಲಿ ಭಾರತೀಯ ಸೈನ್ಯ ಹಾಗೂ ವಾಯುಪಡೆಗೆ ಸೇರಲಿಚ್ಚಿಸುವ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಇದನ್ನು ಆರಂಭಿಸಿದವರು ಜನರಲ್ ಭಕುನಿಯವರು. ಇಲ್ಲಿ ತರಬೇತಿ ಪಡೆದ ಸಾಕಷ್ಟು ಅಭ್ಯರ್ಥಿಗಳು ಸೈನ್ಯಕ್ಕೆ ಸೇರಿದ್ದಾರೆ. ನಮಗೆ ಈ ಅಭ್ಯರ್ಥಿಗಳ ಜೊತೆಯೇ ಬೆಳಗಿನ ತಿಂಡಿಯನ್ನು ತಿನ್ನುವ ಅವಕಾಶ ಸಿಕ್ಕಿತು ಮತ್ತು ಜನರಲ್ ಭಕುನಿಯವರ ಮೌಲ್ಯಾಧಾರಿತ ಮಾತುಗಳನ್ನು ಕೇಳಿಸಿಕೊಳ್ಳುವಂತಾಯಿತು. 'ಜೈ ಹೋ ಭಾರತ್' ಎಂಬ ಅಭಿಯಾನವನ್ನು ಇವರು ಆರಂಭಿಸಲಿದ್ದು, ಇದೇ ಆಗಸ್ಟ್ 15ರಂದು ಮಧ್ಯಾಹ್ನ 12 ಗಂಟೆಗೆ ದೇಶದ ಎಲ್ಲಾ ಜನರು ರಾಷ್ಟ್ರಗೀತೆ ಹಾಡಬೇಕೆಂಬುದು ಇದರ ಉದ್ದೇಶವಾಗಿದೆ. ಈ 30 ಎಕರೆ ಜಾಗದಲ್ಲಿ ಅಭ್ಯರ್ಥಿಗಳಿಗೆ ಎಲ್ಲಾ ಸಾಹಸ ಚಟುವಟಿಕೆಗಳಿಗೆ ಬೇಕಾಗುವ ಅನುಕೂಲಗಳು ಇವೆ. ನಾವು ಹೆಚ್ಚು ಹೊತ್ತು ಇಲ್ಲಿ ಇರಲು ಸಾಧ್ಯವಾಗಲಿಲ್ಲ. ರಾಷ್ಟ್ರಧ್ವಜ ಹಾರಿಸಿದ ನಂತರ ಅಲ್ಲಿಂದ ಸಿ.ಆರ್.ಪಿ.ಎಫ್.ನವರು ನಡೆಸುತ್ತಿರುವ ಶ್ವಾನ ತರಬೇತಿ ಕೇಂದ್ರಕ್ಕೆ ಭೇಟಿಕೊಟ್ಟೆವು.



ಸುಮಾರು 10 ತಿಂಗಳು ಒಂದು ನಾಯಿ ಮತ್ತು ಅದರ ಜೊತೆ ಇಬ್ಬರು ಯೋಧರನ್ನು ಒಂದು ಗುಂಪಿನಂತೆ ತರಬೇತಿ ನೀಡುತ್ತಾರೆ. ಈ ರೀತಿ ಕಳೆದ 10 ತಿಂಗಳಲ್ಲಿ ತರಬೇತಿ ಪಡೆದು ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆ ಯಾಗಿದ್ದ 7 ನಾಯಿ ಮತ್ತು 14 ಯೋಧರಿಗೆ ಸರ್ಟಿಫಿಕೇಟ್ ನೀಡುವ ದಿನ ಅದಾಗಿತ್ತು. ನಮ್ಮ ಸೈಕಲ್ ಸವಾರರಲ್ಲೇ ಒಬ್ಬರಾದ ಬ್ರಿಗೇಡಿಯರ್ ರವಿ ಮುನುಸ್ವಾಮಿಯವರು ಆ ದಿನದ ಮುಖ್ಯ ಅತಿಥಿ. ಕೆಲವು ಶ್ವಾನಗಳ ಸಾಹಸ ಪ್ರದರ್ಶನವೂ ಇತ್ತು. ಮಾದಕ ವಸ್ತುಗಳ ವ್ಯಾಪಾರಿಯನ್ನು ಹಿಡಿಯುವ ಶ್ವಾನ ಒಂದಾದರೆ, ಬಾಂಬ್ ಹುಡುಕುವ ಶ್ವಾನ ಮತ್ತೊಂದು. ಕೈಯಲ್ಲಿ ಬಂದೂಕು ಹಿಡಿದ ಭಯೋತ್ಪಾದಕನ ಮೇಲೆ ಯಾವ ಹೆದರಿಕೆಯೂ ಇಲ್ಲದೆ ಚೆಂಗನೆ ಹಾರುವ ಶ್ವಾನವಂತೂ ಆಕರ್ಷಕ ಪ್ರದರ್ಶನ ನೀಡಿತು.

ತರಬೇತಿ ಪಡೆದ ಒಂದು ನಾಯಿ ಮತ್ತು ಎರಡು ಯೋಧರು ನಾಯಿಗೆ ಹತ್ತು ವರ್ಷವಾಗುವವರೆಗೆ ಅಥವಾ ವೀರ ಮರಣ ಹೊಂದುವವರೆಗೆ ಈ ಯೋಧರು ಜೊತೆಯಲ್ಲೇ ಇರುತ್ತಾರೆ. ಸಾಮಾನ್ಯವಾಗಿ ಈ ಮೂವರ ಗುಂಪನ್ನು ನಕ್ಸಲೈಟ್ ಪ್ರದೇಶಗಳಲ್ಲಿ ಹೆಚ್ಚು ಬಳಸುತ್ತಿದ್ದಾರೆ. ಈ ನಾಯಿಗಳು ಅಷ್ಟೇ, ತಮ್ಮ ಜೊತೆಯಲ್ಲಿ ಇರುವ ಇಬ್ಬರು ಯೋಧರನ್ನು ಬಿಟ್ಟು ಬೇರೆ ಯಾರ ಮಾತನ್ನೂ ಕೇಳುವುದಿಲ್ಲ ಮತ್ತು ಬೇರೆ ಯಾರೇ ಏನೇ ಊಟ, ಬಿಸ್ಕತ್ತು ಹಾಕಿದರೂ ತಿನ್ನುವುದಿಲ್ಲ. ಸಾಮಾನ್ಯ ಜನರಿಗೆ ಪ್ರವೇಶವಿಲ್ಲದ ಈ ತರಬೇತಿ ಕೇಂದ್ರಕ್ಕೆ ನಾವು ವಿಶೇಷ ಅತಿಥಿಗಳಾಗಿ ಹೋಗಿದ್ದು ತುಂಬಾ ಸಂತೋಷ ತಂದಿತು.

ಬೆಂಗಳೂರಿನಿಂದ ಈಗಾಗಲೇ ಸುಮಾರು 45 ಕಿಲೋಮೀಟರ್ ಸೈಕಲ್ ಹೊಡೆದಾಗಿತ್ತು. ಅದು ಬರೀ ಕೆಳಗಿಳಿಯುವ ರಸ್ತೆಯೇ. ಶ್ವಾನ ತರಬೇತಿ ಕೇಂದ್ರದಿಂದ ನನ್ನ ಮನೆ ಸುಮಾರು 25 ಕಿಲೋಮೀಟರ್. ಅದೂ ಬೆಟ್ಟ ಹತ್ತುವಂತೆ ಎತ್ತರಕ್ಕಿರುವ ರಸ್ತೆ. ರಸ್ತೆಯ ಉಬ್ಬು, ಸುಡುತ್ತಿದ್ದ ಬಿಸಿಲು ಹಾಗೂ ಕನಕಪುರ ರಸ್ತೆಯಲ್ಲಿನ ಭಯಂಕರ ವಾಹನ ದಟ್ಟಣೆ ಮನೆಗೆ ಯಾವಾಗ ಸೇರುತ್ತೇವಪ್ಪಾ ಎನ್ನುವಂತಾಗಿತ್ತು. ಮಾರ್ಗ ಮಧ್ಯದಲ್ಲಿ ಒಂದೆರೆಡು ಲೋಟ ಕಬ್ಬಿನ ಹಾಲು ಕುಡಿದು ಮನೆಗೆ ಬಂದಾಗ 3 ಗಂಟೆ. ಊಟ ಮಾಡಿ ಮಲಗಿದರೆ ಎಚ್ಚರಿಕೆಯಾದದ್ದು ರಾತ್ರಿ 10 ಗಂಟೆಗೆ. ಮತ್ತೆ ರಾತ್ರಿ ಊಟ ಮುಗಿಸಿ ಮಲಗಿಕೊಂಡು ಮಾರನೆಯ ದಿನ ಅಂದರೆ ಜೂನ್ 5ರಂದು ವಿಶ್ವ ಪರಿಸರ ದಿನವಾದ್ದರಿಂದ ಅದಕ್ಕಾಗಿ 15 ಕಿಲೋಮೀಟರ್ ಸೈಕಲ್ ಸವಾರಿಗೆ ಬೆಳಿಗ್ಗೆ 6 ಗಂಟೆಗೆ ಹೊರಟಿದ್ದಾಯಿತು.

*****

ವಲಸೆ ಹಕ್ಕಿಗಳು

- ಮಾಲತಿ ಶ್ರೀನಿವಾಸನ್

ವಲಸೆ ಹಕ್ಕಿಗಳು ಸದಾ
ದೂರ ಪಯಣಕ್ಕೆ ಸಿದ್ಧ
ದೂರದ ನಂಟಿನ ಸೆಳೆತ
ಪ್ರೀತಿ-ವಾತ್ಸಲ್ಯದ ಎಳೆತ
ದಶಕಗಳಲಿ ಬದಲಾಗದ
ಬೆಸುಗೆ ಬಾಂಧವ್ಯದ ತುಡಿತ.

ಎಲ್ಲಿದ್ದರೇನು ಹೇಗಿದ್ದರೇನು
ಸದಾ ಮನದಿ ಅದೇ ಹಳೆ ಭಾವ
ಹಳೆಯ ರಾಗ, ಇದ್ದುದ್ದರಲ್ಲಿ
ನೆಮ್ಮದಿಯ ಕಾಣು ಮನವೆ
ಅನವರತ.

ನೀರು ದಡದಾಟ, ಒಮ್ಮೆ ನೀರಲ್ಲಿ
ಮತ್ತೊಮ್ಮೆ ದಡದಲ್ಲಿ ಕುಣಿದಾಟ,
ಆ ದಡ ಈ ದಡ ಹಾರುತಿರು
ಸಂಭ್ರಮದಿ, ಬೇಡ ದುಗುಡ
ಸೇರುವ ತನಕ ನೀ ನಿನ್ನ ದಡ.

ಮುಂದೆಷ್ಟೊ ಹಾದಿ ಎಲ್ಲಿ
ನಿಲ್ಲುವುದೋ ಪಯಣ
ಮನಕೆ ಚಿಂತನೆ ಏಕೋ?
ಇದರ ಪರಿಧಿ ಅರಿತವರಾರೋ
ನಾ ಕಾಣೆ.

ನಿಂತ ನೀರಾಗದಿರು, ನಿಲ್ಲದಿರು
ದೂಡುತ್ತ ಜಡತೆ ಹಾರುತಿರು
ವಲಸೆ ಹಕ್ಕಿಯಂತೆ ಸ್ವೀಕರಿಸು
ಮೇಲಿನವ ಮುಂದಿಟ್ಟದ್ದೆಲ್ಲ
ಸಿದ್ಧನಿರು ಸದಾ ಎಲ್ಲ ಏರಿಳಿತಕ್ಕೆ
ಮೌನದಲಿ, ನೋಡುತ್ತ ಅವನಾಟ,
ಆದಿ-ಅಂತ್ಯದ ನಿರ್ಣಯ ನಿನದಲ್ಲ
ಎಲ್ಲ ಅವನ ಮೋಜಿನಾಟ.

***

ಬಾಂಧವ್ಯದ ಗುಟ್ಟೇನು?

- ಮಾಲತಿ ಶ್ರೀನಿವಾಸನ್

ಈ ಬಾಂಧವ್ಯದ ಗುಟ್ಟೇನು
ಹೇಳು ನನ್ನ ಗೆಳತಿ.
ವಯಸಿನಲಿ, ವಾತ್ಸಲ್ಯದಲಿ
ಮಗಳಂತೆ, ಚರ್ಚೆಯಲಿ
ತುಂಟಾಟ, ಹರಟೆಯಲಿ,
ಮಾತಿನಾ ಮೋಡಿಯಲಿ
ಆಪ್ತ ಸಂಗಾತಿಯಂತೆ,

ಕಕ್ಕುಲತೆ ಕಾಳಜಿಯಲಿ
ನೆನಪಿಸುವಳು ಹೆತ್ತವಳ
ಒಮ್ಮೊಮ್ಮೆ ಸಾಂತ್ವನದ
ಸಲಹೆಯಲಿ, ಗುರುವಂತೆ,

ಕಂಡ ಕೂಡಲೇ ಸಂತಸದಿ
ತಬ್ಬುವಳು ಮುದ್ದುಮಗುವಂತೆ.
ಸೌಮ್ಯತೆಯ ಸಾಕಾರದ ಮೂರ್ತಿ
ನನ್ನ ಹುಡುಗಿಗೆ, ಹುಟ್ಟುಹಬ್ಬದ
ಶುಭಾಶಯಗಳು

ಸದಾ ಉತ್ಸಾಹದ ಚಿಲುಮೆ
ಹರಿಯಲಿ ನಿನ್ನಲ್ಲಿ,
ತುಂಬಿರಲಿ ಬಾಳ ನಂದನವನ
ಸದಾ ಹಸಿರು ಚಿಗುರಿನಲಿ.

***

ಅತೀಂದ್ರಿಯ ಶಕ್ತಿಗಳು

- ಹು.ವಾ. ಶ್ರೀಪ್ರಕಾಶ್

ಮಲೆನಾಡಿನಲ್ಲಿ ಹುಟ್ಟಿ ಬೆಳೆದ ನಮಗೆ ಬಾಲ್ಯದಲ್ಲಿ ಭೂತಪ್ರೇತಗಳ ಕಥೆ ವಿಪರೀತ ಕುತೂಹಲವನ್ನೂ ಭಯವನ್ನೂ ಉಂಟುಮಾಡುತ್ತಿತ್ತು.

ವಿದ್ಯುದ್ದೀಪಗಳಿರದ ಕರಾಳ ರಾತ್ರಿ, ಸುರಿವ ಮಳೆ, ಕಪ್ಪೆಗಳ ವಟವಟ ಮತ್ತು ಇತರ ಕೀಟಗಳ ಕೂಗು, ಇಂತಹ ವಾತಾವರಣದಲ್ಲಿ ಭೂತದ ಕತೆ ಕೇಳಿದರೆ ಎಲ್ಲಿ ಏನು ಶಬ್ದವಾದರೂ ಒಂದು ರೀತಿಯ ಆತಂಕ. ನಡುರಾತ್ರಿಯಲ್ಲಿ ಕೇಳುವ ಗೆಜ್ಜೆ ಶಬ್ದ, ಬೆಟ್ಟದ ತುದಿಯಲ್ಲೆಲ್ಲೋ ಕಾಣುವ ಹೊತ್ತೆಯ ಬೆಳಕು, ದಾರಿ ಮಧ್ಯ ಯಾವುದೋ ಮರದಲ್ಲಿ ಕಾಡುವ ಬ್ರಹ್ಮರಾಕ್ಷಸ ಹೀಗೆ ಕತೆಯಲ್ಲಿ ಕೇಳಿದ ಸಂಗತಿಗಳನ್ನು ಮನಸೆಲ್ಲೋ ಭಯದಲ್ಲೂ ಅರಸುತ್ತಿತ್ತು.

ಕುಟುಂಬದ ಆಗಿಹೋದ ಹಿರಿಯರು ಕಂಡು ಅನುಭವಿಸಿದ್ದ ಕತೆಗಳೆಂದಾಗ ಮತ್ತಷ್ಟು ರೋಮಾಂಚನ.

ಹಿರಿಯರೊಬ್ಬರು ಕತ್ತಲಲ್ಲಿ ಹೊತ್ತೆ ಹಿಡಿದು ಬರುವಾಗ ಅದು ಮತ್ತೆ ಮತ್ತೆ ಆರುತ್ತಿತ್ತಂತೆ. ಅವರು ನಂಬಿದ್ದ ಚೌಡಿಯದೇ ಈ ಆಟ ಅಂತ ಮನದಲ್ಲೇ ಅಂದುಕೊಂಡು, "ನಿನ್ನ ಆಟ ಎಲ್ಲ ಗೊತ್ತು.. ಈ ದಾರಿಯಲ್ಲಿ ಕತ್ತಲಲ್ಲೂ ನಡೆಯಬಲ್ಲೆ" ಅಂದುಕೊಂಡು ಮನೆಗೆ ಬಂದೊಡನೆ ಚೌಡಿ ಜೋರಾಗಿ ನಕ್ಕಿತಂತೆ. ಇದೂ ಒಂದು ಕಥೆ!

ಪಂಚಭೂತಗಳಿಂದಾದ ಶರೀರದ ಇಂದ್ರಿಯಗಳಿಗೆ ಒಂದು ಮಿತಿಯಿದೆ. ಇಂದ್ರಿಯಗಳನ್ನು ಮೀರಿದ ಪ್ರಪಂಚ ಅನೂಹ್ಯ. ಅಂತೆಯೇ ಜಗದ ಸಂಗತಿಗಳು ವಿಸ್ತಾರ ಕಲ್ಪನೆಗೂ ನಿಲುಕದು.

ಈರೇಳು ಹದಿನಾಲ್ಕು ಲೋಕಗಳಲ್ಲೂ ನಿನ್ನಂತಹ ವೀರನಿಲ್ಲ ಅಂತಲೋ, ಸುಂದರಿಯಿಲ್ಲ ಅಂತಲೋ ಹೇಳುವುದುಂಟು. ಹದಿನಾಲ್ಕು ಲೋಕ ಕಂಡವರಾರು. ಎಷ್ಟೋ ಸೌರವ್ಯೂಹಗಳಿವೆ ಅನ್ನುವರು. ವಿಶ್ವಾಮಿತ್ರ ಮತ್ತು ಜಮದಗ್ನಿ ಸೇರಿಕೊಂಡು ರಾಜ ತ್ರಿಶಂಕುವಿನಲ್ಲಿ ಸಾತ್ವಿಕ ಪ್ರಭಾವ ಹೆಚ್ಚಿಸಿ ಸ್ವರ್ಗಕ್ಕೇ ಕಳಿಸಿದಾಗ ವೀಸಾ ಇಲ್ಲದೇ ಬಂದ ಅವನನ್ನು ದೇವೇಂದ್ರ ಹಿಂದೆ ಕಳಿಸಿದ ಪರಿಣಾಮ ತ್ರಿಶಂಕು ಸ್ವರ್ಗ ನಿರ್ಮಾಣವಾದ ಕತೆ ಇದೆ.

ಹಿಮಾಲಯದ ತಪ್ಪಲಲ್ಲಿ ಅದೆಷ್ಟೋ ತಪಸ್ವಿಗಳ, ಯೋಗಿಗಳ ಪವಾಡದ ಕತೆಗಳಿವೆ. ವಿಚಿತ್ರ ವರ್ತನೆಯ ಅಘೋರಿಗಳದು ಮತ್ತೊಂದು ತೆರನಾದ ಪ್ರಪಂಚ. ನಂಬಲಸಾಧ್ಯವಾದ ಹಲವು ಸಂಗತಿಗಳು ನಮಗೆ ಕೇವಲ ಬೆರಗು ಹುಟ್ಟಿಸುವ ರೋಚಕ ಕತೆಗಳಾಷ್ಟೇ ಕಾಣುತ್ತವೆ.

ಪರಮಹಂಸ ಯೋಗಾನಂದರ ಯೋಗಿಯ ಆತ್ಮಕತೆ ಮತ್ತಿತರ ಹಲವು ಕೃತಿಗಳಲ್ಲಿ ಅದೆಷ್ಟೋ ಪವಾಡದ ಸಂಗತಿಗಳು ಉಲ್ಲೇಖವಾಗಿವೆ. ಅನೇಕ ವಿದ್ವಜ್ಜನರ ರಾಜಮಹಾರಾಜರ ಗೌರವಕ್ಕೆ ಇಂತಹ ಯೋಗಿಗಳು ಪಾತ್ರರಾದದ್ದಿದೆ. ಹಲವು ಕಾಲದ ಹಿಂದೆ ವಿಧಿವಶರಾದ ಶ್ರೀ ಮಹಾವತಾರ ಬಾಬಾಜಿ ಈಗಲೂ ಕಾಣಿಸಿಕೊಳ್ಳುವರೆಂಬ ಪ್ರತೀತಿ ಇದೆ. ಖ್ಯಾತ ನಟ ರಜನೀಕಾಂತ್‌ರವರೂ ಒಬ್ಬ ಯೋಗಿಯನ್ನು ಭೇಟಿ ಮಾಡುವರೆಂಬ ಸುದ್ದಿ ಎಲ್ಲರಿಗೂ ತಿಳಿದದ್ದೇ ಆಗಿದೆ.

ಪಂಚಭೂತಗಳಲ್ಲಿ ನಾವು ಗ್ರಹಿಸಲಾರದ ಅಲೌಕಿಕ ಶಕ್ತಿ ಇದೆ. 'ಹಲೋ' ಎಂಬ ದನಿ ಹೇಗೆ ಪ್ರಪಂಚದ ಮತ್ತೊಂದು ಬದಿಗೆ ಮುಟ್ಟಬಲ್ಲದೋ ಅಂತೆಯೇ ಪಠಿಸುವ ಮಂತ್ರಗಳೂ ನಿರ್ದಿಷ್ಟ ಶಕ್ತಿಯಲ್ಲಿ ಸಂಚಲನ ಮೂಡಿಸಬಹುದೇನೋ. ಜ್ಯೋತಿಷ್ಯ ಶಾಸ್ತ್ರವಂತೂ ಬೆಳಕನ್ನೇ ಅವಲಂಬಿಸಿದೆ. ಹುಟ್ಟಿನ ಸಮಯದಲ್ಲಿ ಪೂರ್ವದಿಗಂತದಲ್ಲಿ ಮೇಲೇರುತ್ತಿರುವ ಸೂರ್ಯಪಥದ ಬಿಂದುವಿನ ಆಧಾರದಲ್ಲಿ ಜನ್ಮಕುಂಡಲಿ ರಚಿಸಿ ಭವಿಷ್ಯ ಹೇಳುವುದನ್ನು ನಾವು ನಂಬುತ್ತೇವೆ.

ವಿಜ್ಞಾನದ ಪ್ರಕಾರ ಸುಲಭವಾಗಿ ಪರೀಕ್ಷೆಗೆ ಒಡ್ಡಲಾಗದ ಆದರೆ ಹಲವರ ಅನುಭವಕ್ಕೆ ಬಂದ ಸಂಗತಿಗಳನ್ನು ಸಾರಾ ಸಗಟಾಗಿ ತಳ್ಳಿಹಾಕುವುದೂ ಸಲ್ಲದು.

ನಮ್ಮ ಚಿಂತನೆಗೆ ನಿಲುಕದ ದೇವರಿದ್ದಾನೋ ಇಲ್ಲವೋ ಎಂಬ ಚರ್ಚೆಗೆ ಕೊನೆಯಿಲ್ಲ. ನಂಬಿದವರಿಗೆ ಭಗವಂತ ಇದ್ದಾನೆ. ಇಲ್ಲದವರಿಗೆ ಸುತ್ತಲಿನ ಆಗುಹೋಗುಗಳು ತಾನಾಗೇ ಘಟಿಸುತ್ತವೆ. ಈ ಘಟನೆಗಳ ಸರಪಳಿ ನಿರಂತರ ಒಂದಕ್ಕೆ ಒಂದು ಪೂರಕವಾಗಿಯೋ ಕಾರಣವಾಗಿಯೋ ತಾನಾಗಿ ನಡೆಯುತ್ತ ಹೋಗುತ್ತದೆ. ಈ ಸೂತ್ರದ ಹಿಂದೆ ಇರುವ ಶಕ್ತಿಯೇ ಪರಮಾತ್ಮ ಎಂಬ ನಿಲುವೂ ಇದೆ. ಒಟ್ಟಿನಲ್ಲಿ ಭಗವಂತ ನಮ್ಮ ಇಂದ್ರಿಯಗಳಿಗೆ ಹಾಗೇ ನಿಲುಕುವವನಲ್ಲ.

ಬದುಕಿನಲ್ಲಿ ಎಲ್ಲರಿಗೂ ಯಾವುದೋ ಅತೀಂದ್ರಿಯ ಶಕ್ತಿ ಇದೆ ಎಂಬ ಅನಿಸಿಕೆ, ನಂಬಿಕೆ ಬರುವಂತಹ ಘಟನೆಗಳು ಜರುಗಿರುತ್ತವೆ.

ಅದೆಷ್ಟೋ ಹೆಸರು, ಕೀರ್ತಿ, ಧನ ಸಂಪಾದಿಸಿದವರು ಕೊನೆಗೆ ಹಿಮಾಲಯದೆಡೆಗೆ ಸತ್ಯ ಸಾಕ್ಷಾತ್ಕಾರಕ್ಕಾಗಿ ಸಾಗಿದವರಿದ್ದಾರೆ. ನಮ್ಮ ಭರತ ಭೂಮಿಯೇ ಯೋಗಿಗಳ ನಾಡಲ್ಲವೇ.

ಸ್ಥೂಲ ಶರೀರಿಗಳಾಗಿ ಈ ಭೂಮಿಯಲ್ಲಿರುವ ನಮ್ಮ ಜ್ಞಾನೇಂದ್ರಿಯಗಳ ಮಿತಿ ತೀರಾ ಅಲ್ಪ. ಕಾರಣ ಶರೀರ, ಸೂಕ್ಷ್ಮ ಶರೀರ ಮುಂತಾದವುಗಳಿರುವ ಬೇರೆಯೇ ಲೋಕಗಳು ಇದೆ ಎನ್ನುವರು. ಪುರಾವೆ ಕೇಳಿದರೆ ದಕ್ಕದು. ಬೇರೆ ಲೋಕದವರು ಭೂಮಿಗೆ ಭೇಟಿ ಕೊಡುತ್ತಾರೆಂಬ ಕತೆಗಳೂ ಇವೆ.

ಸಿದ್ಧಪುರುಷರಿಗೆ ಹಲವು ಪವಾಡದ ಕತೆಗಳು ಅಂಟಿಕೊಂಡಿರುತ್ತವೆ. ಮೇಜು ಸರಿಸುವುದು, ಕಿಟಕಿ ಮುಚ್ಚುವುದು, ಕೈಬೀಸಿ ಏನಾದರೂ ಸೃಷ್ಟಿಸುವುದು ಇತ್ಯಾದಿ ಸಣ್ಣಪುಟ್ಟ ಪವಾಡ ಮಾಡುವ ಬದಲು ಲೋಕದ ಸಂಕಷ್ಟಗಳನ್ನೇಕೆ ಪವಾಡಸದೃಶವಾಗಿ ನಿವಾರಿಸಬಾರದೆಂಬುದು ಹಲವರ ಸಹಜ ಪ್ರಶ್ನೆ.

ಕರ್ಮವನ್ನು ಅನುಭವಿಸಲೇಬೇಕು ಎಂಬುದು ಕರ್ಮಸಿದ್ಧಾಂತ.

ಏನೇ ಇರಲಿ, ಅತೀಂದ್ರಿಯ ಸಂಗತಿಗಳು ಮನುಷ್ಯನಿಗೆ ತನ್ನ ಇತಿಮಿತಿಯನ್ನು ತಿಳಿಸುತ್ತಲೇ ಆದ್ಯಾತ್ಮಿಕವಾಗಿ ಅಲೌಕಿಕದೆಡೆಗೆ ಮನಸ್ಸು ತುಡಿಯುವಂತೆ ಪ್ರೇರೇಪಿಸುತ್ತವೆ..



(ಚಿತ್ರ ಕೃಪೆ: ಶ್ರೀ ಎಚ್.ಆರ್.ಗುರುರಾಜ ಶಾಸ್ತ್ರಿ)

ಆಕಾಶವಾಣಿಯ 'ಬಾಲಜಗತ್' - ಒಂದು ಸುಮಧುರ ನೆನಪು

– ಜಿ.ವಿ. ಅರುಣ

ಈಚೆಗೆ ಆಕಾಶವಾಣಿಯಲ್ಲಿ ನಿತ್ಯ ವಿಜ್ಞಾನ ಕಾರ್ಯಕ್ರಮಕ್ಕಾಗಿ ಬರೆದಿದ್ದ ನಾಲ್ಕು ಲೇಖನಗಳನ್ನು ಧ್ವನಿಮುದ್ರಿಸಲು ಹೋಗಿದ್ದೆ. ಸ್ಟುಡಿಯೋದಲ್ಲಿ ಕುಳಿತಾಗ ಆಕಾಶವಾಣಿಯಲ್ಲಿ ಮೊಟ್ಟಮೊದಲು 'ಬಾಲಜಗತ್' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸುಮಧುರ ನೆನಪು ಥಟ್ಟನೆ ಮನದಲ್ಲಿ ಮಿಂಚಿತ್ತು. ಮಕ್ಕಳ ಕಾರ್ಯಕ್ರಮವನ್ನು ಆಗ ಬಾಲಜಗತ್ ಎಂದು ಕರೆಯುತ್ತಿದ್ದರು. ಮುಂದೆ ಪ್ರೌಢಶಾಲೆಯ ಮಕ್ಕಳಿಗೆ ಕಾರ್ಯಕ್ರಮವು ಪ್ರಾರಂಭವಾದಾಗ ಅದು 'ಹಕ್ಕಿಯ ಬಳಗ' ಎಂದು ಮರುನಾಮಕರಣಗೊಂಡಿತ್ತು.

ಅದು ಟೆಲಿವಿಷನ್, ಕಂಪ್ಯೂಟರ್, ಮೊಬೈಲ್ ಮುಂತಾದುಗಳ ಹೆಸರನ್ನೇ ಕೇಳದ ಕಾಲ. ಅಷ್ಟೇ ಏಕೆ



ಕ್ಯಾಲ್ಕುಲೇಟರ್ ಕೂಡ ಇರಲಿಲ್ಲ. ಟ್ರಾನ್ಸಿಸ್ಟರ್ ರೇಡಿಯೋಗಳು ಆಗತಾನೆ ಇಣುಕಿ ನೋಡುತ್ತಿದ್ದವು. ಆ ಸಮಯದಲ್ಲಿ ರೇಡಿಯೋ ಜನಜೀವನದ ಅವಿಭಾಜ್ಯ ಅಂಗವಾಗಿತ್ತು. ವಾರ್ತೆಗಳು, ಪ್ರದೇಶ ಸಮಾಚಾರ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಮಹಿಳೆಯರ, ಮಕ್ಕಳ, ರೈತರ, ಕಾರ್ಮಿಕರ ಕಾರ್ಯಕ್ರಮಗಳು, ಗಾಂಧಿ ಸ್ಮೃತಿ, ಖ್ಯಾತನಾಮರೊಡನೆ ಸಂದರ್ಶನ ಹಾಗು ಅವರ ಭಾಷಣಗಳು, ಪುಸ್ತಕ ಪರಿಚಯ, ಬಾನುಲಿ ನಾಟಕಗಳು, ರೂಪಕಗಳು, ಹಬ್ಬ ಹರಿದಿನಗಳಿಗೆ, ರಾಷ್ಟ್ರೀಯ ದಿನಾಚರಣೆಗಳಿಗೆ ವಿಶೇಷ ಕಾರ್ಯಕ್ರಮಗಳು, ಇವುಗಳ ಮಧ್ಯದಲ್ಲಿ ದೆಹಲಿ ಕೇಂದ್ರದಿಂದ ಹಲವು ವಿಶೇಷ ಕಾರ್ಯಕ್ರಮಗಳನ್ನು 'ಆಕಾಶವಾಣಿಯ ಎಲ್ಲ ಕೇಂದ್ರಗಳಿಂದಲೂ ಏಕಕಾಲದಲ್ಲಿ ಪ್ರಸಾರ ಮಾಡುತ್ತೇವೆ' ಎಂಬುದನ್ನು ಕೇಳಿ ಪುಳಕಿತರಾಗುತ್ತಿದ್ದೆವು. ಇವಲ್ಲದೆ ನನ್ನ ನೆನಪಿಗೆ ತಕ್ಷಣ ಬಾರದ ಇನ್ನು ಅನೇಕ ಕಾರ್ಯಕ್ರಮಗಳಿವೆ. ಹಾಂ ಮರೆತಿದ್ದೆ, ಕ್ರಿಕೆಟ್ ಕಾಮೆಂಟರಿ ಕೂಡ ಪ್ರಸಾರವಾಗುತ್ತಿದ್ದವು. ನನಗೆ ಒಂದು ಪ್ರಸಂಗ ಚೆನ್ನಾಗಿ ನೆನಪಿದೆ "ಹೋ.. ಬ್ಯಾಟಿನಿಂದ ಜೋರಾಗಿ ಬೌಂಡರಿ ಕಡೆ ಹೊಡೆದಿದ್ದಾರೆ. ಓ! ಇಲ್ಲ, ಇಲ್ಲ.. ಅವರು ಕ್ಲೀನ್ ಬೋಲ್ಡ್ ಆಗಿದ್ದಾರೆ!" ಆಗ ನಮ್ಮ ಮನೆಯಲ್ಲಿ ಇದ್ದದ್ದು ಟೆಸ್ಲಾ ರೇಡಿಯೋ.

ಇವೆಲ್ಲಕ್ಕಿಂತ ಬಹಳ ಮುಖ್ಯವಾದದ್ದು, ಅಷ್ಟೊಂದು ರೇಡಿಯೋ ಕಾರ್ಯಕ್ರಮದ ಮಧ್ಯದಲ್ಲಿ ನಮಗೆ ಬೇಕಾದಷ್ಟು ಸಮಯವಿರುತ್ತಿತ್ತು. ಸ್ನೇಹಿತರು, ನೆಂಟರಿಷ್ಟರು, ಎಲ್ಲರೂ ಪರಸ್ಪರ ಬಂದು ಹೋಗಿ ಸಂತೋಷದಿಂದ ಇರುವುದಕ್ಕೆ

ಸಾಕಷ್ಟು ಸಮಯ ಇರುತ್ತಿತ್ತು. ಈಗ ತಾಂತ್ರಿಕತೆಯಿಂದ ಉಪಕರಣಗಳು ದೈತ್ಯಕಾರಕ್ಕೆ ಬೆಳೆದಿವೆ. ಆದರೆ ನಮ್ಮ ಸಮಯ..?

ಇವುಗಳ ಮಧ್ಯದಲ್ಲಿ ರೇಡಿಯೋ ಕೇಳುಗರು ಇದ್ದೇ ಇದ್ದಾರೆ. ನಾನು ಕಾರಿನಲ್ಲಿ ಹೋಗುವಾಗ ಎಫ್‌ಎಂ ಅಥವಾ ಎಎಂ ರೇಡಿಯೋ ಕಾರ್ಯಕ್ರಮಗಳನ್ನು ಆಲಿಸಲು ಇಚ್ಚಿಸುತ್ತೇನೆ, ನನ್ನ ಅನೇಕ ಸ್ನೇಹಿತರು ಕೂಡ.

ಆಗ, ನಾನು ರಾಷ್ಟ್ರೀಯ ವಿದ್ಯಾಲಯ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ, ಒಮ್ಮೆ ನಮ್ಮ ಶಾಲೆಗೆ ಆಕಾಶವಾಣಿಯ ಮಕ್ಕಳ ಕಾರ್ಯಕ್ರಮಕ್ಕೆ ಆಹ್ವಾನ ಬಂದಿತ್ತು. ಅದಕ್ಕೆ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಅವರ ಬೇರೆಬೇರೆ ಪ್ರತಿಭೆಗಳಿಗೆ ಅನುಗುಣವಾಗಿ ಆರಿಸಿ, ವಿಶೇಷ ತರಬೇತಿಯನ್ನು ನೀಡಿದರು. ನಾನು ತರಗತಿಯಲ್ಲಿ ಬಿಡುವಿನ ವೇಳೆಯಲ್ಲಿ ಕಥೆಗಳನ್ನು ಹೇಳುತ್ತಿದ್ದೆ. ಐದು-ಹತ್ತು ನಿಮಿಷಗಳಲ್ಲಿ ಮುಗಿಯುವ ಸಣ್ಣಕತೆಯಿಂದ ಹಿಡಿದು ಧಾರಾವಾಹಿಯಾಗಿ ಎರಡು ಮೂರು ದಿನಗಳ ಬಿಡುವಿನ ವೇಳೆಯಲ್ಲಿ ಹೇಳುವ ದೊಡ್ಡ ಕಥೆಗಳವರೆಗೆ ಅವು ಇರುತ್ತಿದ್ದವು. ತರಗತಿಯ ಹುಡುಗ ಹುಡುಗಿಯರು ಈ ವಿಚಾರದಲ್ಲಿ ಬಹಳ ಕಟ್ಟುನಿಟ್ಟು. ಹಿಂದಿನ ದಿನ ಕಥೆ ಎಲ್ಲಿಗೆ ನಿಂತಿತ್ತು ಎಂದು ಕರಾರುವಾಕ್ಕಾಗಿ ತಿಳಿಸಿಬಿಡುತ್ತಿದ್ದರು. ಹಾಗಾಗಿ ಮಕ್ಕಳ ಕಾರ್ಯಕ್ರಮದಲ್ಲಿ ಒಂದು ಕಥೆ ಹೇಳುವುದು ನನ್ನ ಪಾಲಿಗೆ ಬಂದಿತ್ತು. ಪಂಚತಂತ್ರದ ಮೂರು ಮೀನುಗಳ ಅಂದರೆ, ಅನಾಗತವಿಧಾತ, ಪ್ರತ್ಯುತ್ಪನ್ನಮತಿ, ಹಾಗೂ ಯದ್ಭವಿಷ್ಯ ಎಂಬ ಹೆಸರಿನ ಮೂರು ಮೀನುಗಳ ಕಥೆಯನ್ನು ನಾನು ಹೇಳಬೇಕೆಂದು ಅಧ್ಯಾಪಕರು ತಿಳಿಸಿದರು.

ತರಬೇತಿಯ ಸಮಯದಲ್ಲಿ ನಾನು ಕಥೆಯನ್ನು ಒಂದೇ ರೀತಿ ಹೇಳುತ್ತಿರಲಿಲ್ಲ. ಕಥೆಯ ಹಂದರ ಬದಲಾಗದಿದ್ದರೂ ಪ್ರತಿ ಬಾರಿಯೂ ಅದನ್ನು ಹೇಳುವಾಗ ಹೊಸದಾಗಿ ವಾಕ್ಯಗಳ ರೆಕ್ಕೆಪುಕ್ಕ ಸೇರಿಸಿ ಇಲ್ಲವೇ ರೆಕ್ಕೆಪುಕ್ಕ ಕಿತ್ತು ಹೇಳುತ್ತಿದ್ದೆ. ನನಗೆ ಕೊಟ್ಟಿದ್ದ ಕಾಲ ಇದರಿಂದ ಏರುಪೇರಾಗುತ್ತಿತ್ತು. ಒಬ್ಬ ಅಧ್ಯಾಪಕರು ಆ ಕಥೆಯನ್ನು ನಾನು ಹೇಳಿದಂತೆ ಬರೆದುಕೊಟ್ಟು ಅದನ್ನೇ ಅನೇಕ ಬಾರಿ ಓದಿಕೊಂಡು ಅಷ್ಟನ್ನು ಮಾತ್ರ ಹೇಳುವಂತೆ ತಿಳಿಸಿದರು.

ನಾನು ಹೇಳುವುದು ಸ್ವಲ್ಪ ದೊಡ್ಡದಾದರೆ ಏನಾಗುತ್ತದೆ ಎನ್ನುವ ನನ್ನ ಪ್ರಶ್ನೆಗೆ ಅಧ್ಯಾಪಕರು "ಕೊನೆಯಲ್ಲಿ ಹಾಡು ಹೇಳುವ ನಿನ್ನ ಸ್ನೇಹಿತ ಗುರುವಿಗೆ ಅವಕಾಶ ಸಿಕ್ಕುವುದಿಲ್ಲ ಅಷ್ಟೇ" ಎಂದಿದ್ದರು. ಅದು ನನಗೆ ಆಗ ಅರ್ಥ ಆಗದಿದ್ದರೂ ನನ್ನ ಸ್ನೇಹಿತ, "ಲೋ ಅರುಣ, ಕಥೆ ಬೇಗ ಹೇಳಿ ಬಿಡೋ. ಜಾಸ್ತಿ ಟೈಮ ತಗೊಬೇಡ" ಎಂದು ನನಗೆ ದುಂಬಾಲು ಬಿದ್ದಿದ್ದಕ್ಕೆ ಒಪ್ಪಿ ಹಾಗೇ ಅಭ್ಯಾಸಮಾಡಿದೆ.

ಆಗೆಲ್ಲ ಮಕ್ಕಳ ಕಾರ್ಯಕ್ರಮವನ್ನು ಧ್ವನಿಮುದ್ರಿಸಿ ಅನಂತರ ಪ್ರಸ್ತುತ ಪಡಿಸುತ್ತಿರಲಿಲ್ಲ. ಅದು ನೇರ ಪ್ರಸಾರವಾಗುತ್ತಿತ್ತು. ಆಗ ಮಕ್ಕಳ ಅಚ್ಚುಮೆಚ್ಚಿನ ಶ್ರೀಮತಿ ಸರೋಜಾದೇವಿ ಅವರು ಆ ಕಾರ್ಯಕ್ರಮದ

ಸಂಚಾಲಕಿ ಆಗಿದ್ದರು. ಸ್ಟುಡಿಯೋದಲ್ಲಿ ನಾವು ಮಕ್ಕಳೆಲ್ಲ ನೆಲದ ಮೇಲೆ ಕೂರುತ್ತಿದ್ದೆವು. ಸರೋಜಾದೇವಿ ಅವರು ಮಧ್ಯದಲ್ಲಿ ಇಟ್ಟಿರುತ್ತಿದ್ದ ಮೈಕಿನ ಬಳಿ ಕುಳಿತುಕೊಳ್ಳುತ್ತಿದ್ದರು. ಪಟ್ಟಿಯಲ್ಲಿದ್ದ ಮಕ್ಕಳ ಹೆಸರನ್ನು ಕರೆದು, ಅವರು ಏನು ಮಾಡುತ್ತಾರೆ ಎಂದು ತಮ್ಮ ಆಕರ್ಷಕ ಆತ್ಮೀಯ ಶೈಲಿಯಲ್ಲಿ ಪರಿಚಯ ಮಾಡಿಕೊಡುತ್ತಿದ್ದರು. ಆಗ ಆ ವಿದ್ಯಾರ್ಥಿಯು ಮೈಕ್ ಬಳಿ ಬಂದು, ತನ್ನ ಪ್ರತಿಭೆಯನ್ನು ತೋರಬೇಕಿತ್ತು. ನೇರಪ್ರಸಾರಕ್ಕೆ ಮೊದಲು ಅಲ್ಲೇ ಒಂದೆರಡು ಬಾರಿ ಅಭ್ಯಾಸವನ್ನು ಕೂಡ ಮಾಡಿಸುತ್ತಿದ್ದರು. "ಯಾರೂ ಮಾತನಾಡಬೇಡಿ", "ಮೈಕ್ ಬಳಿ ಬರುವಾಗ ಆದಷ್ಟು ನಿಶಬ್ದವಾಗಿ ಬನ್ನಿ" ಮೊದಲಾದ ಎಚ್ಚರಿಕೆಗಳ ತಾಲೀಮು ನಡೆದಿರುತ್ತಿತ್ತು.

ನಮ್ಮ ಶಾಲೆಯಲ್ಲಿ ಏನೇ ಕಾರ್ಯಕ್ರಮ ನಡೆದರೂ ಅದರಲ್ಲಿ ಪ್ರಥಮ ಪ್ರಾಶಸ್ತ್ಯ ನನ್ನ ಸಹಪಾಠಿಯಾಗಿದ್ದ ಮಾಲತಿಯದು. ಏಕೆಂದರೆ ಅವಳು ತನ್ನ ಸುಶ್ರಾವ್ಯ ಕಂಠದಲ್ಲಿ ಮಾಡುತ್ತಿದ್ದ ಪ್ರಾರ್ಥನೆ. ಆ ಗಾನಕೋಗಿಲೆ ನಮ್ಮ ತರಗತಿಯಲ್ಲಿದ್ದಳು ಎಂದು ನಮಗೆ ಆಗೆಲ್ಲ ಬಹಳ ಹೆಮ್ಮೆ. ಈ ಮಕ್ಕಳ ಕಾರ್ಯಕ್ರಮವು ಮೊದಲು ಅವಳ ಪ್ರಾರ್ಥನೆಯಿಂದಲೇ ಪ್ರಾರಂಭವಾಗಿತ್ತು. ನನಗೆ ಹೇಗೋ ಮಾಲತಿಗೂ ಹಾಗೆ ಅದು ಆಕಾಶವಾಣಿಯಲ್ಲಿ ಮೊದಲ ಕಾರ್ಯಕ್ರಮ. ಈಚೆಗೆ ಅವಳನ್ನು ಭೇಟಿಯಾದಾಗ ಅಕಸ್ಮಾತ್ತಾಗಿ ಈ ವಿಚಾರವನ್ನು ನೆನಪಿಸಿದೆ. ಆಕೆ "ಅರುಣ, ನಿನಗೆ ಅದು ಎಷ್ಟು ಚೆನ್ನಾಗಿ ನೆನಪಿನಲ್ಲಿದೆ. ಹೌದು, ಬಹುಶಃ ಆಗ ನಾನು ಪ್ರಾರ್ಥನೆಗೆ ಹಾಡುತ್ತಿದ್ದ "ಪಾಲಿಸು ಪಾವನ ಮಹಿಮಾ ವಿಶಾಲ" ಹಾಡನ್ನೇ ಹೇಳಿದ್ದೆ!" ಎಂದು ಸಂತಸದಿಂದ ಜ್ಞಾಪಿಸಿಕೊಂಡಿದ್ದಳು. ಅಂದು ಅಲ್ಲಿ ಪಾದಾರ್ಪಣೆ ಮಾಡಿದ ಈಕೆ, ಆಕಾಶವಾಣಿಯಲ್ಲಿ ಸಾವಿರಾರು ಸುಗಮ ಸಂಗೀತಗಳನ್ನು ಹಾಡಿದ, ಅಸಂಖ್ಯಾತ ಕವನಗಳನ್ನು ಲಕ್ಷಾಂತರ ಬಾರಿ ನಾಡಿನಾದ್ಯಂತ, ಪ್ರಪಂಚದಾದ್ಯಂತ ಅನೇಕ ಕಾರ್ಯಕ್ರಮದಲ್ಲಿ ಹಾಡಿದ ಶ್ರೀಮತಿ ಮಾಲತಿ ಶರ್ಮ (ಕುಮಾರಿ ಮಾಲತಿ ಎಂ.ಎಸ್.) ಎಂದರೆ ನಿಮಗೆಲ್ಲ ಆಶ್ಚರ್ಯವಾಗ ಬಹುದಲ್ಲವೇ? ಆ ಮೇರು ಸುಗಮ ಸಂಗೀತಗಾರ್ತಿಯ ಮೊದಲ ಆಕಾಶವಾಣಿಯ ನೇರಪ್ರಸಾರದ ಸಮಯದಲ್ಲಿ ಭಾಗವಹಿಸಿ, ಅದೇ ಕೊಠಡಿಯಲ್ಲಿ ಕುಳಿತಿದ್ದ, ಚಪ್ಪಾಳೆ ತಟ್ಟಿದ ಅದೃಷ್ಟ ನನ್ನದು.

ಅಂದು ಆ ಮಕ್ಕಳ ಕಾರ್ಯಕ್ರಮದಲ್ಲಿ ಎಲ್ಲರೂ ನಿಖರವಾಗಿ ಸಮಯಕ್ಕೆ ಪೂರಕವಾಗಿ ಅವರವರ ಕಾರ್ಯಗಳನ್ನು ನಿರ್ವಹಿಸಿದ್ದರಿಂದ ಆ ಕಾರ್ಯಕ್ರಮವು ಅತ್ಯುತ್ತಮವಾಗಿ ಮೂಡಿಬಂದಿತ್ತು. ಅಧ್ಯಾಪಕರಿಗೂ ಶ್ರೀಮತಿ ಸರೋಜಾದೇವಿ ಅವರಿಗೂ ಬಹಳ ಸಂತೋಷವಾಗಿತ್ತು. ಆ ಕಾರ್ಯಕ್ರಮದ ಅನಂತರ ನಮ್ಮನ್ನೆಲ್ಲ ಆಕಾಶವಾಣಿಯ ಮುಂದಿದ್ದ ಹುಲ್ಲುಗಾವಲಿನಲ್ಲಿ ವೃತ್ತಾಕಾರವಾಗಿ ಕೂರಿಸಿ, ಅಧ್ಯಾಪಕರು ಶಾಲೆಯ ಕಡೆಯಿಂದ ತಂದಿದ್ದ ಬಿಸ್ಕತ್ತು ಬನ್‌ಗಳನ್ನು ಹಂಚಿದರು. ಆಕಾಶವಾಣಿಗೆ ನಾವು ಬಂದಿದ್ದಂತೆ, ಶಿವಾಜಿನಗರಕ್ಕೆ ನಡೆದುಕೊಂಡು ಹೋಗಿ ಬಿಟಿಎಸ್ ಬಸ್ಸಿನಲ್ಲಿ ಶಾಲೆಗೆ ಹಿಂದಿರುಗಿದೆವು.

ಮಾರನೆಯ ದಿನ ಶಾಲೆಯಲ್ಲಿ ನಾವೆಲ್ಲ ಚೋಟಮೋಟ ಹೀರೋ ಹಿರೋಯಿನ್‌ಗಳಾಗಿದ್ದೆವು. ಹಲವು ದಿನಗಳ ಕಾಲ ನನ್ನನ್ನು ಮಾತನಾಡಿಸಿದ ಎಲ್ಲರಿಗೂ ನಾನು ಆಕಾಶವಾಣಿಯಲ್ಲಿ ಹೇಳಿದ ಕತೆಯ ಬಗ್ಗೆ ತಿಳಿಸಿ

ಖುಷಿಪಟ್ಟಿದ್ದೆ. ನಮ್ಮ ತಾಯಿಯವರು “ಸಾಕು; ಎಲ್ಲರಿಗೂ ಹೇಳಿ ಕೊಚ್ಚಿಕೊಳ್ಳಬೇಡ” ಎಂದು ಹಲವು ಬಾರಿ ಹೇಳಿದ ಮೇಲೆ ಸುಮ್ಮನಾಗಿದ್ದೆ.

ಹೀಗೆ ಆಕಾಶವಾಣಿಯ ಬಾಲಜಗತ್ – ನನಗೆ ಒಂದು ಸುಮಧುರ ನೆನಪಾಗಿ ಉಳಿದಿದೆ.

ಇತಿಹಾಸಪ್ರಿಯರಿಗೆ: ಆಕಾಶವಾಣಿ, ಬೆಂಗಳೂರು ಕೇಂದ್ರದ ಐವತ್ತು ವರ್ಷಗಳ ಚರಿತ್ರೆಯನ್ನು ದಾಖಲಿಸಲು **“ನುಡಿತೇರನೆಳೆದವರು – ಬಾನುಲಿ ಕಲಿಗಳು”** ಎಂಬ ಶೀರ್ಷಿಕೆಯಲ್ಲಿ ವಿಶೇಷ ಕಾರ್ಯಕ್ರಮದ ಐವತ್ತು ಸಂಚಿಕೆಗಳು ಪ್ರಸಾರಗೊಂಡವು. ಅವುಗಳಲ್ಲಿ ಆಕಾಶವಾಣಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮಾಡಿ ಮುನ್ನಡೆಸಿದ್ದ ಅನೇಕ ಪ್ರಸಾರ ಮಾಧ್ಯಮದ ಹಿರಿಯರನ್ನು, ಅವರು ಮಾಡಿದ ಕಾರ್ಯಗಳನ್ನು ಪರಿಚಯ ಮಾಡಿಸಲಾಗಿದೆ. ಈ ಮಾಲೆಯಲ್ಲಿ ಶ್ರೀಮತಿ ಮಾಲತಿ ಶರ್ಮಾ ಅವರ ಬಗ್ಗೆ 30ನೇ ಸಂಚಿಕೆಯಲ್ಲಿ ಹಾಗೂ ಶ್ರೀಮತಿ ಸರೋಜಾದೇವಿ ಅವರ ಬಗ್ಗೆ 50ನೇ ಸಂಚಿಕೆಯಲ್ಲಿ ಅನೇಕ ವಿವರಗಳು ಸಿಕ್ಕುತ್ತವೆ.

ಆಸಕ್ತರು ಈ ಯೂಟ್ಯೂಬ್ ಕೊಂಡಿಯನ್ನು ಪರಿಶೀಲಿಸಬಹುದು:
https://youtu.be/wQ7SGmUSDVI https://youtu.be/Pu-It_LZp10



ಚಿತ್ರ: ಶ್ರೀ ಎಚ್.ಆರ್.ಗುರುರಾಜ ಶಾಸ್ತ್ರಿ

ಅಳತೆ ಮಾನಗಳ ಅಂಗಳದಲ್ಲಿ

– ಜಿ.ವಿ.ನಿರ್ಮಲ

ಸಂಜೆಯಾಗುತ್ತಿದ್ದಂತೆ ಅಡುಗೆಭಟ್ಟ ಕೃಷ್ಣ ಅಮ್ಮಾವ್ರ ಮುಂದೆ ನಿಂತು "ಅಮ್ಮಾವ್ರೆ, ರಾತ್ರಿ ಅಡುಗೆಗೆ ಎಷ್ಟು ಅಕ್ಕಿ ಹಾಕಬೇಕು?' ಎಂದು ಕೇಳಿದ.

ಮೊಮ್ಮಗಳಿಗೆ ತಲೆ ಬಾಚುತ್ತಿದ್ದ ಅಮ್ಮಾವ್ರು, "ಏ ಕೃಷ್ಣ, ಇವತ್ತು ಏಕಾದಶಿ. ಬರಿ ಮಕ್ಕಳ ಊಟ. ತಲೆ ಒಡೆದು ಒಂದರ್ಧ ಸೇರು ಅಕ್ಕಿ ಹಾಕು ಸಾಕು" ಅಂದ್ರು.

"ಅಮ್ಮಾವ್ರೆ ಯಾರ ತಲೆ ಒಡೀಲಿ" ನಗುತ್ತಲೇ ಕೃಷ್ಣ ಮರು ಪ್ರಶ್ನೆ ಹಾಕಿದ.

"ಅಯ್ಯೋ ಮಾರಾಯ ಯಾರ ತಲೇನೂ ಒಡೀ ಬೇಡ. ತಲೆ ಹರಟೆ ಸಾಕು. ಹೋಗಿ ಅರ್ಧ ಸೇರಿನ ತಲೆ ಒಡೆದು ಅಕ್ಕಿ ಹಾಕು. ಮುಸ್ಸಂಜೆ ಹೊತ್ತು ಕೆಟ್ಟ ಮಾತಾಡ್ಬೇಡ" ಹುಸಿಮುನಿಸು ತೋರುತ್ತಾ ಗದರಿದರು.

ನಗುತ್ತಲೇ ಅಡುಗೆ ಮನೆಯತ್ತ ಕಾಲು ಹಾಕಿದ ಕೃಷ್ಣ ಸೊಂಟದೊಳಗಿನ ನಶ್ಯದ ಡಬ್ಬಿಯಿಂದ ಒಂದು ಚಿಟಿಕೆ ನಶ್ಯ ತೆಗೆದುಕೊಂಡ. ಅದನ್ನು ಗಮನಿಸಿದ ಅಮ್ಮಾವ್ರು "ಏ, ಕೃಷ್ಣ, ನಿನ್ನ ಚಿಟಿಕೇಲಿರೋದು ನಂಗೆ ಕಾಣಿಸ್ತು. ಎಷ್ಟು ಹೇಳಿದ್ರೂ ನಿನ್ನ ದುರಭ್ಯಾಸ ಬಿಡಲ್ಲ. ಅಡುಗೆ ಕೆಲಸ ಶುರು ಮಾಡೋಕ್ಕೆ ಮೊದ್ಲು ನಿನ್ನ ಕೈ ತೊಳ್ಕೋಳೋದನ್ನ ಮರೀ ಬೇಡ್ವೋ".

ತಲೆ ಬಾಚಿಸಿಕೊಳ್ಳುತ್ತಾ ಕುಳಿತಿದ್ದ ಮೊಮ್ಮಗಳು, "ಅಜ್ಜಿ, ಸೇರು ಪಾವುಗಳಿಗೂ ತಲೆ ಇರತ್ತಾ? ನಾನು ನೋಡೇ ಇಲ್ಲ! ಭಟ್ರು ಅರ್ಧ ಸೇರಿನ ತಲೆ ಒಡೆದ್ರೆ ಬೇರೆ ಸೇರು ತೊಗೋತೀರಾ ಅಜ್ಜೀ?" ಎಂದಾಗ ನಗುವ ಸರದಿ ಅಜ್ಜಿಯದಾಯ್ತು.

"ಅಯ್ಯೋ, ಈಗಿನ ಮಕ್ಕಳಿಗೆ ನಮ್ಮ ಕಾಲದ ವಿಷ್ಯ ಏನೂ ಗೊತ್ತಾಗಲ್ಲ. ನಿಮ್ಮ ಕಾಲದ ವಿಷ್ಯ ನಮ್ಮ ತಲೇಗೆ ಹೋಗಲ್ಲ. ಮಮತಾ, ಸೇರಿಗೆ ತಲೇನೂ ಇಲ್ಲ. ಬಾಲ ಮೊದ್ಲೇ ಇರಲ್ಲ. ತಲೆ ಒಡ್ಯೋದೂ ಅಂದ್ರೆ ಅರ್ಧ ಸೇರಿನ ಭರ್ತಿ ಗೋಪುರವಾಗಿ ಅಕ್ಕಿ ತುಂಬಿ, ಅದರ ಅಂಚಿನ ತನಕ ಮಾತ್ರ ಅಕ್ಕಿ ಉಳಿಯೋ ಹಾಗೆ ಮೇಲಿನ ಅಕ್ಕಿಯನ್ನು ತಳ್ಳಿ ಬಿಡೋದು ಅಷ್ಟೆ. ಈಗ ಹೋಗು ನಿನ್ನ ಆಟವೋ, ಪಾಠವೋ ನೋಡ್ಕೋ ಹೋಗು' ಎಂದ ಕೂಡಲೇ ಮಮತ 'ಅಜ್ಜಿ, ಅದೇನೋ ಚಿಟಿಕೇಲಿರೋದು ಕಾಣಿಸ್ತು ಅಂತಿದ್ಯಲ್ಲ, ಚಿಟಿಕೆ ಅಂದ್ರೆ ಏನಜ್ಜಿ?'

"ಅಬ್ಬಬ್ಬಾ ಈ ಹುಡ್ಗಿ ಕಿವಿ ಅದೇನು ಚುರುಕೋ. ಈಗ ತಾನೆ ಕೃಷ್ಣ ಎರಡು ಬೆಟ್ಟುಗಳ ನಡುವೆ ನಶ್ಯ ತೊಗೋಳೋದು ನೋಡ್ಲಿಲ್ವಾ? ಎರಡು ಬೆಟ್ಟುಗಳ ಮಧ್ಯೆ ಸ್ವಲ್ವೇ ಸ್ವಲ್ಪ ಪುಡಿ ಸಾಮಾನು ಇಟ್ಕೊಂಡ್ರೆ ಚಿಟಿಕೆ. ಹಾಗೇ ಇವತ್ತು ಬೆಳಿಗ್ಗೆ ನಾನು ನಿಮಗೆಲ್ಲ ಕೈಯ್ಯಲ್ಲೇ ಸ್ವಲ್ಪ ಸ್ವಲ್ಪ ಉಪ್ಪಿಟ್ಟು ಉಂಡೆ ಮಾಡಿ ಕೊಟ್ನಲ್ಲಾ ಅದು ಪಿಡಿಚೆ. ಕಳ್ಳೇಪುರಿ ಕೊಡ್ತೀನಲ್ಲಾ ಒಂದು ಅಂಗೈ ತುಂಬ ಅದು ಹಿಡಿ. ಎರಡೂ ಅಂಗೈಯ್ಯಲ್ಲಿ ತುಂಬಿದ್ರೆ ಬೊಗಸೆ. ಚಿಟಿಕೆ, ಪಿಡಿಚೆ, ಹಿಡಿ, ಬೊಗಸೆ ಎಲ್ಲಾದರ ಅರ್ಥ ಆಯ್ತಾ?"

"ಅಜ್ಜಿ ಚಟಾಕು ಅಂದ್ರೆ ಏನು?"

"ಸರಿ ಹೋಯ್ತು. ನಿಂಗೆ ಸೇರು, ಪಾವು, ಅರಪಾವು, ಚಟಾಕು, ಬಳ್ಳ, ಕೊಳಗ ಎಲ್ಲಾ ಒಂದೇ ಸಾರಿ ಹೇಳ್ಬಿಡ್ತೀನಿ. ಆದ್ರೆ ಅದಕ್ಕೆ ಮೊದ್ಲು ಗಣೇಶ, ಉಪೇಂದ್ರ ಎಲ್ರನ್ನೂ ಕರಿ. ಇಲ್ದಿದ್ರೆ ಒಬ್ಬೊಬ್ರಿಗೆ ಒಂದೊಂದು ಸಲ ಹೇಳಕ್ಕೆ ಆಗಲ್ಲ" ಎಂದು ಜಾಗ ಬಿಟ್ಟು ಎದ್ದರು.

ಈ ಪ್ರಸಂಗ ನಡೆದದ್ದು ಸುಮಾರು ಐವತ್ತು ವರ್ಷಗಳ ಹಿಂದೆ. ನಾಗರಿಕತೆ ಬೆಳೆದಂತೆ ಅಳತೆ ಮಾನಗಳು ಬದಲಾಗುತ್ತಿದ್ದವು. ಒಂದೊಂದು ಜನಾಂಗದಲ್ಲಿ ಒಂದೊಂದು ಬಗೆಯ ಅಳತೆಗಳೂ ಇದ್ದವು. ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ಬಗೆಬಗೆಯ ಅಳತೆ ಮಾನಗಳಿವೆ. ಇವು ಜನಜೀವನದಲ್ಲಿ ಹಾಸು ಹೊಕ್ಕಾಗಿವೆ.

ಬಸವಣ್ಣನವರ ಒಂದು ವಚನದಲ್ಲಿ ಅಳತೆಯ ಮಾನಗಳನ್ನೇ ಹೇಳುತ್ತಾ ಕೂಡಲಸಂಗಮನನ್ನು ತಲುಪುವ ಪರಿಯನ್ನು ಹೇಳಿರುವುದನ್ನು ಕಂಡಾಗ ಅಚ್ಚರಿಯಾಯ್ತು.

ಅಂಗುಲ ಹನ್ನೆರಡು ಕೂಡಲು ಒಂದು ಗೇಣು,
ಗೇಣು ಎರಡು ಕೂಡಲು ಒಂದು ಮೊಳ,
ಮೊಳವೆರಡು ಕೂಡಲು ಒಂದು ಹಸ್ತ,
ಹಸ್ತವೆರಡು ಕೂಡಲು ಒಂದು ಮಾರು,
ಮಾರೆರಡು ಕೂಡಲು ಒಂದು ಜಂಘೆ,
ಜಂಘೆ ಏಳುನೂರೆಪ್ಪತ್ತು ಕೂಡಲು ಒಂದು ಪಾದಚ್ಛಯ,
ಪಾದಚ್ಛಯವೆರಡು ಸಾವಿರದೆಂಟನೂರು ಕೂಡಲು ಒಂದು ಕೂಗಳತೆ,
ಕೂಗಳತೆ ನಾಲ್ಕು ಕೂಡಲು ಒಂದು ಹರದಾರಿ,/ಹರಿದಾರಿ
ಹರದಾರಿ ನಾಲ್ಕು ಕೂಡಲು ಒಂದು ಯೋಜನ,
ಅಂಥ ಯೋಜನ ನಾಲ್ಕು ಚೌಕಕ್ಕು ಹನ್ನೆರಡು ಹನ್ನೆರಡು
ಕೂಡಲು ಬಳಸಿ ನಾಲ್ವತ್ತೆಂಟು ಯೋಜನ ಪ್ರಮಾಣಿನ ಕಟ್ಟಳೆಯಾಯಿತ್ತು.
ಇಂತಪ್ಪ ಕಟ್ಟಳೆಯಾಗಿದ್ದ ಕಲ್ಯಾಣದೊಳಗಿರುವ ಗಣಂಗಳೆಲ್ಲರನೂ
ಕೂಡಲಸಂಗಯ್ಯಾ ನಿಮ್ಮೊಳು ಕಂಡು ಸುಖಿಯಾಗರ್ದೆನು

ಎನ್ನುತ್ತಾರೆ. ಈ ವಚನದ ವಿಶೇಷವೆಂದರೆ ಇಲ್ಲಿ ಸೂಚಿಸಿರುವ ಅಳತೆಗಳು ಜನರು ಬಳಸುವ ಅಳತೆಯ ಮಾನಗಳಿಗೆ ಸಮಾನವಾಗಿವೆ.

ಭಾರತದಲ್ಲಿ ಬ್ರಿಟಿಷ್ ಪದ್ಧತಿಯಿಂದ ಮೆಟ್ರಿಕ್ ಪದ್ಧತಿಗೆ ಅಳತೆ ಮಾನಗಳು ಬದಲಾದಾಗಲಂತೂ ಚಿಕ್ಕವರಿಂದ ದೊಡ್ಡವರವರೆಗೆ ವಿಧವಿಧವಾದ ಫಜೀತಿಯೇ ಆಗುತ್ತಿತ್ತು. ಅಮ್ಮಾವ್ರು ಅಂಗಡಿಗೆ ಹೋಗಿ 100 ಗ್ರಾಂ ಸಾಸಿವೆ ಎನ್ನುವ ಬದಲು 100 ಕಿಲೋಗ್ರಾಮ್ ಸಾಸಿವೆ ಎಂದಾಗ 'ನನ್ನ ಅಂಗಡಿಯಲ್ಲೇ ಅಷ್ಟೊಂದು ಸಾಸಿವೆ ಮಡಗಿಲ್ಲ ಅಮ್ಮಾವ್ರೆ' ಎಂದು ಅಂಗಡಿಯವ ನಕ್ಕಾಗ ಅಮ್ಮಾವ್ರಿಗೆ ತಬ್ಬಿಬ್ಬು. ಎಣ್ಣೆ ಅಂಗಡಿಯಲ್ಲಿ ಮೀಟರ್ ಎಣ್ಣೆ ಕೊಡಿ ಎಂದಾಗ, ಪಕ್ಕದಲ್ಲಿದ್ದ ಯುವಕ ಕಿಸಕ್ ಎಂದು ನಕ್ಕಾಗ ಅಮ್ಮಾವ್ರಿಗೆ ಇಡೀ ಮೆಟ್ರಿಕ್ ಪದ್ಧತಿಯ ಮೇಲೆ ಕೋಪ. ಅಂತು ಇಂತೂ ಮೀಟರ್, ಲೀಟರ್, ಗ್ರಾಮ್, ಕಿಲೋಗ್ರಾಂಗಳನ್ನು ದಿನದಿನವೂ ಕಲಿತು ಸಂಸಾರ ತೂಗಿಸುವಷ್ಟರಲ್ಲಿ ಅಮ್ಮಾವ್ರು ಮತ್ತೊಂದು ಜನ್ಮ ತಾಳಿದಷ್ಟು ಸೋತು ಸುಣ್ಣವಾಗಿದ್ದರು. ಮುಪ್ಪಿನಲ್ಲಿದ್ದವರು ಕಲಿಯಲಾರದೆ ಸತ್ತು ಸ್ವರ್ಗ ಸೇರಿದರು.

ಕಾಸು, ಪೈಸೆಗಳ ಲೆಕ್ಕದಲ್ಲಂತೂ ಹಲವಾರು ದೋಷಗಳಿದ್ದಂತೆ ಕಾಣಿಸುತ್ತಿತ್ತು. ಅಂಗಡಿಯಲ್ಲಿ ಮೂರು ಕಾಸಿಗೆ ರುಚಿರುಚಿಯಾದ ಒಂದು ಕೊಬ್ಬರಿ ಮಿಠಾಯಿ ಸಿಕ್ಕುತ್ತಿತ್ತು. ಒಂದಾಣೆಗೆ ನಾಲ್ಕು ಮಿಠಾಯಿ ಕೊಡುತ್ತಿದ್ದ ಅಂಗಡಿಯವ, ನಯಾ ಪೈಸೆಗಳಲ್ಲಿ ಕೊಟ್ಟರೆ ಆರು ನಯಾಪೈಸೆಗಳಿಗೆ ಒಂದಾಣೆಯಾದ್ದರಿಂದ ಮೂರೇ ಕೊಬ್ಬರಿ ಮಿಠಾಯಿ ಕೊಡುತ್ತಿದ್ದ. ಆತನಿಗೆ ಮೆಟ್ರಿಕ್ ಅಳತೆ ಮಾನಗಳು ವರದಾನವಾಗಿತ್ತು.

ಉಡುವ ಸೀರೆ ಗಜಕ್ಕೆ ಬದಲಾಗಿ ಮೀಟರ್ ಆಯಿತು. ಮಹಿಳಾ ಮಣಿಗಳ ಕಣ್ಣು ಪಿಳಿಪಿಳಿಗುಟ್ಟಿತು. ಗಜ–ಮೀಟರ್ ಪದಗಳು ತಲೆಯಲ್ಲಿ ಗುಯ್ಗುಟ್ಟಿದವು. ಐದು ಮೀಟರ್ ಸೀರೆ ಸಾಕೆಂದರೂ ಕೆಲವರಿಗೆ ಅನುಮಾನ. ಅಂಗಡಿಯಲ್ಲಿ ಸೀರೆ ಆಯ್ಕೆ ಮಾಡಿಕೊಳ್ಳಲು ಗಂಟಾನುಗಟ್ಟಲೆ ಕಳೆಯುವ ಮಹಿಳೆಯರು ಅಳತೆಯ ಅನುಮಾನವನ್ನು ಪರಿಹರಿಸಿಕೊಳ್ಳಲು ಮತ್ತಷ್ಟು ಸಮಯ ಕಳೆಯುವಂತಾಯಿತು. ಆರು, ಏಳು, ಒಂಭತ್ತು ಗಜಗಳ ಸೀರೆಗಳ ಬಗ್ಗೆ ಹೆಂಗಳೆಯರಿಗೆ ಬಿಡಿಸಿ ಹೇಳಿ ಅರ್ಥ ಮಾಡಿಸುವಷ್ಟರಲ್ಲಿ ಅಂಗಡಿಯವರು ಸುಸ್ತಾದರು. ಕೊನೆಗೆ ಅಷ್ಟಾಗಿ ಚಾಲ್ತಿಯಲ್ಲಿಲ್ಲದ ಏಳು ಮತ್ತು ಒಂಭತ್ತು ಗಜಗಳ ಸೀರೆಗಳಿಗೆ ಮೆಟ್ರಿಕ್ ಅಳತೆಯಲ್ಲಿ ಹೇಳುವುದನ್ನೇ ಕೈಬಿಟ್ಟರು. ಇವೆಲ್ಲವೂ ಭಾರತದಲ್ಲಿ ಮೆಟ್ರಿಕ್ ಪದ್ಧತಿ ಜಾರಿಗೆ ಬಂದ 1960ರ ಸುಮಾರಿನಲ್ಲಿ ಜರುಗಿದ ಘಟನೆಗಳು.

ಭಾರತದಲ್ಲಿ ಈಗ ಜಾರಿಯಲ್ಲಿರುವ ಮೆಟ್ರಿಕ್ ಪದ್ಧತಿ ಹಂತ ಹಂತವಾಗಿ ಜಾರಿಗೆ ಬಂದದ್ದು 1955ರಿಂದ 1962ರ ಸುಮಾರಿನಲ್ಲಿ. ಅದಕ್ಕೆ ಮುಂಚೆ ವಿವಿಧ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಅಳತೆಗಳಿದ್ದವು. ಸುಮಾರು ಸಲ ಇದರಿಂದ ಗೊಂದಲಗಳಾಗಿದ್ದೂ ಉಂಟು. ಹಾಗಾಗಿ ಭಾರತದಲ್ಲಿ ಮೆಟ್ರಿಕ್ ಪದ್ಧತಿ ಬಹಳ ಸಲೀಸಾಗಿ ಜಾರಿಗೆ ಬಂದು ಜನರಿಗೆ ಅನುಕೂಲವಾಯಿತು.

ಅಳತೆಯ ಮಾನಗಳಿಲ್ಲದೆ, ಅಳತೆ ಮಾಡದೆಯೇ ಬದುಕುವುದು ಸಾಧ್ಯವಿಲ್ಲ. ಪ್ರಾಚೀನ ಕಾಲದಲ್ಲಿಯೂ ಮನುಷ್ಯ ಹಗಲು ರಾತ್ರಿಗಳನ್ನು, ಋತುಗಳನ್ನು ಚಂದ್ರ ಸೂರ್ಯರ ಗತಿಯಿಂದ ತಿಳಿದುಕೊಳ್ಳುತ್ತಿದ್ದನಲ್ಲವೇ? ಮುಂದೆ ವ್ಯವಸಾಯ, ವ್ಯವಹಾರಗಳನ್ನು ರೂಢಿಸಿಕೊಂಡಾಗ ಉದ್ದ, ತೂಕ, ಗಾತ್ರ ಇತ್ಯಾದಿಗಳನ್ನು ಅಳೆಯುವ ಅನಿವಾರ್ಯತೆ ಉಂಟಾಯಿತು. ನಾಗರಿಕತೆ ಬೆಳೆದಂತೆಲ್ಲಾ ತಾಪಮಾನ, ವಿದ್ಯುಚ್ಛಕ್ತಿ, ಬೆಳಕು, ಶಬ್ದ ಹೀಗೆ ಮತ್ತಷ್ಟು ಮಗದಷ್ಟು ಪರಿಮಾಣಗಳನ್ನು ಅಳೆಯುವುದು ಅಗತ್ಯವಾಯಿತು.

ಉದ್ದದ ಮಾನವನ್ನೇ ತೆಗೆದುಕೊಳ್ಳಿ. ಎರಡು ಪ್ರದೇಶಗಳ ನಡುವಿನ ದೂರ, ಜಮೀನಿನ ಅಳತೆಗಳು, ಬಟ್ಟೆ, ಹಗ್ಗ ಸಾಮಾನುಗಳ ಉದ್ದ ಇತ್ಯಾದಿಗಳು. ಇವಲ್ಲದೆ ಬಹಳ ತೆಳುವಾದ ಹೊಸ ಹೊಸ ಪದಾರ್ಥಗಳನ್ನು ಕಂಡುಹಿಡಿದಾಗ ಅವುಗಳ ದಪ್ಪ, ಅತಿ ಚಿಕ್ಕ ಪರಮಾಣುವಿನ ಚಲನೆಯ ಪಥದ ವ್ಯಾಸ, ಪಥಗಳ ನಡುವಿನ ದೂರ ಇತ್ಯಾದಿಗಳನ್ನು ಅಳೆಯುವುದು ದೊಡ್ಡ ಸವಾಲು. ಇವಕ್ಕೆ ಪ್ರತ್ಯೇಕ ಮಾನಗಳೇ ಬಳಕೆಯಾಗುತ್ತವೆ. ಮುಂದೆ ವಿಜ್ಞಾನದ ಪ್ರಯೋಗಗಳು ಆಕಾಶಕ್ಕೆ ಜಿಗಿದಾಗ ಇವುಗಳ ಸ್ವರೂಪವೇ ಬದಲಾಗಿ ಬೇರೆ ಮಾನಗಳು ನಿಗದಿಯಾದವು. ಉದಾಹರಣೆಗೆ ಜ್ಯೋತಿರ್ವರ್ಷವನ್ನೇ ಗಮನಿಸಿ. 'ವರ್ಷ' ಎಂದು ಹೆಸರಿದ್ದರೂ ಇದು ಖಂಡಿತ ಸಮಯ ಸೂಚಕವಲ್ಲ. ಜ್ಯೂಲಿಯನ್ ದಿನಸೂಚಿಯ ಕಾಲಮಾನದಂತೆ ಒಂದು ವರ್ಷದಲ್ಲಿ ಬೆಳಕು ಕ್ರಮಿಸುವ ದೂರವೇ ಜ್ಯೋತಿರ್ವರ್ಷ.

ಆಧುನಿಕ ಜಗತ್ತಿನಲ್ಲಿ ಅತಿ ಚಿಕ್ಕ ಪರಿಮಾಣದಿಂದ, ಅತ್ಯಂತ ದೊಡ್ಡ ಪರಿಮಾಣಗಳನ್ನು ನಿಖರವಾಗಿ ಅಳೆಯುವ ಸಂದರ್ಭಗಳು ಹೆಚ್ಚುತ್ತಲೇ ಇವೆ. ಪ್ರಪಂಚದ ವಿವಿಧ ಭಾಗಗಳಲ್ಲಿ ಅಳೆಯುವ ಅಳತೆಯ ಮಾನಗಳಲ್ಲಿ ಏಕರೂಪತೆ ಇರುವುದೂ ಅವಶ್ಯಕ. ಮೂಲಮಾನಗಳಲ್ಲದೆ ಸಂಕೀರ್ಣ ಮಾನಗಳೂ ಸೇರಿದರೆ ಒಟ್ಟು ಎಷ್ಟು ಮಾನಗಳಿವೆ ಎಂದು ಅಂದಾಜಿಸುವುದು ಕಷ್ಟಸಾಧ್ಯ.

ಭಾರತದಲ್ಲಿ ಬಹಳ ಹಿಂದೆ ಜಾರಿಯಲ್ಲಿದ್ದ ಅಳತೆಗಳ ಬಗ್ಗೆ ಕೆಲವು ವಿಷಯಗಳು ಬಹಳ ಕುತೂಹಲಕರವಾಗಿವೆ. ಅಷ್ಟೇ ಏಕೆ, ಹಲವು ದೇಶಗಳಲ್ಲಿ ವಿವಿಧ ಅಳತೆಗಳು, ಪದ್ಧತಿಗಳೂ ಇದ್ದ ಅತಿ ಪ್ರಾಚೀನ ಕಾಲದಲ್ಲಿಯೂ ಕೆಲವು ಸ್ವಾಮ್ಯಗಳೂ ಕಾಣಬರುತ್ತವೆ. ಉದಾಹರಣೆಗೆ ಬಹಳ ಹಿಂದೆಯೇ ನಾಗರಿಕತೆಯಲ್ಲಿ ಮುನ್ನಡೆ ಸಾಧಿಸಿದ್ದ ಈಜಿಪ್ಟ್, ಮೆಸೆಪಟೋಮಿಯಾ ಮುಂತಾದ ದೇಶಗಳಲ್ಲಿದ್ದ ಅಳತೆಮಾನಗಳು ಭಾರತದ ಸಿಂಧು ಸಂಸ್ಕೃತಿಯ ಅಳತೆಮಾನಗಳೊಂದಿಗೆ ಹೋಲುತ್ತವೆ. ಹಾಗಿದ್ದರೆ ಆ ಅಳತೆಗಳ ಮೂಲ ಏನು? ಅವು ಸಹಸ್ರಾರು ಮೈಲಿಗಳು ಪಯಣಿಸಿದ್ದು ಹೇಗೆ?

ಹೀಗೆ ಅಳತೆ ಮಾನಗಳ ಅಂಗಳದಲ್ಲಿ ವಿಹರಿಸುತ್ತಾ ತಿಳಿದುಕೊಳ್ಳುವ ಹಲವಾರು ಸ್ವಾರಸ್ಯಕರವಾದ ಸಂಗತಿಗಳಿವೆ.

*****

ನಾರಸಿಂಹ ದಂಡಕ

– ರತ್ನ

ಎಡಬಿಡದೆ ಅನುದಿನವು ಭಜಿಸು ಭಜಿಸೆಲೆ ಮನವೆ ಭಕ್ತವತ್ಸಲನಾದ ನರಸಿಂಹನ, ಉಗ್ರ ದಂಷ್ಟ್ರಾಕರಾಲನ, ಕ್ರೂರ ವಜ್ರನಖನ, ಪ್ರಹ್ಲಾದ ವರದನ, ದೇವತಾ ವಂದ್ಯನ, ಕಂಬದಿಂದುಸಿದನ, ಅಂಬುಜಾಸನ ಪಿತನ, ಅಂಬುಜೋದ್ಭವ ನುತನ, ಅಂಬುಜೋದ್ಭವೆಯ ವರಕಾಂತನ, ಬಿಂಬದಲು ನೆಲೆಸಿಹನ, ಕುಂಭಜ ಸ್ತುತನ, ಅಂಬಿಕಾ ಸಹಭವನ, ಜಂಬಾರಿ ವಂದ್ಯನ, ನಾಗಾರಿ ವಾಹನನ, ಸರ್ಪಾರಿ ಕೇತನನ, ವಿಕ್ರಾಂತ ನರನ ಅವತಾರನ; ಕನಕವಸನನುಜನ ಮರ್ದಿಸುತ ಭೂರಮೆಯ ಉದ್ಧಾರ ಗೈದವನ, ಸಾಮಗಾನಪ್ರಿಯನ, ಕಾಮಿತಾರ್ಥಪ್ರದನ, ಭಕ್ತಾನುರಕ್ತನ, ದೇವದೇವೇಶನ, ಸ್ವಾಮಿ ಸರ್ವೇಶನ ಭಜಿಸುತಿರು ಮನವೇ.

ತ್ರಾಹಿ ಶಕ್ರಾನುಜ, ಪಾಹಿ ಗರುಡಧ್ವಜ, ತ್ರಾಹಿ ನಿಜಭೇಷಜ, ಪಾಹಿ ಧರ್ಮಧ್ವಜ, ತ್ರಾಹಿ ಸತ್ಯಧ್ವಜ, ಪಾಹಿ ಕಾಲಧ್ವಜ, ತ್ರಾಹಿ ಧರ್ಮರಾಜ, ತಾಲಧ್ವಜಾವರಜ, ಕೋಟಿ ಸುರಭೂಜ, ನಿಜ ನೈಕಜಾ, ವಿಕೀರ್ಣ ಕೇಸರ ಶಿರೋಜ ವಿರಾಜ, ಉಗ್ರ ಸಿಂಹರಾಜ, ಮಹಾತೇಜ ಪೂರ್ವಜ, ತ್ರಾಹಿಮಾಂ ತ್ರಾಹಿಮಾಂ ವಜ್ರಸ್ತಂಭಜ, ಪಾಹಿಮಾಂ ಶ್ರೀಜಯಧ್ವಜಾ;

ನೀಲಲೋಹಿತ ಬಂಧು ಕಾರುಣ್ಯ ಸಿಂಧು, ಪಂಚಾನನಾ ವದನ, ಹೇಮವಸ ದಲನ, ಪಾಲ್ಗಡಲ ಸದನ, ಫಣಿತಲ್ಪಶಯನಾ, ಹಸ್ತಪಾದಾಂಘ್ರಿ ಬಹು ಯೋಜನಾ, ಶಿಪಿವಿಷ್ಟ ವನಮಾಲಿ, ತವ ಬಂಧು ಸಖ ಶೂಲಿ, ಸಹಜಾತೆಪತಿ ತವ ಪರಮಾಪ್ತ ಮಿತ್ರ, ನರಕೇಸರೀ ಗಾತ್ರ, ಅತಿ ವಿಚಿತ್ರ, ಲಕ್ಷ್ಮೀ ಕಳತ್ರ, ಅಗ್ನಿಶಿಖಿ ನೇತ್ರ, ಜಗದೇಕ ಸೂತ್ರ, ಪರಮಪವಿತ್ರಾ;

ಕಾರಂಜ ನರಸಿಂಹ, ಮಾಲೋಲ ನರಸಿಂಹ, ಭವ ಕುರಂಗಚ್ಛೇದ ನರಸಿಂಹ, ಛಾತ್ರವತ ನರಸಿಂಹ, ಕ್ರೋಧವಶ ನರಸಿಂಹ, ಯೋಗಾ ನರಸಿಂಹ, ಅಘೋರ ನರಸಿಂಹ, ಕಾಲೋಗ್ರ ನರಸಿಂಹ, ಲಕುಮೀ ನರಸಿಂಹ, ಭೋಗಾ ನರಸಿಂಹ, ತವ ಅವತಾರ ಧರಣೀ ಭಾಗ್ಯ ನರಸಿಂಹಾ;

ಕಂಕಣ ಕೇಯೂರ ಮೇಖಲಾ ಪರಿಶೋಭಿತ, ನವರತ್ನಖಚಿತ ಭುಜಕೀರ್ತಿ ಮುಕುಟಧರ, ಪೀತವಸನಧರ, ಮುಂಜ ಕೇಶಧರ, ಉಗ್ರ ರೂಪಧರ, ಶಂಖಚಕ್ರಧರ; ಭಕ್ತಾನುರಕ್ತ; ರುಧಿರಾಕ್ಷ, ಸೋಮಾಕ್ಷ, ಜಾತವೇದಾಕ್ಷ, ದಿನಕರಾಕ್ಷ; ಕಾಲೋಗ್ರನಖ, ಮೃಗಮದತಿಲಕ, ಪಾಪಿ ಜನ ಹೃತ್ತಾಪ ವರ್ಧಕ, ದಂಷ್ಟ್ರಾಕರಾಲ, ನೀ ಕಾಲಕಾಲ, ಜ್ವಾಲಾಮುಖ ಕೋಲಾಹಲ, ಶ್ರಿತಜನರ ಪಾಲ, ಭಕುತಜನ ಭಕ್ತಿಮಾಲ, ಜ್ವಾಲಾಮಾಲ, ಇಂದಿರಾಲೋಲ, ಮಾಕಂದ ಪಾಲ, ಸೌಮ್ಯ ಭೀಷಣರೂಪ, ಉಗ್ರಪ್ರತಾಪ, ಅಚಿಂತ್ಯ ರೂಪ, ತ್ರೈಲೋಕ್ಯ ಭೂಪ, ದಿವ್ಯಸ್ವರೂಪಾ;

ಶ್ರೀವತ್ಸಾಂಕಿತಾ, ಶ್ರೀದೇವಿ ಹೃದಯಸ್ಥ, ಭಕುತ ಜನ ಹೃದಯಸ್ಥ, ಸ್ವಾಮಿ ನೀ ಕಾರುಣ್ಯಭರಿತಾ; ಮಾ ಕಾಂತ, ಗೋ ಕಾಂತ, ಸೀತಾಕಾಂತ, ಭಜಕರಾಯಸ್ಕಾಂತ, ತವಕೀರ್ತಿ ದಿಗ್ದಿಗಂತಾ, ಸ್ತೋತ್ರ ಸಂಪ್ರೀತಾ;

ಹಿರಣ್ಯಕೇಶಿಲನು ತನ್ನ ಘೋರತಪದಿಂದ ಜನ ಒಲಿಸುತ್ತ ಬರಿಸುತ್ತ, ವಿಧಿಯಿತ್ತ ವರದಿಂದಲತಿ ಸೊಕ್ಕಿ ನಿರ್ಜರರ ತಾನಿಕ್ಕಿ, ಮದಮೇರೆಯುಕ್ಕಿ, ಪರದೈವ ತಾನೆನುತ, ಸರ್ವಶಕ್ತನು ಎನುತ, ಅತಿ ಭ್ರಮೆಯಮುಕ್ಕಿ, ಮುನಿಗಣವನೊಕ್ಕಲಿಕ್ಕಿ; ನಾಕವನು ಅತಿಕ್ರಮಿಸಿ, ಸುಮನಸರ ನೆಲೆ ಕೆಡಿಸಿ, ಸಜ್ಜನರ ಧೃತಿಗೆಡಿಸಿ, ಪ್ರಜರನ್ನು ಭೀತಿಗೊಳಿಸೀ; ಎನ್ನನ್ನೆ ಪೂಜಿಸುತ, ಎನ್ನನಾರಾಧಿಸುತ, ಎನಗೆ ತಪಗೈಯುತ್ತ, ಎನ್ನ ಗುಡಿ ನಿರ್ಮಿಸುತ, ಎನ್ನ ಮೂರ್ತಿಯನು ನಿಲಿಸಿ, ಯುಕ್ತ ವಿಧಿಯಲ್ಲೆನ್ನ ವಿಗ್ರಹವ ಪೂಜಿಸುತ, ಅಭಿಷೇಕಗೈಯುತ್ತ, ವಿಧವಿಧದಿ ಸಿಂಗರಿಸಿ, ಧೂಪದೀಪಾರತಿ ನೈವೇದ್ಯಗಳನರ್ಪಿಸಿ, ಎನ್ನ ನಾಮವ ಸ್ಮರಿಸಿ, ಹಾಡುತ್ತ ಪೊಗಳುತ್ತ ಮೈಮರೆತು ಕುಣಿಯುತ್ತ, ಭಜಿಸುತ್ತ ನಮಿಸುತ್ತ, ಸಾಷ್ಟಾಂಗ ವಂದಿಸುತ, ತಾನೆ ಪರದೈವವೆಂದೆನ್ನುತ ವಿಷ್ಣುವನು ಕಿತ್ತೆಸೆಯ ಬೇಕೆನುತಲಾಜ್ಞಾಪಿಸೆ;

ವ್ಯಾಘ್ರದುದರದಿ ಜನಿತ ಗೋವತ್ಸ ಬಾಲ, ಪ್ರಹ್ಲಾದಗಿನ್ನೆಂಥ ಕಾಲ, ಕಯಾದು ಲಾಲ, ಲೋಕಮೋಹಕ ಲೀಲಾ, ಶರದಿಂದು ಧರೆಯಲ್ಲಿ ನಿಂದಂಥ ಚೆಂದ, ತುಂಬುಗೆನ್ನೆಗಳ ಮುಗ್ಧ ಸ್ನಿಗ್ಧ ಹಾಸದ ಕಂದ, ಮನಸೆಳೆವ ರೂಪ, ಸಾತ್ವಿಕ ಪ್ರತಾಪ, ಹರಿನಾಮವೊಂದೆ ಅಜಪಾಜಪ;

ಕ್ರುದ್ಧ ಪಿತ ಮದಮತ್ತ, ಕನಲುತ್ತ, ನಿಂದಿಸುತ, ಭಂಗಿಸುತ, ಝುಂಕಿಸುತ, ಹೂಂಕರಿಸಿ ಪಾದಗಳ ಘಟ್ಟಿಸುತ, ತಾಡಿಸುತ, ಜಿಡದೆ ಸುತನನು ವಧಿಸಲೆತ್ನಿಸುತ್ತ, ಗರಳವನ್ನುಣಿಸುತ್ತ, ಗಿರಿಯಿಂದ ಉರುಳಿಸುತ, ಧಗಧಗಿಸಿ ಝುಗಝುಗಿಪ ಉರಿಗಿಟ್ಟು ಸೋಲುತ್ತ, ಸ್ಫೋಟಿಸಿದ ಘೋರಾಗ್ನಿ ಶಿಖಿಯಾಗುತ, ಜ್ವಾಲಾ ಭೀಕರನು ತಾನಾಗುತ;

ಹರಿಯೆಲ್ಲಿ ತೋರವನ, ನೀಚನನು, ಭ್ರಷ್ಟನನು, ಪಾಪಿಯನು, ಪಂದೆಯನು, ತನ್ನ ಸಹಭವನ ಕೊಲೆಗಡುಕನ, ಹೆದರುತ್ತಲೆನಗೆ ಅವಿತಿರುವನ, ಹರಿಹರಿದು ಮುಕ್ಕುವೆನು, ಕುಕ್ಕುತ್ತಲೊಕ್ಕುವೆನು ಸಿಕ್ಕುಸಿಕ್ಕಾಗಿಸುವೆ ಪಕ್ಕೆಲುಬನು, ಶಿರದೋಡು ಲಟಕಟಿಸೆ ಕುಟ್ಟಿ ಪುಡಿಗೈಯುವೆನು, ಮಸಣದಲ್ಲಿಕ್ಕುವೆನು, ಬೊಗಸೆಬೊಗಸೆಯಲೆತ್ತಿ ಕೆನ್ನೀರನೀಂಟುವೆನು, ಉನ್ಮತ್ತ ಸಿಂಹದೊಲು ಘರ್ಜಿಸುವೆನು ಎಂದೆನುತ ಗಳಹುತ್ತ, ರುದ್ರ ಭೀಕರನಾಗಿ ಪೂರ್ವದೇವರ ದೇವ, ಆರ್ಭಟಿಸಿರೆ, ಬ್ರಹ್ಮಾಂಡ ತತ್ತರಿಸಿರೆ;

ಎಲ್ಲೆಲ್ಲು ಇರುವವನು ಕಲ್ಲಲ್ಲು ಕಾಣುವನು, ಎಲ್ಲಿಯೂ ಕಾಂಬುವನು ಮಮ ತಾತನೆ, ಅಸುರ ಕುಲಭೂಷನೆ, ಕಶ್ಯಪ ದಿತಿ ತನಯನೆ, ಬರಿದೆ ದ್ವೇಷಿಸೆ ನೀನು, ಮರ್ದಿಸನೆ ತಾನು, ಖಚಿತ ನಿನ್ನಯ ಪತನ, ಏನೀ ವಿತಾನ, ಪಿತನೆ ಅರಿಯೊ ನೀ ತೃಣ ಸಮಾನ; ತೊರೆ ನಿನ್ನ ಮದದ ಛಲ, ಹರಿ ತಾನೆ ಕಾಲ; ಸಂಧಿಕಾಲವು ಪಿತನೆ ಸಂಧ್ಯೆಯಂಗೈದು ಹರಿಯನ್ನು ಪೂಜಿಸುತ, ಶರಣೆಂದು, ಬಲವಂದು ನಮಿಸು ನಮಿಸಲವನು ಕ್ಷಮಿಸುವನು ಕರುಣಾಳು ತಾನು ಸರ್ವಾತ್ಮಕ, ಸರ್ವಶಕ್ತ್ಯಾತ್ಮಕ, ಸರ್ವವಿಶ್ವಾತ್ಮಕಾ ಎಂದೆನುತ ಬೇಡುತಿರಲಾ ಬಾಲಕಾ;

ಕಟಕಟನೆ ಕಡಿಯುತ್ತ, ಕಿಡಿಗಳನ್ನುಗುಳುತ್ತ ,ಘಟ್ಟಿಸುತ ಪಾದಗಳ, ಅಟ್ಟಹಾಸದಿ ಘೋರ ಘರ್ಜಿಸುತ್ತ, ಗರಗರನೆ ಭರಭರನೆ ತಿರುಗಿಸುತ್ತಲಿ ಎಸೆದ ಭೀಕರ ಗದಾ ಘಟ್ಟನಕ್ಕೆ, ಕ್ರೋಧದಾರ್ಭಟಕ್ಕೇ;

ಸಿಡಿಲೊಡೆದು ಬಡಿದಂತೆ, ಪೊಡವಿ ಸ್ಫೋಟಿಸಿದಂತೆ, ನಿಡುಗಂಬ ಕಡಿದೊಗೆದು, ಗುಡುಗುಡಿಸಿ ಗಡಗಡನೆ, ನಡುನಡುಗಲಾಸ್ಥಾನ, ಹೊಡಕರಿಸಿ ಚಡಪಡನೆ, ನಿಡಿದಾಗಿ ಪೊಡಕರಿಸಿ, ಒಡಮೂಡಿತಾಕಾರ ಘೋರಾಕಾರ, ಬ್ರಹ್ಮಾಂಡ ವಿಸ್ಫೋಟ ಮೀರುವಾ ಶಬ್ದ ದಿಗ್ದಿಗಂತ ಪ್ರತಿಧ್ವನಿತ ಮೂಲೋಕ ಕಂಪಿತ ಭೀತಾನ್ವಿತಾ;

ಹೊಳೆಹೊಳೆವ ಕೇಸರವು, ಜ್ವಾಲೆಯುಗುಳುವ ಹೊಳ್ಳೆ, ಥಳಥಳಿಪ ಕೋರೆಯು ಥಳಕು ಪಂಜವಸೆಳೆದು, ಕಡುಗರ್ವಿ ರಕ್ಕಸನ, ಹಿಡಿದೆತ್ತಿ ಗಗನದಲಿ, ಗಿರಗಿರನೆ ತಿರುಗಿಸುತ, ಒಡನೆ ತೊಡೆಯಲಿ ಕೆಡವಿ, ಸ್ತಂಭಿತನ ಜಡಿಜಡಿದು ಎದೆಗೂಡನೊಡೆದು, ಹಿರಿದು ಹೃದಯವ ಹಿರಿದು, ಕ್ರೂರ ನಖದಿಂ ಹರಿದು, ಕರುಳ ಹಾರವನು ಉರಿದುರಿದು ಧರಿಸಿದ, ಭೀಭತ್ಸ ರೂಪಿಯನು, ಉಗ್ರೋಗ್ರ ಕೋಪಿಯನು ಬೆದರಿ ನಿಂದಿರಲು, ಸುರನರೋರುಗರೆಲ್ಲ; ವಿಶ್ವವೇ ಕಂಪಿಸುತ ತೋಲ ತಪ್ಪುತಲಿರಲು ಚೀತ್ಕರಿಸಲು;

ಆ ಎಳೆಯ ಪ್ರಹ್ಲಾದ ಕಂಪಿಸಿದ ಭೀತಿಯಲಿ, ಅಳುತಳುತ ಬೇಡಿದನು, ನರಮೃಗನನು; ಶರಣಾದೆ ಪರಮಾತ್ಮ, ಭಕುತಜನ ಮುನಿರಾತ್ಮ ವಿಶ್ವಾತ್ಮ, ಜೀವಾತ್ಮ, ಜಗದ ಜೀವರುಗಳ ಅಂತರಾತ್ಮ; ಅಸುರ ಕುಲಜನು ನಾನು, ನಿಜದ ದೈವವು ನೀನು, ಮದದಿ ಮೆರೆವವ ನಾನು, ಪರಮ ಕರುಣಿಯು ನೀನು, ಮೃತ್ಯುವೂ ನೀನು ಅಮೃತನೂ ನೀನು, ಕರ್ತನೂ ನೀನು ಅಕರ್ತನನೂ ನೀನು; ಶಾಂತನಾಗೆಲೆ ದೇವ, ಶ್ರಾಂತನಾಗೆಲೆ ದೇವ, ವಿಶ್ವವೇ ಭೀತಿಯಲಿ ನಡುಗುತಿದೆ ದೇವ, ಕ್ರೋಧದ ಕಾರಣವು ಅಳಿದಿಹುದು ದೇವ; ಘೋರ ರೂಪವ ಶಮಿಸು, ವಿಶ್ವವನ್ನುಳಿಸು, ಬೆದರಿಹರ ಸಂತವಿಸು, ಭ್ರಾಂತರನು ತವಿಸು, ಮಂದಹಾಸವ ಹರಿಸು, ಶಿವರೂಪವನು ಧರಿಸು, ಸತ್ಯರೂಪವ ಧರಿಸು, ಅಜ್ಞಾನಿ ತರಳ ನಾ, ಸುಜ್ಞಾನ ಮೂರುತಿಯೆ, ಭಕುತಿಹೀನನು ನಾನು, ಮುಕುತಿದಾತನು ನೀನು,ಭಾವ ಹೀನನು ನಾನು, ಭಾವಜ್ಞ ನೀನು; ಪದವಿ ಪದ ಸಾಮ್ರಾಜ್ಯ ನಾನೊಲ್ಲೆನು, ತವ ಚರಣ ಕಮಲದಾಶ್ರಯವೆ ಸುಖವೆಂಬೆನು, ನಾಕ ತವ ಚರಣದಲಿ, ಲೋಕ ತವ ಚರಣದಲಿ, ಮುಕುತಿ ತವ ಚರಣದಲಿ, ಪರಮಪದ ತವ ಚರಣದಲ್ಲಿ, ಅನವರತ ನಾನಿನ್ನ ಚರಣದಲ್ಲಿರುವೆ; ಮೂಢನನು ಉದ್ಧರಿಸು, ಪಾಪಿಯನು ಉದ್ಧರಿಸು, ಎನ್ನ ಪಿತನನು ಕ್ಷಮಿಸು, ಎನ್ನ ಕೋರಿಕೆ ಸಲಿಸು, ಎನ್ನಲ್ಲಿ ಕನಿಕರಿಸು, ತವ ದಾಸ ನಾನೆಂದು ಸ್ವೀಕರಿಸು ತಂದೆ, ಶರಣಾದೆನಿಂದೇ, ಕ್ಷಮಿಸು ಕ್ಷಮಿಸೌ ತಂದೆ ಕ್ಷಮಿಸು ತಂದೆ;

ಎಂದೆನುತ ಎಳೆ ಬಾಲ ಕೈ ಮುಗಿದು ಶಿರಬಾಗಿ ಕಣ್ಣೀರು ಮಳೆಯಾಗಿ ಕಂದನೊಲು ರೋಧಿಸುತ ಬೇಡುತಿರಲು, ನರಹರಿಯ ಪದದಲ್ಲಿ ಹೊರಳುತಿರಲು; ಕರಗಿದನು ನರಸಿಂಗ ಮರುಮರುಗಿ ಮಂಗಳಾಂಗ; ಕೊಂಡಾಡಿ ಕಂದನನು, ಮುಂಡಾಡಿ ಬಾಲನನು, ಅಮೃತ ಕರದಿಂದಪ್ಪಿ ಮಡಿಲಲ್ಲಿ ಕುಳ್ಳಿರಿಸಿ, ಮುದ್ದಾಡಿ ಹರಸಿರಲು, ಸಂತಸವ ಹರಿಸಿರಲು, ಧನ್ಯನೆಂದೆನಿಸಿರಲು; ಕರುಣಾಳು ಶ್ರೀಚೆನ್ನಕೇಶವ ಸ್ವಾಮಿ, ಭಕುತಜನಕಾಮಿ, ಶ್ರಿತಜನರ ಪ್ರೇಮಿ; ಹಾಲಾಯ್ತು ಲಾವಾರಸ, ಮಧುವಾಯ್ತು ಕರುಣಾರಸ, ಚಂದ್ರಿಕೆಯ ಹೊಳೆ ಮಂದಹಾಸ, ಭದ್ರವೂ ರೌದ್ರವೂ ಶ್ರೀನೃಹರಿಯ ವೇಷಾ;

ಆ ಯುಗವು ಕಳೆದಿಹುದು, ಕಲಿಯುಗವು ಮೆರೆದಿಹುದು, ದೌಷ್ಟ್ಯ ದೌರ್ಜನ್ಯವು ನೂರು ಮಡಿಯಿಹುದು, ಸಜ್ಜನರ ಸಂಕಷ್ಟ ಮಿತಿಯರಿಯದಿಹುದು, ಝುಗಮಗಿಪ ಜೀವಜಗ ದಿಕ್ಕೆಟ್ಟು ನಿಂದಿಹುದು; ಹಿರಣ್ಯರಿಬ್ಬರವರುದ್ಧಂಡರು, ಇಂದಂಥ ಪುಂಡರು ದಂಡು ದಂಡಾಗಿಹರು, ಸ್ವಚ್ಛಂದ ಅಂಡೆಲೆಯುತಿಹರು, ಮೇರೆ ಮೀರಿಲ್ಲವೇ, ನಿನಗೆ ಕಂಡಿಲ್ಲವೇ, ಕರುಣೆ ಮೂಡಿಲ್ಲವೇ, ಮನವ ಕಾಡಿಲ್ಲವೇ, ಹೃದಯ ಮಿಡಿದಿಲ್ಲವೇ, ನಿನ್ನ ಹೊಣೆಯಲ್ಲವೇ, ಪಾಪಕೊಡ ತುಂಬಿಲ್ಲವೇ; ಕಳೆಯಿತೆಂದೆನ್ನದಿರು ಕಳೆದೆನೆಂದೆನ್ನದಿರು, ಕಳೆದರೂ ಉಳಿದಿಹುದು, ಉಳಿದು ಬೆಳೆದಿಹುದು ವಿಷದ ಕೂಳೆ, ಎಲ್ಲವನು ಆಕ್ರಮಿಸಲೆಲ್ಲ ಗೋಳೆ, ನಿನ್ನದೇ ಸೃಷ್ಟಿಗಿರದು ನಾಳೆ; ಹೊಗಳುವುದೇ ಹೊಗಳುವೆನು ಮಣಿಯುವುದೇ ಮಣಿಯುವೆನು, ಬೇಡುವುದೇ ಸೆರಗೊಡ್ಡಿ ಬೇಡುತಿಹೆನು; ಬಾರಯ್ಯ ತ್ವರೆಯಿಂದ, ಮರೆಯಿಂದ ಬೆಳಕಿಂದ, ಅತಿಶಯದ ಪ್ರೇಮದಿಂದ, ತಳುವದಲೆ ಅಲಸದಲೆ, ಮೊಗವ ತಿರುವದಲೆ; ಕಲ್ಕಿಯಾಗಿ ನೀನೀಗಲೆ ಬಹನಲ್ಲ, ಯುಗದಂತ್ಯ ವಿದಿತ ಕಾಲವೆನ್ನುತಿಹವಲ್ಲ; ಮಧ್ಯದಲಿ ತುರ್ತೆಂದು ಬಂದುಬಿಡು ಪ್ರಭುವೆ, ನಿನ್ನಿಷ್ಟದ ರೂಪದಲಿ ವಿಭುವೆ;

ಜಯಮಸ್ತು ಹರಿಗೆ, ಜಯಮಸ್ತು ನರಗೆ, ಜಯಮಸ್ತು ದಿವ್ಯ ನರಹರಿಯ ರೂಪಗೆ; ಶುಭಮಸ್ತು ಬಾಲ ಪ್ರಹ್ಲಾದಗೆ, ಶುಭಮಸ್ತು ಭೀಷಣನನೊಲಿಸಿದವಗೆ, ಶುಭಮಸ್ತು ಕಲಿಯ ಸಜ್ಜನಕೆ ಜಗಕೆ, ಶ್ರೀರಸ್ತು ವಿಶ್ವಕ್ಕೆ, ಶ್ರೀರಸ್ತು ಶಾಂತಿಗೆ, ಶುಭವಿರಲಿ ಶುಭವು ಶುಭವಿರಲಿ ಶುಭವು ಶುಭವು...

*****

ಕಥಾ ಪ್ರಪಂಚ

ಆಸ್ಕರ ವೈಲ್ಡ್ ಕತೆಗಳು

– ವಿಠ್ಠಲ್ ಇಜೇರಿ

ಆಸ್ಕರ್ ವೈಲ್ಡ್ (16–10–1854ರಿಂದ 30–11–1900) ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಸೌಂದರ್ಯೋಪಾಸಕರ ಚಳುವಳಿಯ ಮುಂಚೂಣಿಯಲ್ಲಿದ್ದ. ಆ ಸಮಯದಲ್ಲಿ ಅವರ ನಾಟಕಗಳು ಮತ್ತು ಚಾಟೋಕ್ತಿಗಳು (ಎಪಿಗ್ರಾಮ್ಸ್) ಅತ್ಯಂತ ಜನಪ್ರಿಯವಾದವು. 1898ರಲ್ಲಿ ವೈಲ್ಡ್ ರಚಿಸಿದ 'ದ ಹ್ಯಾಪಿ ಪ್ರಿನ್ಸ್ ಅಂಡ್ ಅದರ್ ಟೇಲ್ಸ್' ಕೃತಿಯಲ್ಲಿ ಅವರ ಸೃಜನಾತ್ಮಕ ಶೈಲಿಯ ಅನಾವರಣವಾಗಿ ಆಸ್ಕರ್ ವೈಲ್ಡ್ ಅವರಿಗೆ ಹೆಸರು ತಂದಿತು. 1890ರಲ್ಲಿ ಅವರ ಒಂದೇ ಒಂದು 'ಪಿಕ್ಚರ್ ಆಫ್ ಡೋರಿಯನ್ ಗ್ರೇ' ಎಂಬ ಕಾದಂಬರಿ ಒಂದು ನೀತಿ ಪ್ರಧಾನ ಕೃತಿಯಾಗಿತ್ತು. 1892ರಲ್ಲಿ ಅಮೇರಿಕಾದಲ್ಲಿ ಸೌಂದರ್ಯ ಮೀಮಾಂಸೆ ಎಂಬ ವಿಷಯದ ಬಗ್ಗೆ ಭಾಷಣ ಮತ್ತು ಸಲಿಂಗರತಿ ಕುರಿತಾದ ಕಲೆಕ್ಟೆಡ್ ಪೋಮ್ಸ್ ಕುರಿತು ಆಪಾದನೆಗೆ ಒಳಗಾಗಿ ಆಸ್ಕರ್ ವೈಲ್ಡ್ ಬಂಧನಕ್ಕೆ ಒಳಪಡಬೇಕಾಯಿತು.

ಬಂಧನದಲ್ಲಿದ್ದಾಗಲೇ 'ಬ್ಯಾಲೆಡ್ ಆಫ್ ರೀಡಿಂಗ್' ಎಂಬ ಕವಿತೆಯನ್ನು ಮತ್ತು 'ಡಿ ಪ್ರೊಫೆಂಡಿಸ್' ಎಂಬ ಆತ್ಮ ಚರಿತೆಯನ್ನೂ ಬರೆದ. ಆಸ್ಕರ್ ವೈಲ್ಡ್ ಇಂಗ್ಲಿಷ್ ಮಕ್ಕಳಿಗೆಂದು ಬರೆದ ಕತೆಗಳು ಜಗತ್ತಿನಲ್ಲಿ ಎಲ್ಲಾ ದೇಶದ ಮಕ್ಕಳಿಗೆ ಇಷ್ಟವಾದವು. ಆಸ್ಕರ್ ವೈಲ್ಡ್ ಸಾಹಿತ್ಯ ಸೌಂದರ್ಯಕ್ಕೆ ಸಂಬಂಧಿಸಿದುದು ನೈತಿಕತೆಗೆ ಅಲ್ಲ ಎನ್ನುವ ಧೋರಣೆ ಹೊಂದಿದ್ದರು. ಆದರೆ ಅವರ ಕಥೆಗಳು ಭದ್ರವಾದ ನೈತಿಕ ಮೌಲ್ಯಗಳನ್ನು ಹೊಂದಿವೆ.

ಈಗ ಆಸ್ಕರ್ ವೈಲ್ಡ್ ಬರೆದ ಕತೆ 'ರೂಪದರ್ಶಿ' ನೋಡೋಣ:

ಹ್ಯುಯಿ ಎಸ್ಕಿರ್ನ್, ತಲೆಗೆ ವಿದ್ಯೆ ಹತ್ತದ, ಯಾವುದೇ ನಿಶ್ಚಿತ ಉದ್ಯೋಗವಿಲ್ಲದ ಪಾಪದ ಪ್ರಾಣಿ. ಆದರೆ ದೇವರು ಅವನಿಗೆ ಅಪೂರ್ವವಾದ ರೂಪವನ್ನು ದಯಪಾಲಿಸಿದ್ದ. ದಷ್ಟಪುಷ್ಟ ಶರೀರ, ದಟ್ಟ ಕಂದು ಬಣ್ಣದ ಕೂದಲು, ಅಗಲವಾದ ಹೊಳೆಯುವ ಕಣ್ಣುಗಳು, ಆಕರ್ಷಕ ಮೂಗು, ಎಲ್ಲ ಸ್ತ್ರೀ, ಪುರುಷರ ಮಧ್ಯೆ ಹ್ಯುಯಿ ಎದ್ದು ಕಾಣುತ್ತಿದ್ದ. ಹ್ಯುಯಿಗೆ ಪಿತಾರ್ಜಿತ ಆಸ್ತಿಯೂ ಇರಲಿಲ್ಲ. ತನ್ನ ಸೋದರತ್ತೆ ಕಳುಹಿಸುವ ಸ್ವಲ್ಪ ಹಣದಲ್ಲಿ ಜೀವನ ಸಾಗಿಸುತ್ತಿದ್ದ. ಇಂತಹ ಸ್ಥಿತಿಯಲ್ಲೂ ಅವನ ರೂಪಕ್ಕೆ ಮರುಳಾಗಿ ಲಾರಾ ಮರ್ಟನ್ ಎಂಬ ಸುಂದರಿ ಅವನನ್ನು ಪ್ರೀತಿಸುತ್ತಿದ್ದಳು. ಲಾರಾ ಮರ್ಟನ್‌ಳ ತಂದೆ ನಿವೃತ್ತ ಕರ್ನಲ್, ಅವರ ಮದುವೆಗೆ ಒಪ್ಪಿರಲಿಲ್ಲ. ಮಗಳಿಗಾಗಿ ಅವನು ಹ್ಯುಯಿ ಎಸ್ಕಿರ್ನ್‌ಗೆ 'ನಿನ್ನ ಬಳಿ ಹತ್ತು ಸಾವಿರ ಪೌಂಡ್ ಹಣ ಸಂಗ್ರಹವಾದ ದಿನ ನಿನ್ನ ಅವಳ ಮದುವೆ' ಎಂದು ಹೇಳಿದ್ದ.

ಒಂದು ದಿನ ಹ್ಯುಯಿ ಎಸ್ಕಿರ್ನ್, ಹ್ಯಾಲೆಂಡ್ ಪಾರ್ಕ್ ಪ್ರದೇಶದಲ್ಲಿ ಲಾರಾ ಮರ್ಟನ್‌ಳನ್ನು ಭೇಟಿ ಮಾಡಿ ಮರಳುವಾಗ ಅದೇ ಪ್ರದೇಶದಲ್ಲಿದ್ದ ತನ್ನ ಪ್ರೀತಿಯ ಗೆಳೆಯ ಆಲನ್ ಟ್ರಾವಲ್ ಮನೆಗೆ ಭೇಟಿ ನೀಡಿದ. ಆಲನ್

ಟ್ರಾವಲ್ ಒಬ್ಬ ಶ್ರೇಷ್ಠ ಚಿತ್ರಕಾರನಾಗಿದ್ದ. ಹ್ಯುಯಿ ಅವನ ಮನೆಗೆ ಹೋದಾಗ ಆಲನ್ ಒಬ್ಬ ಭಿಕ್ಷುಕನನ್ನು ರೂಪದರ್ಶಿಯಾಗಿ ಅಷ್ಟು ದೂರದಲ್ಲಿ ಎತ್ತರದಲ್ಲಿ ನಿಲ್ಲಿಸಿ ಅವನ ನಿಜ ಗಾತ್ರದ ಚಿತ್ರಕ್ಕೆ ಕೊನೆಯ ಗೆರೆಗಳನ್ನು ಬರೆಯುತ್ತಿದ್ದ. ಆ ರೂಪದರ್ಶಿಯೋ ಒಬ್ಬ ದೈನ್ಯ, ಟೋಪಿ ಕೈಚಾಚಿ ಹಿಡಿದು ನಿಂತ ಭಿಕ್ಷುಕ. ಆ ದೃಶ್ಯ ಕರುಳು ಹಿಂಡುವಂತಿತ್ತು. ಹ್ಯುಯಿ "ಎಂಥಹ ಅದ್ಭುತ ರೂಪದರ್ಶಿಯನ್ನು ಹುಡುಕಿರುವಿ? ಪಾಪ ಅವನು ಎಷ್ಟು ದಿನಗಳಿಂದ ಊಟ ಮಾಡಿಲ್ಲವೋ? ಅವನಿಗೆ ಎಷ್ಟು ಕಾಸು ಕೊಡುವಿ?" ಎಂದು ಗೆಳೆಯನಿಗೆ ಕೇಳಿದ. ಆಲನ್ ಟ್ರಾವಲ್, "ಒಂದು ಗಂಟೆಗೆ ಒಂದು ಶಿಲ್ಲಿಂಗ್" ಎಂದು ಹೇಳಿದ. ಹ್ಯುಯಿಯ ಮನ ಅದನ್ನು ಒಪ್ಪಲಿಲ್ಲ. ಅವನು "ನಿನ್ನ ಈ ಚಿತ್ರಕ್ಕೆ ಸಾಕಷ್ಟು ಹಣ ಪಡೆಯವಿ ಅದರಲ್ಲಿ ಒಂದು ಭಾಗ ಅವನಿಗೆ ಕೊಡಬೇಕು. ಅವನಿಂದ ತಾನೆ ಈ ಚಿತ್ರಕ್ಕೆ ಬೆಲೆ ಬರುವುದು ಅಲ್ಲವೇ?" ಅಂದ. ಟ್ರಾವಲ್ "ಸುಮ್ಮನೆ ಇರಯ್ಯ, ಕಷ್ಟಪಟ್ಟು ಬಣ್ಣದೊಡನೆ ಬಡಿದಾಡಿ ಚಿತ್ರ ಬಿಡಿಸಿದ್ದು ನಾನು. ಸುಮ್ಮನೆ ನಿಲ್ಲುವ ಅವನಿಗೆ ಸಂಪಾದನೆಯ ಪಾಲು ಕೊಡುವುದೇ? ನೋಡು, ಈಗ ಚಿತ್ರ ಅಂತಿಮ ಹಂತದಲ್ಲಿದೆ. ನನ್ನನ್ನು ಮಾತನಾಡಿಸಬೇಡ. ಸುಮ್ಮನೆ ಇರು" ಅಂದ. ಅಷ್ಟರಲ್ಲಿ ಸೇವಕನೊಬ್ಬ ಬಂದು "ಚಿತ್ರಗಳಿಗೆ ಕಟ್ಟು ಹಾಕುವವ ಬಂದಿದ್ದಾನೆ" ಎಂದು ಹೇಳಿದ. ಆಲನ್ ಈಗಲೇ ಬರುವೆ, ಎಂದು ಹೇಳಿ ಅಲ್ಲಿಂದ ಹೊರನಡೆದ. ಟ್ರಾವೆಲ್ ಹೊರಗೆ ಹೋದ ತಕ್ಷಣ ನಿಂತು ಸುಸ್ತಾಗಿದ್ದ ರೂಪದರ್ಶಿ ಭಿಕ್ಷುಕ 'ಉಶ್ಯಪ್ಪ' ಎಂದು ಕೆಳಗೆ ಕುಳಿತ. ಹ್ಯುಯಿಗೆ ಭಿಕ್ಷುಕನ ದಣಿದ, ದೈನ್ಯ ಮುಖ ನೋಡಿ ಅದೇನು ಅನಿಸಿತೋ ತನ್ನ ಜೇಬನ್ನೆಲ್ಲ ತಡಕಾಡಿದ, ಅಲ್ಲಿ ಬಸ್ಸಿಗಾಗಿ ಇರಿಸಿದ್ದ ಒಂದೆರಡು ಕಾಸು ಇತ್ತು. ಅದನ್ನೊಯ್ದು ಭಿಕ್ಷುಕನ ಕೈಗಿರಿಸಿದ. ಸಂತೋಷದಿಂದ ಭಿಕ್ಷುಕನ ಮುಖ ಅರಳಿತು. 'ಧನ್ಯವಾದಗಳು' ಎಂದು ಉದ್ಗರಿಸಿದ. ಅಷ್ಟರಲ್ಲಿ ಟ್ರಾವೆಲ್ ಮರಳಿ ಬಂದ. ಹ್ಯುಯಿ ಎರ್ಸ್ಕೇರ್ನ್, ಟ್ರಾವೆಲ್‌ನಿಂದ ಬಿಳ್ಕೊಂಡು ನಡೆದುಕೊಂಡೇ ಮನೆಗೆ ಹೋದ. ಮರುದಿನ ಆಲೆನ್ ಟ್ರಾವೆಲ್ ಹ್ಯುಯಿಗೆ ಪ್ಯಾಲೇಟ್ ಕ್ಲಬ್ಬಿನಲ್ಲಿ ಸಿಕ್ಕ. ಟ್ರಾವೆಲ್ ಅವನಿಗೆ ಹ್ಯುಯಿ, "ಆ ಭಿಕ್ಷುಕನಿಗೆ ಅದೇನು ಕೊಟ್ಟೆ, ಅಥವಾ ಅದೇನು ಮೋಡಿ ಮಾಡಿದೆ. ಅವನು ನಿನ್ನ ಬಗ್ಗೆ ತುಂಬಾ ವಿಚಾರಿಸಿ, ನಿನ್ನ ವಿಳಾಸ ತೆಗೆದುಕೊಂಡು ಹೋಗಿದ್ದಾನೆ." ಎಂದು ಹೇಳಿದ. ಹ್ಯುಯಿ "ಅಯ್ಯೋ, ವಿಳಾಸ ಏಕೆ ಕೊಟ್ಟೆ, ಅವನಿಗೆ ಕೊಡಲು ನನ್ನಲ್ಲಿ ದುಡ್ಡು ಇಲ್ಲ, ಬಹಳವಾದರೆ ನನ್ನ ಹಳೆಯ ಬಟ್ಟೆ ಕೊಡುವೆ. ಅವನ ಮೈಮೇಲಿನ ಕೋಟು, ಬಟ್ಟೆ ಚಿಂದಿಯಾಗಿವೆ" ಅಂದ.

ಆಲೆನ್ ಟ್ರಾವೆಲ್ ಬಟ್ಟೆಗಳು ಚಿಂದಿಯಾಗಿದ್ದರೇ ನಮ್ಮ ಚಿತ್ರಕ್ಕೆ ಚಂದ. ಅಷ್ಟಕ್ಕಾಗಿ ಆ ಬಟ್ಟೆ ಅವನಿಗೆ ತೊಡಿಸಿದ್ದು. ನಮ್ಮ ರೂಪದರ್ಶಿ ಭಿಕ್ಷುಕ ನಿನ್ನ ಮತ್ತು ಲಾರಾ ವಿಷಯ ಕೇಳಿ ಬಹಳ ಸಂತೋಷಪಟ್ಟರು".

ಹ್ಯುಯಿ: ಏನು ಲಾರಾ ವಿಷಯವನ್ನೂ ಹೇಳಿದೆಯಾ?

ಟ್ರಾವೆಲ್: ಲಾರಾ ವಿಷಯ ಮಾತ್ರವಲ್ಲ, ಕರ್ನಲ್ ನಿನಗೆ ಮಿಲಿಟರಿ ಧ್ವನಿಯಲ್ಲಿ ಹತ್ತು ಸಾವಿರ ಪೌಂಡ್ ಇದ್ದರೆ ಮಾತ್ರ ಲಾರಾಳ ಕನಸು ಕಾಣು ಅಂದುದನ್ನೂ ಹೇಳಿದೆ. ಹ್ಯುಯಿ, ನೀನು ಯಾರಿಗೆ ನಿನ್ನ ಹಳೆಯ ಬಟ್ಟೆ ಕೊಡುವೆ ಎಂದು ಹೇಳಿದೆಯೋ ಅವರು ಭಿಕ್ಷುಕರಲ್ಲ, ಅವರು ಇಡೀ ಲಂಡನ್ ಖರೀದಿ ಮಾಡಬಲ್ಲ

ಶ್ರೀಮಂತರು. ಬ್ಯಾಂಕಿನಲ್ಲಿ ಕೊಳೆತು ಹೋಗುವಷ್ಟು ಹಣವಿದೆ. ಅವರ ಹೆಸರು ಬ್ಯಾರನ್ ಹಾರ್ಸಭರ್ಗ. ಅವರಿಗೆ ಯುರೋಪಿನ ಎಲ್ಲ ದೇಶಗಳಲ್ಲಿ ಅರಮನೆಗಳಿವೆ. ಈ ಶ್ರೀಮಂತರಿಗೊಂದು ತೆವಲು, ಇವರು ಕಳೆದು ತಿಂಗಳು ಬಂದು ತಮ್ಮ ಭಿಕ್ಷುಕ ವೇಷದ ಚಿತ್ರ ಬರೆಯಲು ಕೇಳಿಕೊಂಡಿದ್ದರು. ಅದಕ್ಕಾಗಿ ಆ ಭಿಕ್ಷುಕ ವೇಷ ಧರಿಸಿದ್ದರು.

ಹ್ಯುಯಿ: ಹೌದಾ? ಅಯ್ಯೋ, ನೀನು ಹೊರಗೆ ಹೋದಾಗ ನಾನು ಅವರಿಗೆ ಒಂದೆರಡು ಕಾಸು ಕೊಟ್ಟು ಅವಮಾನ ಮಾಡಿದೆ. ಈ ವಿಷಯ ಬೇರೆ ಯಾರ ಬಳಿಗೂ ಹೇಳಬೇಡ.

ಟ್ರಾವೆಲ್: ಹೋಗಲಿ ಬಿಡು, ಅವರು ಒಳ್ಳೆಯವರು ತಪ್ಪು ತಿಳಿಯುವದಿಲ್ಲ. ಅಷ್ಟಕ್ಕೂ ಭಿಕ್ಷುಕರಿಗೆ ಕೊಡಬೇಕಾದುದನ್ನು ಕೊಟ್ಟಿರುವಿ.

ಮರುದಿನ ಬೆಳಿಗ್ಗೆ ಬ್ಯಾರಾನ್ ಹಾರ್ಸಭರ್ಗ ಪರವಾಗಿ ಒಬ್ಬ ಬಂದು ಹ್ಯುಯಿ ಎಸ್ಕಿರ್ನಗೆ ಒಂದು ಸೀಲು ಮಾಡಿದ ಲಕೋಟೆಯೊಂದನ್ನು ಕೊಟ್ಟ. ಲಕೋಟೆಯ ಮೇಲೆ ಶ್ರೀಮಾನ್ ಹ್ಯುಯಿ ಎಸ್ಕಿರ್ನ್ ಮತ್ತು ಶ್ರೀಮತಿ ಲಾರಾ ಮಾರ್ಟನ್ ಅವರಿಗೆ ಮದುವೆಯ ಉಡುಗೊರೆ ಎಂದು ಬರೆದಿತ್ತು ಮತ್ತು ಒಳಗೆ ಹತ್ತು ಸಾವಿರ ಪೌಂಡಿನ ಹಾರ್ಸಭರ್ಗ ಅವರು ಸಹಿಮಾಡಿದ ಹ್ಯುಯಿ ಎಸ್ಕಿರ್ನ್ ಹೆಸರಿನ ಚೆಕ್ ಇತ್ತು.

ಆಸ್ಕರ್ ವೈಲ್ಡ್ 'ತನ್ನ ಕತೆಗಳು ನೀತಿಗಾಗಿ ಅಲ್ಲ' ಅಂದಿದ್ದರೂ ಈ ಕತೆಯಲ್ಲಿ ನಮ್ಮ ಸನಾತನ ಧರ್ಮದ ತತ್ವ ನಾವು ಕೊಟ್ಟದ್ದು ಹಲವು ಪಟ್ಟು ಹೆಚ್ಚಾಗಿ ನಮಗೆ ದೊರೆಯುವುದು ಎಂಬುದು ಬಿಂಬಿತವಾಗಿದೆ.

*****

ಸಣ್ಣ ಕತೆ

ಜ್ವಾಲಾಮುಖಿ ಮತ್ತು ಸುನಾಮಿಯ ಅಲೆ

– ಟಿ. ಎಸ್. ಶ್ರವಣ ಕುಮಾರಿ

ಅವಳ ಕಣ್ಣುಗಳು ಕೋಪದಿಂದ ಕೆಂಡಗಳನ್ನುಗುಳುತ್ತಿದ್ದವು. ಮೈಯೆಲ್ಲಾ ಥರಥರಗುಟ್ಟುತ್ತಿತ್ತು. ಮಾತು ಹೊರಬಂದರೆಲ್ಲಿ ಜ್ವಾಲಾಮುಖಿಯೇ ಸ್ಫೋಟಗೊಳ್ಳುವುದೋ ಎಂಬಂತೆ ಮೌನವಾಗಿಯೇ ಅವಳು ಸಿಟ್ಟು ಸೆಡವುಗಳ, ದುಃಖ ತಿರಸ್ಕಾರದ ಕಣೆಗಳನ್ನು ಅವನೆಡೆಗೆ ತೂರುತ್ತಲೇ ಇದ್ದಳು. ಈ ಕಲಹ ಭಾನುವಾರ ಬೆಳಗ್ಗೆಯೇ ಏಕೆ ಆರಂಭವಾಗಬೇಕಿತ್ತು! ಇಬ್ಬರಿಗೂ ಇಂದು ಒಟ್ಟಾಗಿ ಮಾಡುವ ಹಲವು ಕೆಲಸಗಳಿದ್ದವು. ಆದರೆ ಇಬ್ಬರ ನಡುವೆ ಬೆಳಗ್ಗೆಯೇ ಆಗಸವೆಲ್ಲಾ ಮೋಡಗಳಿಂದ ದಟ್ಟೈಸಿ ಇತ್ತ ಮಳೆಯೂ ಬಾರದಂತಹ ಅಂಧಕಾರ, ಮೂಗುಬ್ಬಸ ಕವಿದು, ಅವರಿಬ್ಬರೂ ಕುಳಿತಲ್ಲಿನ ನಡುವಿನ ಹತ್ತು ಅಡಿಗಳ ಅಂತರ ಹತ್ತು ಸಾವಿರ ಮೈಲುಗಳ ಅಂತರವೇನೋ ಎನ್ನುವಂತೆ ಅವರ ಮನಸ್ಸುಗಳು ವಿಮುಖವಾಗಿದ್ದವು.

ಆ ವಿಷಯ ಇಂದು ಬೇಡವಿತ್ತು. ಆದರೆ ಬೇಡವೆಂದರೂ ನಡೆದುಹೋಗಿತ್ತು. ಹಾಗೆ ನಡೆದ ವಿಷಯ ಮೊಬೈಲಿನ ಆ ಕರೆಯ ಮೂಲಕ ಅವಳ ಗಮನಕ್ಕೂ ಬಂದುಬಿಟ್ಟಿತ್ತು. ಮೊಬೈಲ್‌ನಲ್ಲಿ ಮಾತನಾಡುತ್ತಿರುವಾಗಲೇ ಅವಳು ನೋಟದಲ್ಲಿ ಉಗುಳುತ್ತಿದ್ದ ಬೆಂಕಿಯ ಕಿಡಿಗಳನ್ನು ಅವನು ಅವಳೆಡೆಗೆ ನೋಡುತ್ತಲೇ ಸ್ವೀಕರಿಸುತ್ತಿರುವವನಂತೆ ನುಂಗುತ್ತಿದ್ದ. ನುಂಗಲೇಬೇಕಿತ್ತು. ಅವಳು ಎಂದಿನಿಂದಲೋ ಆ ವಿಷಯಕ್ಕೆ ತನ್ನ ತೀವ್ರವಾದ ಅಸಮ್ಮತಿಯನ್ನು, ತಿರಸ್ಕೃತಿಯನ್ನು ಖಡಾಖಂಡಿತವಾಗಿ ತೋರಿದ್ದಳು. ಆದರೂ ಅವನಿಗದನ್ನು ಮಾಡಲೇಬೇಕಾದ ಅನಿವಾರ್ಯವಿತ್ತು. ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ; ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುವಂತಿರಲಿಲ್ಲ. ಅಷ್ಟು ಮುಖ್ಯವಾಗಿತ್ತು. ಮಾಡಿದ ನಂತರ 'ತಿಳಿಸಲೇ' 'ಬೇಡವೇ' ಎನ್ನುವ ಜಿಜ್ಞಾಸೆಯಲ್ಲಿರುವಾಗಲೇ ಅವಳಿಗೆ ಆ ಮುಂಜಾನೆ ತಿಳಿದುಹೋಗಿತ್ತು.

ತನ್ನ ನಿರ್ಧಾರಗಳಿಗೆ, ಅನಿಸಿಕೆಗಳಿಗೆ ಇಷ್ಟೇನೇ ಬೆಲೆ? ಗಂಡಹೆಂಡಿರ ನಡುವೆಯೂ ಇಂತಹ ಅಪ್ರಾಮಾಣಿಕತೆ ತಲೆದೋರಿದರೆ, ನಮ್ಮ ನಡುವಿನ ಸಂಬಂಧಕ್ಕೆ ಏನಾದರೂ ಅರ್ಥವಿದೆಯೇ? ಅವಳು ಹತಾಶಳಾಗಿದ್ದಳು. ಸೀದಾ ಕೋಣೆಗೆ ಹೋಗಿ, ಮೊಬೈಲ್ ಸ್ವಿಚ್‌ಆಫ್ ಮಾಡಿ ಕಿಟಕಿಯ ಪರದೆಯನ್ನು ಸರಿಸಿ, ಎಷ್ಟೋ ವರ್ಷಗಳಿಂದ ಮುಚ್ಚಿದ್ದ ಅದರ ಬಾಗಿಲನ್ನಿಷ್ಟು ತೆರೆದು ತಾನು ಸಾಗಿಬಂದ ಹಾದಿಯತ್ತ ನೋಡುತ್ತಿದ್ದೇನೇನೋ ಎಂಬಂತೆ ಕಣ್ಣು ಕಾಣುವವರೆಗೂ ದೃಷ್ಟಿ ಹರಿಸುತ್ತಾ ನಿಂತಳು. ಪರಿತಾಪದ ಭಾವಗಳನ್ನು ನಿಯಂತ್ರಿಸಲಾಗದೆ ಕಣ್ಣುಮುಚ್ಚಿಕೊಂಡು ವೇದನೆಯನ್ನು ಕಣ್ರೆಪ್ಪೆಯೊಳಗೆ ಅದುಮಿಡಲು ಯತ್ನಿಸತೊಡಗಿದಳು.

ಅವಳೆದೆಯಿಂದ ಹೊರಟ ಒಂದೊಂದು ಭಾವವೂ ಯಾವ ಮಾತಿನ ಹಂಗಿಲ್ಲದೆಯೇ ಅವನೆದೆಯನ್ನು ತಾಕತೊಡಗಿದ್ದವು. ತಾನು ಮೌನವನ್ನು ಮುರಿದರೆ ಎದ್ದೇಳಬಹುದಾದ ಅಗ್ನಿಪರ್ವತದ ಸ್ಫೋಟದ ಅರಿವಿದ್ದ

ಅವನು ತನ್ನ ಬಾಯನ್ನು ಹೊಲಿದುಕೊಂಡಂತೆ ಬಾಲ್ಕನಿಯಲ್ಲಿ ಕುಳಿತು ಅವಳ ಹೃದಯದಲ್ಲಿ ಎದ್ದೇಳುತ್ತಿದ್ದ ಜ್ವಾಲಾಮುಖಿಯ ಜ್ವಾಲೆಗಳ ತಾಪದಲ್ಲಿ ಸುಡುತ್ತಿದ್ದ. ತುಸು ಹೊತ್ತಿನಲ್ಲೇ ತನ್ನ ಮನದ ಸಂತಾಪವನ್ನೆಲ್ಲಾ ಬಿಂಬಿಸುವಂತೆ ಆಕಾಶದಲ್ಲಿ ದಟ್ಟೈಸತೊಡಗಿದ ಕಾರ್ಮೋಡಗಳನ್ನು ನೋಡತೊಡಗಿದ. ಇನ್ನಷ್ಟು, ಮತ್ತಷ್ಟು ಸೇರುತ್ತಾ ಹಿತವಾದ ಬಿಸಿಲು ಇರಬಹುದಾದ ಕಾಲದಲ್ಲಿ ಮಂಕು ಕತ್ತಲು ಕವಿಯತೊಡಗಿತು. 'ಅವಳಿಗಷ್ಟು ಇರುಸುಮುರುಸಾಗುವ, ಕಂಗೆಡಿಸುವ ಕೆಲಸವನ್ನು ಮಾಡುವ ಮುಂಚೆ ನಾನು ಇನ್ನೊಮ್ಮೆ ಯೋಚಿಸಬೇಕಿತ್ತೆ' ಎಂದು ಪದೇಪದೇ ಅನ್ನಿಸಿದರೂ, ಆಗಿಹೋಗಿದ್ದರ ಬಗ್ಗೆ ಈಗ ಚಿಂತಿಸಿ ಫಲವೇನು! ತಿಳಿದಾಗ ಅವಳನ್ನು ಹೇಗೋ ಸಮಾಧಾನ ಪಡಿಸಬಹುದೆಂದು ಅಂದುಕೊಂಡಿದ್ದು ಇಷ್ಟರಮಟ್ಟಿಗೆ ಎಡವಟ್ಟಾಗುವುದೆಂದು ಅವನಿಗೂ ಅನ್ನಸಿರಲಿಲ್ಲ. ಅವಳು ಇಷ್ಟು ತೀವ್ರವಾಗಿ ನೊಂದುಕೊಂಡು ಹೀಗೆ ಪ್ರತಿಭಟಿಸಬಹುದೆಂದೂ ಯೋಚಿಸಿರಲಿಲ್ಲ. ಇನ್ನೂ ಆಕಾಶದಲ್ಲಿ ಮೋಡಗಳು ದಟ್ಟೈಸುತ್ತಲೇ ಇವೆ. ಬಿಸಿಹಬೆಯನ್ನು ಬಿಟ್ಟರೆ ಬೇರೇನೂ ಇಲ್ಲ. ಒಮ್ಮೆ ಮಳೆ ಆರಂಭವಾದರೆ ಹಗುರಾಗಬಹುದೇನೋ ಅನ್ನಿಸಿದರೂ ಅದು ತನ್ನಿಂದಲೇ ಆರಂಭವಾದರೆ ಮುಗಿಯುವ ಸಂಭವವಿಲ್ಲ ಎನ್ನುವುದು ಅರಿವಾದವನಂತೆ ಮೊಬೈಲನ್ನು ನಿಶ್ಶಬ್ದಕ್ಕೆ ದೂಡಿ ಕುರ್ಚಿಗೊರಗಿ ಕಣ್ಣುಮುಚ್ಚಿಕೊಂಡು ಆಲೋಚನೆಗೆ ಬಿದ್ದ.

ಅವಳೂ ವಾತಾವರಣದ ಮೂಕಸೆಕೆಯನ್ನು ತಡೆಯಲಾಗದೆ ಕಿಟಕಿಯನ್ನು ತೆರೆದಿಟ್ಟೇ ಬಂದು ಹಾಸಿಗೆಯ ಮೇಲೆ ಬಿದ್ದುಕೊಂಡಳು. ಸಂಬಂಧದ ಪ್ರಾಮಾಣಿಕತೆಯನ್ನು ಪರೀಕ್ಷಿಸಲು ಇಂತಹ ಘಟನೆಗಳೇ ಒರೆಗಲ್ಲಲ್ಲವೇ? ಮಾಡುವ ಮುಂಚೆ ತನಗೊಮ್ಮೆ ಹೇಳಬೇಕೆಂದೂ ಅವನಿಗೆ ಅನ್ನಿಸಲಿಲ್ಲವಲ್ಲ. ತನ್ನ ಬಗ್ಗೆ ಅಷ್ಟೊಂದು ಅಪನಂಬಿಕೆಯೇ?! ನಿಜ, ಒಪ್ಪುತ್ತಿರಲಿಲ್ಲ; ಆದರೆ ತನಗೆ ಹೇಳುವಷ್ಟು ನಿಷ್ಠೆಯಾದರೂ ಇತ್ತು ಎಂದಾದರೂ ಅನ್ನಿಸುತ್ತಿತ್ತು. ಮೂರನೆಯವರೊಬ್ಬರಿಂದ ಅವನಿಂದಾದದ್ದನ್ನು ತಿಳಿದು, ತಲೆಯ ಮೇಲೇ ಸಿಡಿಲು ಹೊಡೆಯುವುದಕ್ಕಿಂತ, ದೂರದಲ್ಲೆಲ್ಲೋ ಗುಡುಗು ಕೇಳಿ, ಮಿಂಚು ಹೊಡೆದಿದ್ದರೆ ತಪ್ಪಿಸಲು ಒಂದಷ್ಟು ಪ್ರಯತ್ನ ಪಡಬಹುದಿತ್ತೇನೋ. ಅದಕ್ಕೇ ತಿಳಿಸಿಲ್ಲ ಬೇಶರಮ್! ಇಂತವನನ್ನು ನಂಬುವುದಾದರೂ ಹೇಗೆ?! ಇವನಂಥವನೊಡನೆ ಜೀವನವೇ ಮುಗಿಯಿತು.. ಎಲ್ಲಾ ಮುಗಿಯಿತು.. ಇನ್ನಿವನನ್ನು ಖಂಡಿತಾ ನಾನು ನಂಬಲಾರೆ.

ಅವನ ಮನದಲ್ಲೂ ಚಿಂತೆಯ, ವಿಷಾದದ, ಪಶ್ಚಾತ್ತಾಪದ ಸುನಾಮಿಯ ಅಲೆಗಳೇಳಲು ಆರಂಭಿಸಿದ್ದವು. ಆದರೆ ಆ ಅಲೆಗಳಿಗೆ ಅವಳೆದೆಯ ಜ್ವಾಲಾಗ್ನಿಯನ್ನು ನಂದಿಸಲು ಸಾಧ್ಯವಿಲ್ಲ ಎನ್ನುವ ಅರಿವಿತ್ತು. ತಪ್ಪಾಗಿದೆಯೆನ್ನುವುದು ನಿಜ. ಆದರೆ ಅದನ್ನು ಮಾಡಲೇಬೇಕಾದ ಸಂದರ್ಭವಿತ್ತು ಎನ್ನುವುದನ್ನು ಅವಳಿಷ್ಟು ಅರ್ಥಮಾಡಿಕೊಳ್ಳ ಬಹುದಿತ್ತೇನೋ. ಅವಳ ಭಾವನೆಗಳನ್ನು ನಾನು ಹಗುರಾಗಿ ತೆಗೆದುಕೊಂಡೆನೇ. ಆ ಸಮಯದಲ್ಲಿ ಅವಳಿಗಿಂತಲೂ ಆ ಘಳಿಗೆಗೆ ಅದನ್ನು ಮಾಡುವುದೇ ಮುಖ್ಯವೆಂದು ಅನ್ನಿಸಿದ್ದು ತಪ್ಪಾಯಿತೆ? ಮಾಡದಿದ್ದರೆ ನನ್ನ ಜನ್ಮಪೂರ್ತಿ ನನ್ನನ್ನು ಕ್ಷಮಿಸಿಕೊಳ್ಳಲು ಸಾಧ್ಯವಿತ್ತೇ. ಅಷ್ಟು ನಿರ್ಮಮಕಾರವಾಗಿ ಯೋಚಿಸಲು ತನ್ನಿಂದ

ಸಾಧ್ಯವಿತ್ತೇ? ಬಗೆಹರಿಯಲಿಲ್ಲ ಅವಳ ಎಲ್ಲಾ ನಂಬಿಕೆ, ವಿಶ್ವಾಸವನ್ನು ಇದೊಂದರಿಂದ ಕಳೆದುಕೊಂಡುಬಿಟ್ಟೆನೆ?? ಮೊದಲಿನಂತಾಗಲು ಸಾಧ್ಯವೇ? ತಲೆ ಕೊಡಹಿದ. ಬಗೆಹರಿಯಲಿಲ್ಲ.

ಮಧ್ಯಾಹ್ನವೂ ಕಳೆದು ಸಂಜೆಯಾಗತೊಡಗಿತು. ಸೂರ್ಯ ಮುಖ ತೋರಲಿಲ್ಲ. ಇಬ್ಬರೂ ಅವರವರದೇ ಲೋಕದಲ್ಲಿ ಕಳೆದುಹೋದರು. ಕೋಣೆಯಿಂದ ಅವಳು ಹೊರಬರಲಿಲ್ಲ; ಬಾಲ್ಕನಿಯಿಂದ ಇವನು ಒಳಹೋಗಲಿಲ್ಲ. ಹಾಗೆಯೇ ಸಂಜೆಯೂ ಕಳೆದುಹೋಯಿತು. ಕತ್ತಲಿನಲ್ಲಿ ಆಕಾಶದಲ್ಲಿ ದೂರದಲ್ಲೆಲ್ಲೋ ಮಿಂಚುತ್ತಿರುವುದು ಕಾಣುತ್ತಿದೆ. ಎಷ್ಟೋ ದೂರದಲ್ಲಿ ಸಣ್ಣಗೆ ಗುಡುಗಿನ ಸದ್ದು ಕೇಳುತ್ತಿದೆ. ಎಲ್ಲಿಂದಲೋ ಮೆಲ್ಲನೆ ತಣ್ಣನೆಯ ಗಾಳಿ ಸುಳಿಯುತ್ತಾ ಮಳೆ ಸುರಿಯಬಹುದೇನೋ ಎನ್ನುವ ನಿರೀಕ್ಷೆಯನ್ನು ಹುಟ್ಟುಹಾಕುತ್ತಿದೆ. ಇಬ್ಬರಿಗೂ ಬೆಳಗಿನಿಂದಲೂ ಅರಿವಿಗೆ ಬಂದಿರದಿದ್ದ ಹಸಿವು ಈಗ ಹೊಟ್ಟೆಯಲ್ಲಿ ಸಂಕಟದ ಅಲೆಗಳನ್ನು ಎಬ್ಬಿಸುತ್ತಿದೆ. ನಾಳಿನ ಬೆಳಗಿಗೆ ಇಬ್ಬರೂ ತಯಾರಾಗಬೇಕಿದೆ. ಆದರೂ ಇಬ್ಬರಿಗೂ ಎದ್ದೇಳಲು ಏನೋ ಹಿಂಜರಿಕೆ.

ರಾತ್ರಿಯಾಯಿತು. ಸಣ್ಣಗೆ ಮಳೆ ಹನಿಯಲು ಆರಂಭವಾಗಿ ಕರೆಂಟು ಹೋಯಿತು. ಜಗವೆಲ್ಲಾ ನಿದ್ರೆಗೆ ಜಾರತೊಡಗಿತು. ಸಂಕಟ ತಾಳಲಾಗದೆ ಕತ್ತಲಲ್ಲೇ ಎದ್ದು ಬಂದವಳು ಅಡುಗೆಮನೆ ಹೊಕ್ಕು ಮೋಂಬತ್ತಿ ಹಚ್ಚಿಕೊಂಡು ಬೆಳಗ್ಗೆಯೇ ಫ್ರಿಡ್ಜಿನಿಂದ ತೆಗೆದಿಟ್ಟು ಈಗ ಹುಳಿ ಬಂದುಹೋಗಿದ್ದ ಇಡ್ಲಿ ಹಿಟ್ಟನ್ನು ತಟ್ಟೆಗಳಿಗೆ ಸುರಿದು ಬೇಯಲಿಟ್ಟಳು. ಹಿಂದೆಯೇ ಅವನೂ ಎದ್ದು ಬಂದು ಹಿಂದಿನ ದಿನದ ಸಾಂಬಾರನ್ನು ಫ್ರಿಡ್ಜಿನಿಂದ ತೆಗೆದು ಅಡುಗೆ ಕಟ್ಟೆಯ ಮೇಲಿಟ್ಟು, ಡೈನಿಂಗ್ ಟೇಬಲ್ಲಿನ ಮೇಲೆ ತಟ್ಟೆ, ನೀರಿನ ಲೋಟಗಳನ್ನು ಜೋಡಿಸಿ ಎಮರ್ಜೆನ್ಸಿ ದೀಪವನ್ನು ಹಚ್ಚಿಟ್ಟ. ಬಿಸಿಬಿಸಿಯಾದ ಹುಳಿ ಹುಳಿ ಇಡ್ಲಿಗೆ ಇನ್ನೇನು ಹಳಸಲು ಬಂದಿದ್ದ ಸಾಂಬಾರನ್ನು ನೆಂಚಿಕೊಂಡು ಇಬ್ಬರೂ ಮೌನವಾಗಿಯೇ ತಿಂದು ಮುಗಿಸಿದರು. ಅವಳು ಅಡುಗೆ ಕಟ್ಟೆಯನ್ನು ಒರೆಸಲು ಹೋದರೆ ಇವನು ಡೈನಿಂಗ್ ಟೇಬಲ್ಲನ್ನು ಶುಚಿಮಾಡಿದ. ಮೌನದಲ್ಲೇ ಕದನವಿರಾಮವಾಗಿತ್ತು. ಏಕೆಂದರೆ ಅವರಿಬ್ಬರ ತಲೆಯ ಮೇಲೂ ಇದ್ದದ್ದು ಒಂದೇ ಸೂರು, ಹಂಚಿಕೊಳ್ಳಲು ಒಂದೇ ಹಾಸಿಗೆ. ಹಾಗೆಯೇ ಇರಲೇಬೇಕಾದ ಅನಿವಾರ್ಯತೆ.

*****

ರುದ್ರ ಶೋಕ

– ರಾಧಿಕಾ ವಿ. ಗುಜ್ಜರ್

ಕಣಿಪಿಣಿಯಲ್ಲೇ ಕೃಷ್ಣನ ರುಕ್ಮಿಣಿಯಾದೆ
ಯಾದವರಂತೆ ಎದೆತುಂಬಿ ಪ್ರೀತಿಸಲಿಲ್ಲ
ಪಟ್ಟಕ್ಕೆ ಮೀಸಲು ಪಟ್ಟದರಸಿಯಾದೆ
ಉಸಿರ ಸೇರಿ ಸೋಹಿಯಾಗದಾದೆ

ಪಂಚಭೂತಗಳ ಕಾಯವಿನ್ನೂ ಇದೆ
ಪರದ ಭಗವಂತ ನೀನೇ ಹೊರಟೆ
ಕ್ಷೀರಾಂಬುಧಿಯ ಹಂಸವಿದ್ದವಳು
ಶೋಕ ಸಾಗರಕಿಳಿದು ಲವಣವಾದೆ

ಪುರದಿಂದ ನಿರ್ಗಮಿಸಿಹರು ಪ್ರಜೆಗಳು
ಬದುಕಿಗೆ ಬೆನ್ನು ಹಾಕಿ ನೀ ಹೊರಟಂತೆ
ನಿರ್ವಾತ ಭವ್ಯ ಶ್ರೀಮಂತ ನಗರ
ನಿಂತಿದೆ ಮೌನದಿ ತದ್ರೂಪು ನನ್ನಂತೆ

ಕಾಲಡಿಯ ನೆಲವೆಲ್ಲ ಕಂಪಿಸುತ್ತಾ
ಕಾಣುವವರೆಗಿನ ಸುವರ್ಣ ನಗರಿ
ಇಂಚಿಂಚು ಜಲದ ಗರ್ಭಕಿಳಿಯುತ್ತಿದ್ದರೂ
ನಿನ್ನಗಲಿಕೆ ಹಿರಿದಾಯ್ತುವರಿಗೆ ಮುರಾರಿ

ಮನೆ, ಮನವ ಮರೆತು ಅಚೇತರಾಗಿ
ತೆರೆದುಕೊಂಡಿಹರು ತಮ್ಮನ್ನೇ ಸದಯಕೆ
ಅದೆಷ್ಟು ಪ್ರೇಮಾನುರಾಗವ ಹಂಚಿರುವೆ
ಶೋಕದ ಭಾರಕ್ಕೆ ರಾಜ್ಯವೇ ಮುಳುಗಡೆ

ನೀನೇ ಉಡುಗೊರೆ ಪಡೆದ ದ್ವಾರಕೆಯಿದು
ನಿನ್ನೊಡನೆಯೇ ಮುಳುಗಿ ಹೊರಟಿದೆಯೀಗ
ಸಮುದ್ರನು ಒಮ್ಮೆ ಹಿಂಪಡೆಯದಿದ್ದರೂ
ಮುಳುಗಿಸುತ್ತಿತ್ತು ಪ್ರಜೆಗಳೀ ರುದ್ರ ಶೋಕ
ಪ್ರಜೆಗಳೀ ರುದ್ರ ಶೋಕ
ಪ್ರಜೆಗಳೀ ರುದ್ರ ಶೋಕ

***

ನೋಡಿಯೋ ಸಾಹಿತ್ಯ ದಾಸೋಹ ೨೦೨

ಅಧ್ಯಕ್ಷರ ಅನಿಸಿಕೆಗಳು

- ಸರಸ್ವತಿ ನಟರಾಜ್

ವಾಗ್ದೇವಿಯ ಕೃಪೆಗೆ ಪಾತ್ರರಾಗಿರುವ ಇಲ್ಲಿನ ಎಲ್ಲಾ ಸಹೃದಯ ಬಂಧುಗಳಿಗೆ ಆದರಪೂರ್ವಕ ನಮನಗಳು.

ನೋಡಿಯೋ ಸಾಹಿತ್ಯ ದಾಸೋಹ ಇನ್ನೂರ ಎರಡರ ಅಧ್ಯಕ್ಷ ಪಟ್ಟಕ್ಕೆ ಆದರದಿಂದ ನನ್ನನ್ನು ಆಹ್ವಾನಿಸಿದ್ದೀರಿ. ಇದಕ್ಕಾಗಿ ಮೊಟ್ಟಮೊದಲು ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಿಜವಾಗಿ ನಾನು ಇಂಥ ವೇದಿಕೆಯ ಭಾಗವಾಗುತ್ತೇನೆ ಎಂದು ಕನಸು ಮನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಇದು ನನ್ನ ಜೀವನದ ಒಂದು ಮಹತ್ವದ ತಿರುವು. ತಿರುವು ಎಂದು ಏಕೆ ಹೇಳುತ್ತೇನೆ ಎಂದರೆ ಎಲ್ಲೋ ಒಂದು ಕಡೆ ಇನ್ನೇನು ಎಲ್ಲಾ ಸ್ಥಗಿತವಾಗಿ ಬಿಟ್ಟಿತು, ನನ್ನಿಂದ ಇನ್ಯಾವ ಸೃಜನಶೀಲತೆಯೂ ಸಾಧ್ಯವಿಲ್ಲ ಅನ್ನುವ ಒಂದು ಹಂತದಲ್ಲಿ ನಾನು ಕಗ್ಗದಾಸಪುರದಿಂದ ಏಜೀಸ್ ಲೇಔಟ್‌ಗೆ ಬಂದೆ. ಒಂದಿಷ್ಟು ಹೊರಜಗತ್ತಿಗೆ ನನ್ನನ್ನು ತೆರೆದುಕೊಳ್ಳುವ ಅವಕಾಶ ಬಂತು. ರತ್ನ ಮೂರ್ತಿಯವರ ಪರಿಚಯವಾಯಿತು. ಅಲ್ಲಿಂದ ವೇದಿಕೆ ನನ್ನನ್ನು ಒಪ್ಪಿಕೊಂಡಿತು. ನಿಜ ಒಂದಿಷ್ಟು ಅಳುಕಿತ್ತು. ಬೇರೆ ಬೇರೆ ಕೆಲವು ಸಂಘ-ಸಂಸ್ಥೆಗಳ ಗುಂಪುಗಾರಿಕೆ, ಕಾಲೆಳೆಯುವಿಕೆ, ಸ್ವಾರ್ಥ-ಸ್ವಕೀಯ-ಪರಕೀಯ ಗೊಂದಲ ಇವುಗಳ ಬಗ್ಗೆ ಕೇಳಿದ್ದ ನಾನು ಯಾವುದೇ ಗುಂಪಿನ ಭಾಗವಾಗಲು ಹಿಂಜರಿಯುತ್ತಿದ್ದೆ. ಆದರೆ ಸಮನ್ವಯ ಸಮಿತಿ ಕನ್ನಡವೇ ಸತ್ಯ ಮತ್ತು ನೋಡಿಯೋ ಸಾಹಿತ್ಯ ದಾಸೋಹ ಕನ್ನಡದ ಕೈಂಕರ್ಯವನ್ನು ಎಷ್ಟು ಚೆನ್ನಾಗಿ ಮಾಡುತ್ತಿವೆ ಎಂದರೆ -ಇಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಇಲ್ಲಿರುವ ಮೇರು ಪ್ರತಿಭೆಗಳ ವಿದ್ವತ್ಪೂರ್ಣ ರಚನೆಗಳ ಜೊತೆ ಜೊತೆಗೇ ಹೊಸದಾಗಿ ಲೇಖನ ಕೃಷಿಗೆ ತೊಡಗಿದವರನ್ನೂ ಬೆನ್ನು ತಟ್ಟಿ ಪ್ರೋತ್ಸಾಹಿಸುವ, ಕೈಹಿಡಿದು ನಡೆಸುವ ಹೊಸಹೊಸ ಪ್ರಯೋಗಗಳನ್ನು ಮಾಡುತ್ತಿರುವ ಈ ಪರಿಗೆ ಶರಣು ಶರಣು.

ಎಲ್ಲಕ್ಕಿಂತ ಇಲ್ಲಿಯ ಶಿಸ್ತು ನನಗೆ ಅಚ್ಚುಮೆಚ್ಚು. ಸದಸ್ಯರೆಲ್ಲರಿಂದ ಪ್ರೀತಿಯ ಹೆಡ್‌ಮಾಸ್ಟರ್ ಹುದ್ದೆಯಲ್ಲಿ ಪ್ರತಿಷ್ಠಾಪಿಸಲ್ಪಟ್ಟ ರವೀಂದ್ರ ಸರ್, ಸದ್ದಿಲ್ಲದೆ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿರುವ ಶ್ರೀಯುತರುಗಳಾದ ಮಹಾಬಲ, ಗುರುಪ್ರಸಾದರವರು, ಗುರುರಾಜ ಶಾಸ್ತ್ರಿ, ಶೃಂಗೇಶ್ವರ ಶರ್ಮ, ರೇಣುಕಾ ದೇಸಾಯಿ ಇನ್ನು ಹಲವರು ಶಿಸ್ತುಬದ್ಧವಾಗಿ ಕಾರ್ಯಕ್ರಮ ನಿರ್ವಹಣೆ, ದಾಖಲೀಕರಣ, ತಾಂತ್ರಿಕ ಸಹಾಯ, ಸಂಕಲನ, ತೆರೆಮರೆಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ, ನೋಡಿಯೋ ಕಾರ್ಯಕ್ರಮಗಳು ದಾಸೋಹದಿಂದ ದಾಸೋಹಕ್ಕೆ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವಲ್ಲಿ ಶ್ರಮಿಸುತ್ತಿದ್ದಾರೆ. ಇವರೆಲ್ಲರಿಗೆ ಹಾರ್ದಿಕವಾಗಿ ಅಭಿನಂದಿಸುತ್ತ ಈ ವೇದಿಕೆ ಕನ್ನಡದ ಕೈಂಕರ್ಯವನ್ನು ನಿರಂತರವಾಗಿ ಕೈಗೊಳ್ಳಲಿ. ಎಲ್ಲೆಡೆಯಿಂದಲೂ ಬಂದು ಸೇರುತ್ತಿರುವ ಚಿಕ್ಕ-ದೊಡ್ಡ ತೊರೆಗಳಿಂದ ಸಾಹಿತ್ಯ ಸರೋವರ ಸಮೃದ್ಧವಾಗಲಿ ಎಂದು ಹಾರೈಸುತ್ತೇನೆ.

ಇಂದಿನ ಪ್ರಸ್ತುತಿಗಳನ್ನು ಕುರಿತು ನಾನು ಮಾತನಾಡಬೇಕು. ಇದು ಅಧ್ಯಕ್ಷೆಯ ಕರ್ತವ್ಯವಾಗಿದೆ.

ದಯವಿಟ್ಟು ಗಮನಿಸಿ. ನಾನು ವಿಮರ್ಶಕಳಲ್ಲ. ಕೇವಲ ಓದುಗಳು. ಆದ್ದರಿಂದ ವಿಮರ್ಶಾ ದೃಷ್ಟಿಯಿಂದ ನಾನು ಏನನ್ನೂ ಹೇಳಲು ಹೋಗಿಲ್ಲ. ಲೇಖನಗಳು ಬಂದವು, ಆಸಕ್ತಿಯಿಂದ ಓದಿದೆ. ಅನಿಸಿದ ನಾಲ್ಕು ಮಾತುಗಳನ್ನು ಬರೆದುಕೊಂಡೆ. ಅದನ್ನೇ ಹೇಳುತ್ತಾ ಹೋಗುತ್ತೇನೆ.

ಇಂದಿನ ವಿಶೇಷತೆ ಅಂದರೆ ಕವನಗಳ ಸಂಖ್ಯೆ ಬಹಳ ಕಡಿಮೆ. ಲೇಖನಗಳ ವಿಷಯಗಳ ಆಯ್ಕೆಯಲ್ಲಿ ಒಂದಿಷ್ಟು ಏನು, ಬಹಳಷ್ಟು ವೈವಿಧ್ಯತೆ ಇದೆ. ನನಗೆ ತುಂಬಾ ಖುಷಿಕೊಟ್ಟ ವಿಷಯವಿದು. ಈಗ ಒಂದೊಂದಾಗಿ ಪ್ರಸ್ತುತಿಗಳನ್ನು ನೋಡೋಣ.

೧. ಮೊದಲಿಗೆ ರಘುರಾಮ್ ಅವರ ಮನೋಲಹರಿ, 'ಅಪ್ಪ ಮತ್ತು ಹುಲಿ'.. ಅಪ್ಪಂದಿರ ದಿನದ ಶುಭಾಶಯಗಳೊಂದಿಗೆ ಅಪ್ಪನನ್ನು ಕುರಿತು ಬರೆದದ್ದು. ಇಲ್ಲಿ ಅಪ್ಪನ ವ್ಯಕ್ತಿತ್ವಕ್ಕೆ ಸಂವಾದಿಯಾಗಿ ಹುಲಿ ಬರುತ್ತದೆ. ಸತ್ಯವನ್ನು ಪ್ರತಿಪಾದಿಸಿದ, ಗುಡ್ಡದಿಂದ ಹಾರಿ ಪ್ರಾಣಬಿಟ್ಟ ಗೋವಿನಷ್ಟೇ ಹುಲಿಯೂ ಒಳ್ಳೆಯ ಪ್ರಾಣಿ ಎಂದು ಯಾಕೆ ಹೇಳುವುದಿಲ್ಲ ಎಂಬ ಪ್ರಶ್ನೆ ಎತ್ತಿದ್ದಾರೆ. ಹುಲಿ ತನ್ನ ಧರ್ಮ ಬಿಡುವುದಿಲ್ಲ. ಹಿಂದಿನಿಂದ ಬೇಟೆಯಾಡುವುದಿಲ್ಲ. ಅಪ್ಪನೂ ಹಾಗೆಯೇ. ಸಿಂಹದಂತೆ ವಿಸ್ತರಣೆಯ ಮಾರ್ಗ ಹಿಡಿಯದೆ, ಧರ್ಮದ ದಾರಿ ಪಾಲಿಸುವ ಹುಲಿಯಂತೆ ಇದ್ದರೂ ಅಪ್ಪ. ಅವರೇ ನನಗೆ ಆದರ್ಶ ಎಂದು ಸ್ಪಷ್ಟಪಡಿಸುತ್ತಾರೆ. ಲೇಖನ ಆಪ್ತವೆನಿಸುತ್ತದೆ. ಅಭಿನಂದನೆಗಳು.ರಘುರಾಂ.

೨. ಕೆ ಆರ್ ವೆಂಕಟೇಶ್‌ರವರ 'ಇದು ಕರ್ಮಫಲವೇ?'. ಕರ್ಮ, ಕರ್ಮಫಲ ಅನೇಕ ಸಲ ನಾವು ಜೀವನದಲ್ಲಿ ಹಾಕಿಕೊಳ್ಳುವ ಪ್ರಶ್ನೆ. ಎಷ್ಟೋ ಸಲ ನಡೆಯುವ ಘಟನೆಗಳಿಗೆ, ಕಾರ್ಯಕಾರಣ ಸಂಬಂಧವನ್ನು ಹುಡುಕುವಲ್ಲಿ ನಾವು ಸೋತುಹೋಗುತ್ತೇವೆ. ಯಾಕೆ ಹೀಗೆ ಆಗಬೇಕು? ಆಯ್ತು? ಅನ್ನೋ ಪ್ರಶ್ನೆಗಳಿಗೆ ಉತ್ತರ ಸಿಗದು. ಹಾಗೆಂದು ಎಲ್ಲಾ ಸಂದರ್ಭಗಳನ್ನು ಕಾಕತಾಳೀಯ ಎಂಬ ಪದದಿಂದ ಸವರಲಾಗದು. ಎಲ್ಲೋ ಯಾರದೋ ಮುಖಾಮುಖಿ, ಎಲ್ಲಿಂದಲೋ ಸಹಾಯ ಅಥವಾ ಮೋಸ, ಇವೆಲ್ಲಾ ಅನೂಹ್ಯವಾದ ಪ್ರಶ್ನೆಗಳನ್ನೆಬ್ಬಿಸುತ್ತವೆ. ಇದೇ ಪ್ರಶ್ನೆಯನ್ನೇ ಇಲ್ಲಿ ನಡೆದ ಸರಪಳಿ ಘಟನೆಗಳ ಮೂಲಕ ಎತ್ತಿದ್ದಾರೆ. ಅಭಿನಂದನೆಗಳು ವೆಂಕಟೇಶ್ ಅವರೇ.

೩. ಗೌರಿ ಭಟ್ ಅವರ 'ಊಟ ಮಾಡುವುದು ಅಂದರೆ ಮುಕ್ಕುವುದು ಅಲ್ಲ'. ಹೆಸರು ಕೇಳಿದರೆ ಇಷ್ಟೇನೇ ಅನಿಸಬಹುದು. ಆದರೆ ಇದರಲ್ಲಿ ಅಡಕವಾಗಿರುವ ವಿಷಯಗಳು ಗಹನವಾಗಿವೆ. ಇಂದು ಟೇಬಲ್ ಸಂಸ್ಕೃತಿ, ಬಫೆಟ್ ಸಂಸ್ಕೃತಿಯ ನಡುವೆ ಕಳೆದುಹೋಗುತ್ತಿರುವ ಅನ್ನವೇ ಪರಬ್ರಹ್ಮ ಎಂಬ ಮಹಾನ್ ಭಾವನೆಯನ್ನು ಎತ್ತಿಹಿಡಿಯುವ ಲೇಖನ. ಇಲ್ಲಿ ಶಿವರಾಮ ಭಟ್ಟರು ನಮ್ಮ ಸನಾತನ ಧರ್ಮದ ಪ್ರತೀಕವಾಗುತ್ತಾರೆ. ಅನಿರುದ್ಧ ಇಂದಿನ ತಲೆಮಾರಿನ ಪ್ರತೀಕವಾಗುತ್ತಾನೆ. ಊಟವನ್ನು ಹೇಗೆ ಮಾಡಬೇಕು, ಯಾವ ಭಾವನೆಯಿಂದ ಮಾಡಬೇಕು ಇದು ಈಗ ಮರೆತೇ ಹೋಗುತ್ತಿದೆ. ನನ್ನ ಸ್ನೇಹಿತೆ ಒಬ್ಬರು ಹೇಳ್ತಾ ಇರ್ತಾರೆ, ಈಗ ಶ್ರೀಮಂತರ ಹಾಗೆ ಸಂಪಾದಿಸುತ್ತಾರೆ - ಭಿಕ್ಷುಕರ ಹಾಗೆ ತಿನ್ನುತ್ತಾರೆ ಅಂತ. ಇದು ಬೀದಿಬದಿಯಲ್ಲಿ ತಿನ್ನುವವರನ್ನು ನೋಡಿದಾಗ ಅವರು ಹೇಳಿದ ಮಾತು. ಅನ್ನಂ ನ ಪರೀಚಕ್ಷೀತ, ತದ್ ವೃತಂ ಅನ್ನಮ್ ನ ನಿಂದ್ಯಾತ್- ಇದೆಲ್ಲಾ ಮಕ್ಕಳಿಗೆ ಚಿಕ್ಕವಯಸ್ಸಿನಲ್ಲೇ ಹೇಳಿಕೊಡಬೇಕಾದ ವಿಷಯ. ಸಾಮೂಹಿಕವಾಗಿ ಭೋಜನಕ್ಕೆ ಕುಳಿತಾಗ ಇರುವ ಕೆಲವು ನಡವಳಿಕೆಗಳನ್ನು ಕಲಿಸಬೇಕಾದುದು ಅಗತ್ಯವೂ ಹೌದು. ಅಭಿನಂದನೆಗಳು ಗೌರಿ ಭಟ್.

೪. ಗಣಪತಿ ಹೆಗಡೆಯವರು ಈ ಸಲ 'ಅನುಸ್ವಾರ ಹಾಗೂ ಅನುನಾಸಿಕಗಳು' ಎಂದು ಕನ್ನಡ ವ್ಯಾಕರಣ ಪಾಠವನ್ನು ಪ್ರಸ್ತುತಿಗೆ ತೆಗೆದುಕೊಂಡಿದ್ದಾರೆ. ಕನ್ನಡದ ಅಕ್ಷರಗಳು, ಅವುಗಳ ವಿಭಾಗಗಳು, ಕೇಶಿರಾಜನು ಶಬ್ದಗಳ ಉತ್ಪತ್ತಿಯ ಕುರಿತು ಬರೆದ ಪ್ರಸಿದ್ಧ ಪದ್ಯಗಳನ್ನು, ಶಬ್ದಗಳ ಜನ್ಯಸ್ಥಾನಗಳು, ಇವುಗಳನ್ನು ಇಂದಿನ ದಾಸೋಹಗಳು ಹಾಗೂ ಶ್ರೋತೃಗಳಿಗೆ ಪಾಠ ಮಾಡಿದ್ದಾರೆ. ಅಭಿನಂದನೆಗಳು ಗಣಪತಿ ಹೆಗಡೆಯವರೇ.

೫. ಇವತ್ತಿನ ಅತ್ಯಂತ ವಿಶಿಷ್ಟವಾದ ಪ್ರಸ್ತುತಿ ಶೀಲಾ ಅರಕಲಗೂಡು ಅವರ **'ಪ್ರಾಸ ವೈವಿಧ್ಯ'**. ಕಾವ್ಯ ಪ್ರಪಂಚದಲ್ಲಿ ಪ್ರಾಸದ ಮಹತ್ವ ಎಲ್ಲರಿಗೂ ತಿಳಿದದ್ದೆ. ಸರ್ವಜ್ಞ ಹೇಳಿದ ಹಾಗೆ 'ಪ್ರಾಸವಿಲ್ಲದ ಪದವ ತಾಸು ಹಾಡಿದೊಡೇನು'. ಕಾವ್ಯಕ್ಕೆ ಗೇಯತೆ ತಂದುಕೊಡುವ ಪ್ರಾಸದ ಆರು ವೈವಿಧ್ಯತೆಯನ್ನೇ ವಿಷಯವನ್ನಾಗಿಸಿಕೊಂಡು ರಚಿಸಿರುವ ಈ ಮುಕ್ತಕ ಗಳನ್ನು ಬಾಯಿಪಾಠ ಮಾಡಿಕೊಂಡರೆ ಸಾಕು, ಅದರಲ್ಲಿಯೇ ಅಡಕವಾಗಿರುವ ಪ್ರಾಸದ ನಾಮಗಳೂ ಸುಲಭವಾಗಿ ವೇದ್ಯವಾಗುವುದು. ನನ್ನ ದೃಷ್ಟಿಯಲ್ಲಿ ಪಠ್ಯಪುಸ್ತಕದಲ್ಲಿ ಸೇರ್ಪಡೆಗೊಳ್ಳಬಹುದಾದ ಮುಕ್ತಕಗಳು ಇವು. ಅಭಿನಂದನೆಗಳು ಶೀಲಾ.

೬. ಶಾಂತಿವಾಸು ಅವರ ಇವತ್ತಿನ ಪ್ರಸ್ತುತಿ **'ಮನ ಜ್ವಾಲೆ'**. ಹೆಣ್ಣು ತಂಪಾದ ನದಿಯೂ ಹೌದು. ಗುಪ್ತ ಜ್ವಾಲಾಮುಖಿಯೂ ಹೌದು. ಹೆಣ್ಣಿನ ದೇಹದ ವಿವಿಧ ಘಟ್ಟಗಳಲ್ಲಿ ಆಗುವ ಬದಲಾವಣೆಗಳು, ಮನದ ಬೇಗುದಿ ನಿರೀಕ್ಷೆ - ನಿರಾಸೆ ಇವುಗಳನ್ನು ಕಟ್ಟಿಕೊಡುವ ಕವನ ಮನ ಜ್ವಾಲೆ. ಅಭಿನಂದನೆಗಳು ಶಾಂತಿವಾಸು ಅವರೇ.

೭. ಶ್ರೀಮತಿ ಎಂ ಜಿ ನಾಗರತ್ನ ಅವರ ಮಿನಿಕಥೆ **'ಹೀಗೊಂದು ದೃಷ್ಟಿ'**. ಆಧುನಿಕ ಕಾಲಘಟ್ಟದಲ್ಲಿ ಮರೆತು ಹೋಗುತ್ತಿರುವ, ಇಂದಿನ ಯುವ ಪೀಳಿಗೆಗೆ ಮೂಢನಂಬಿಕೆ ಎನಿಸುವ, ದೃಷ್ಟಿ ತೆಗೆಯುವ ಕುರಿತಾಗಿದೆ. ನಮ್ಮ ಅನೇಕ ಆಚರಣೆಗಳಿಗೆ ವೈಜ್ಞಾನಿಕ ದೃಷ್ಟಿಕೋನವಿತ್ತು. ಆದರೆ ಇವೆಲ್ಲ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಬಂದು, ಇದೀಗ ವೈಜ್ಞಾನಿಕ ವಿವರಣೆ ಇಲ್ಲದೆ ನಮ್ಮ ಜೀವನದಿಂದ ಮರೆಯಾಗುತ್ತಿದೆ ಎನ್ನಬಹುದು. ಅಂಥದ್ದೇ ಒಂದು ದೃಷ್ಟಿ ಕುರಿತು ನಾಗರತ್ನ ಅವರು ಬರೆದಿದ್ದಾರೆ. ಸುಲಲಿತವಾದ ಬರಹ. ಕಥೆ ನೈಜತೆಯಿಂದ ಕೂಡಿದೆ. ಅಭಿನಂದನೆಗಳು ನಾಗರತ್ನ.

೮. ರೇಣುಕಾ ದೇಸಾಯಿಯವರು ಎರಡು ಕವನಗಳನ್ನು ಆರಿಸಿಕೊಂಡಿದ್ದಾರೆ. ಒಂದು **'ಅಳುವ ಚೆಲುವೆ'**. ಇಲ್ಲಿ ಜೀವನದಲ್ಲಿನ ಸಮಸ್ಯೆಗಳಿಗೆ ಕಣ್ಣೀರು ಪರಿಹಾರವಲ್ಲ. ಜಗನ್ನಾಟಕದಲ್ಲಿ ನಮ್ಮನಮ್ಮ ಪಾತ್ರವನ್ನು ಸಮಸ್ಥಿತಿಯಲ್ಲಿ ನಿರ್ವಹಿಸುತ್ತಲೇ, ಸೂತ್ರಧಾರನಿಗೆ ಶರಣಾಗತಿ-ಪ್ರಾರ್ಥನೆ ಸಲ್ಲಿಸುವುದು ನಮ್ಮ ಕರ್ತವ್ಯ ಎಂದಿದ್ದಾರೆ. ಗಹನ ತತ್ವವನ್ನು ಸರಳ ಭಾಷೆಯಲ್ಲಿ ಕಟ್ಟಿಕೊಡುವ ಕವನ.

ಎರಡನೇ ಕವನ **'ಯಾರಿವನು'**. ಕುವೆಂಪು ಅವರ ಯಾರಿವನು ಪಾಠದಿಂದ ಪ್ರೇರಣೆಗೊಂಡು ಕಟ್ಟಿರುವ ಕವನ. ಸ್ವಾಮಿ ವಿವೇಕಾನಂದರ ಮಹಾನ್ ಚೇತನವನ್ನು ಕಟ್ಟಿಕೊಡುವ ಕವನ. ಯಾರಿವನು ಎಂದು ಪ್ರಶ್ನಿಸುತ್ತಲೇ ವಿವೇಕಾನಂದರ ಸಮಗ್ರ ವ್ಯಕ್ತಿತ್ವವನ್ನು ನಮ್ಮೆದುರು ನಿಲ್ಲಿಸುತ್ತದೆ. ಅಭಿನಂದನೆಗಳು ರೇಣುಕಾ.

೯. **'ಆನಂದದ ಮೂಲ'** ಇದು ಗಿರಿಜಾ ರಾಜ್ ರವರ ಕತೆ. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವುದೇ ಜೀವನ ಎನ್ನುವಂತೆ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಹ ಸಂಸಾರವಿದ್ದೂ ಬೇಸರವೆನಿಸಿ ಕಣ್ಣೀರಿಡುವ ಹೆಣ್ಣಿನ ಕಥೆ. ಅಭಿನಂದನೆಗಳು ಗಿರಿಜಾ.

೧೦. **'ಎಲ್ಲಿ ಹೋದರೂ ತಿಪ್ಪೆ ದೇವರು'**. ಶಾಂತಾ ನಾಗಮಂಗಲ! ನನಗೆ ಅವರು ಯಾವಾಗಲೂ ಆಶ್ಚರ್ಯವೇ. ಅವರ ಪದ್ಯಗಳಲ್ಲಿ, ಮುಕ್ತಕಗಳಲ್ಲಿ ಬಳಸುವ ಗಂಭೀರ ಭಾವ-ಭಾಷೆಗೂ, ಅವರ ಲಲಿತ ಪ್ರಬಂಧಗಳಲ್ಲಿ ಆಯ್ದುಕೊಳ್ಳುವ ವಸ್ತು, ಬಳಸುವ ಭಾಷೆ, ಎರಡಕ್ಕೂ ಅಜಗಜಾಂತರ ವ್ಯತ್ಯಾಸವೆನ್ನಬಹುದು. ಹೀಗೂ ವಸ್ತುಗಳನ್ನು ಪ್ರಬಂಧಕ್ಕೆ ಆರಿಸಿಕೊಳ್ಳಬಹುದೇ ಎಂಬ ಭಾವನೆ ಎಲ್ಲರಿಗೂ ಬರುವುದರಲ್ಲಿ ಆಶ್ಚರ್ಯವಿಲ್ಲ. ಇತ್ತೀಚಿನ ಒಳ್ಳೆಯ ಪ್ರಬಂಧಕಾರ್ತಿ. ಅವರ ಪ್ರಬಂಧಗಳು ಕಳೆದುಹೋದ, ಹೋಗುತ್ತಿರುವ ಸಾಮಾಜಿಕ ಜೀವನ ಶೈಲಿಯನ್ನು, ಜೀವನ ಪದ್ಧತಿಯನ್ನು ನಮ್ಮ ತಲೆಮಾರಿನವರಿಗೆ ಆಪ್ತವಾಗಿ ನೆನಪಿಸಿಕೊಡುವ, ಇಂದಿನ ತಲೆಮಾರಿಗೆ ಪರಿಚಯಿಸುವ ಸರಳ ಗದ್ಯಗಳು. ಸುಲಲಿತ ಭಾಷೆಯಲ್ಲಿ ತಿಪ್ಪೆ, ಅದರ ಮೂಲ, ಅದಕ್ಕೂ ದೈವತ್ವ ಹೊರಿಸುವ ನಮ್ಮ ಸಂಸ್ಕೃತಿ ಇವೆಲ್ಲಾ ತುಂಬಾ ಚೆನ್ನಾಗಿ ಬಂದಿದೆ ಅಭಿನಂದನೆಗಳು ಶಾಂತಾ ನಾಗಮಂಗಲ ಅವರೇ.

೧೧. ಶ್ರೀಧರ ಬಾಣಾವರ ಅವರ **'ಆನಂದನಗರದ ಆನಂದದ ದಿನಗಳು'** ಭಾಷಾ ಗೊಂದಲಗಳು, ಪರಭಾಷೆಯ ಊರಿನಲ್ಲಿ ಎದುರಿಸುವ ಸಮಸ್ಯೆಗಳನ್ನು ಕುರಿತದ್ದು. ದೂರದ ಕಲ್ಕತ್ತೆಯಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಹಲವೊಮ್ಮೆ ಪದಗಳಿಗಿರುವ ಸಾಮ್ಯತೆಯನ್ನು ತಿಳಿಸುತ್ತಾ, ಲೇಖನ ಲವಲವಿಕೆಯಿಂದ ಓದುವಂತಿದೆ. ಅಭಿನಂದನೆಗಳು ಶ್ರೀಧರ ಬಾಣಾವರ ಅವರೇ.

೧೨. ಗುರುರಾಜ ಶಾಸ್ತ್ರಿಯವರು **'ವಿಶ್ವ ಬೈಸಿಕಲ್ ದಿನದ ಸವಾರಿ'**ಯ ಕುರಿತು ಲೇಖನ ಪ್ರಸ್ತುತಪಡಿಸಿದ್ದಾರೆ. ಕೇವಲ ಅನುಭವ ಅಷ್ಟೇ ಅಲ್ಲ, ಅದರೊಂದಿಗೆ ಸೈನಿಕ ತರಬೇತಿಗೆ ಸಂಬಂಧಪಟ್ಟ ಅನೇಕ ವಿಷಯಗಳ ಮಾಹಿತಿ ಇದೆ. ಶೂಟ್ ಶಾರ್ಪ್ ಅಕಾಡೆಮಿ, ಅದನ್ನು ಆರಂಭಿಸಿದ ಜನರಲ್ ಭಕುನಿಯವರ ಜೈ ಹೋ ಭಾರತ ಅಭಿಯಾನ ಪ್ರಾರಂಭವಾಗಿರುವುದು, ಅದರ ಉದ್ದೇಶ, ಅಕಾಡೆಮಿಯಲ್ಲಿ ಇಬ್ಬರು ಸೈನಿಕರು ಮತ್ತು ಶ್ವಾನದ ತರಬೇತಿ, ತರಬೇತಿಯ ನಂತರ ಸೈನಿಕರು ಮತ್ತು ಶ್ವಾನ ಹತ್ತು ವರ್ಷಗಳು ಒಟ್ಟಿಗೆ ಇರುವುದು ಇವೆಲ್ಲಾ ಸಾಮಾನ್ಯ ಜನರಿಗೆ ಹೊಸ ವಿಷಯಗಳು. ಅಭಿನಂದನೆಗಳು ಗುರುರಾಜ ಶಾಸ್ತ್ರಿಯವರೇ.

೧೩., ಮಾಲತಿ ಶ್ರೀನಿವಾಸನ್ ಇಂದು ಪ್ರಸ್ತುತಪಡಿಸಿದ ಎರಡು ಕವನಗಳಲ್ಲಿ ಮೊದಲನೆಯದು **'ವಲಸೆ ಹಕ್ಕಿಗಳು'**. ಇಂದಿನ ಸಮಾಜದಲ್ಲಿ ಹೆಚ್ಚಾಗಿ ಮಧ್ಯಮ ಕುಟುಂಬದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಕುರಿತ ವಾಸ್ತವ ಚಿತ್ರಣವಿದೆ. ಹಿರಿಹಕ್ಕಿಗಳು ಇಲ್ಲಿದ್ದು, ಯುವಹಕ್ಕಿಗಳು ಹಾರಿಹೋದ ವಿದೇಶಕ್ಕೆ ಪದೇಪದೇ ವಲಸೆ ಹೋಗಬೇಕಾದ ಅನಿವಾರ್ಯತೆಗೆ ಕಾರಣವಾದ ಬಾಂಧವ್ಯ, ಪ್ರೀತಿ-ವಾತ್ಸಲ್ಯದ ಸೆಳೆತ, ಕರ್ತವ್ಯಗಳ ಕುರಿತಾಗಿದೆ. ಇಲ್ಲಿ ಬಂದದ್ದನ್ನು ಸ್ವೀಕರಿಸುವ, ಗೊಣಗಾಡದಿರುವ ಮನಸ್ಥಿತಿಗೆ ನೀ ತೆರೆದುಕೋ, ಮುಂದಿನ ಪಯಣದ ನಿಲುಗಡೆಯ ಬಗ್ಗೆ ಚಿಂತೆ ಯಾಕೆ ಎಂಬ ಸಮಸ್ಥಿತಿಯ ಮನೋಭಾವ ಕಾಣುತ್ತದೆ.

ಇನ್ನೊಂದು ಕವನ **'ಬಾಂಧವ್ಯದ ಗುಟ್ಟೇನು?'** - ಬಾಂಧವ್ಯದ ವಿವಿಧ ಮಗ್ಗಲುಗಳ ಪರಿಯನ್ನು ಅಚ್ಚರಿಯಿಂದ ನಿಲುಕಿಸುವ ಕವನ. ರಕ್ತ ಸಂಬಂಧವೇ ಆಗಿರಲಿ, ಸ್ನೇಹ ಸಂಬಂಧವೇ ಆಗಿರಲಿ, ವಿವಿಧ ಪರಿಸ್ಥಿತಿಗಳಲ್ಲಿ ವಿವಿಧ ಪಾತ್ರವಹಿಸುವ ಅಚ್ಚರಿ ಇಲ್ಲಿದೆ. ಅಭಿನಂದನೆಗಳು ಮಾಲತಿಯವರೇ.

೧೪. ತಮ್ಮ ಲೇಖನಗಳಲ್ಲಿ ವಿಶಿಷ್ಟವಾಗಿ, ಕತೆಗಾರರು, ಕವಿ, ಕಲಾವಿದರನ್ನು ಪರಿಚಯಿಸುತ್ತಿರುವ ಇಜೇರಿಯವರು ಈ ಸಲ ಆಯ್ದುಕೊಂಡಿರುವುದು **'ಆಸ್ಕರ್ ವೈಲ್ಡ್ ಕತೆಗಳು'**. ಆಸ್ಕರ್ ವೈಲ್ಡ್‌ನ ಸಂಕ್ಷಿಪ್ತ ಪರಿಚಯ, ಅವನ ಸಾಹಿತ್ಯದ ಕುರಿತು ಅಂದಿಗೆ ಚಾಲ್ತಿಯಲ್ಲಿದ್ದ ಧೋರಣೆ, ಇವುಗಳ ಜೊತೆ ಅವನ ಒಂದು ಕಥೆ ರೂಪದರ್ಶಿಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಧನ್ಯವಾದಗಳು ಇಜೇರಿ ಅವರೇ.

೧೫. ಹುವಾಶ್ರೀಯವರ ಲೇಖನ– **'ಅತೀಂದ್ರಿಯ ಶಕ್ತಿಗಳು'**. ಬಹುಶಃ ಜಗತ್ತಿನ ಎಲ್ಲೆಡೆಯೂ ಇರುವ, ಜಗತ್ತು ಇರುವತನಕವೂ ಉತ್ತರ ಸಿಗದ, ಕಲ್ಪನೆಗೂ ನಿಲುಕದ ಅನುಭವ ವಿಷಯ ಎಂದರೆ ಅತೀಂದ್ರಿಯ ಶಕ್ತಿಗಳು. ವಿಜ್ಞಾನದ ನಿಕಷಕ್ಕೆ ಸಿಗದ ಆದರೆ ಅನಾದಿಯಿಂದಲೂ ಋಷಿಮುನಿಗಳಿಂದ ಹಿಡಿದು ಅನೇಕ ಸಾಧಕರ ಶಕ್ತಿ ಪವಾಡಗಳ ರೋಚಕತೆಗಳು ನಮ್ಮ ನಡುವೆ ಹರಿದಾಡುತ್ತಲೇ ಇವೆ. ಶ್ರದ್ಧೆಯೇ ಮತ್ತು ನಂಬಿಕೆಯೇ ಇದರ ಅಡಿಪಾಯ. ಇವುಗಳನ್ನು ಚರ್ಚಿಸುತ್ತಲೇ ಕರ್ಮಸಿದ್ಧಾಂತ, ಅತೀಂದ್ರಿಯ ಸಂಗತಿಗಳು ಮನುಷ್ಯನಿಗೆ ತನ್ನ ಇತಿಮಿತಿಯನ್ನು ತಿಳಿಸುತ್ತಲೇ ಆಧ್ಯಾತ್ಮಿಕವಾಗಿ ಅಲೌಕಿಕದ ಕಡೆಗೆ ಕೊಂಡೊಯ್ಯುತ್ತವೆ ಎಂದು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಸ್ವಾರಸ್ಯಕರವಾದ ಚಿಂತನೆಗೆ ದೂಡುವ ಲೇಖನ. ಅಭಿನಂದನೆಗಳು ಹುವಾಶ್ರೀಯವರೇ.

೧೬. ಜಿ.ವಿ. ಅರುಣ ಅವರ **'ಆಕಾಶವಾಣಿಯ ಬಾಲಜಗತ್-ಸುಮಧುರ ನೆನಪುಗಳು'**. ಅರುಣ ಅವರು ಹೇಳುವಂತೆ ಬಾಲ್ಯದ ನೆನಪುಗಳು ಅಂದರೆ ಸುಮಧುರ. ಜೊತೆಗೆ ಬಾಲ್ಯದಲ್ಲೇ ಅವರಿಗೆ ಕಥೆ ಹೇಳುವ ಕಲೆ ಸಿದ್ಧಿಸಿತ್ತು. ಆ ಪ್ರತಿಭೆಯಿಂದ ಆಕಾಶವಾಣಿಯ ಕಾರ್ಯಕ್ರಮದಲ್ಲಿ ನೇರಪ್ರಸಾರದಲ್ಲಿ ಭಾಗವಹಿಸಿದ ಕ್ಷಣಗಳು ಯಾವಾಗಲೂ ಪುಳಕ ತರುವಂತದ್ದು. ಮಾಲತಿ ಶರ್ಮಾ ಕೂಡ ಮೊದಲು ಕೊಟ್ಟ ಕಾರ್ಯಕ್ರಮ ಅದಾಗಿತ್ತು ಎನ್ನುವುದು ವಿಶೇಷ. ಜೊತೆಗೆ ಮಾಲತಿ ಶರ್ಮಾ ಅವರ ಸುಮಧುರ ಕಂಠವನ್ನೂ ಕೇಳಿಸಿದ್ದೀರಿ. ರೆಕಾರ್ಡಿಂಗ್‌ಗೆ ಹೋದಾಗ ನಡೆದದ್ದನ್ನು ನೆನಪಿಸಿಕೊಳ್ಳುತ್ತಾ ಮುಂದೆಂದೂ ಎಷ್ಟೋ ವರ್ಷಗಳ ನಂತರ ಬಾಲ್ಯ ಸ್ನೇಹಿತೆಯೊಂದಿಗೆ ಅದನ್ನು ನೆನಪಿಸಿಕೊಳ್ಳುವ ಸಂಭ್ರಮವೇ ಸುಮಧುರ. ಆ ಹಾಡು ಕೂಡ. ಅಭಿನಂದನೆಗಳು ಅರುಣ್ ಅವರೇ.

೧೭. ಜಿ.ವಿ. ನಿರ್ಮಲ ಅವರು ಆಯ್ದುಕೊಳ್ಳುವ ವಿಷಯಗಳು ಯಾವಾಗಲೂ ವಿಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ವೈಜ್ಞಾನಿಕ ಲೇಖನಗಳನ್ನು ಸರಳವಾಗಿ ಬರೆಯುವ ನಿರ್ಮಲಾ ಅವರು ಈ ಸಲ ಆರಿಸಿಕೊಂಡ ವಿಷಯ **'ಅಳತೆಮಾನಗಳ ಅಂಗಳದಲ್ಲಿ'**. ಹೌದಲ್ವಾ, ಎಷ್ಟೊಂದು ಪದಗಳನ್ನು ನಾವು ಮರೆತೇಬಿಟ್ಟಿದ್ದೇವೆ. ಇಂದಿನ ಮಕ್ಕಳಿಗೆ ಕೇಳಿಯೂ ಗೊತ್ತಿಲ್ಲದ ಪಾವು ಸೇರು ಚಟಾಕು ಚಿಟಿಕೆ ಪಿಡಿಚೆ ಬೊಗಸೆ ಇವುಗಳನ್ನೆಲ್ಲ ಅಜ್ಜಿ ಮೊಮ್ಮಕ್ಕಳಿಗೆ ಹಾಸ್ಯವಾಗಿ ತಿಳಿಸಿಕೊಡುತ್ತಾರೆ. ಹಾಗೆಯೇ ಅಳತೆ ಮಾಪಕಗಳು ಬದಲಾದಾಗ ಜನಸಾಮಾನ್ಯರಿಗೆ ಆಗುತ್ತಿದ್ದ ಗಲಿಬಿಲಿ ಇವುಗಳನ್ನು ವಿವರಿಸುತ್ತಾರೆ. ಮುಂದುವರಿದು ವ್ಯಾಸ-ಜ್ಯೋತಿರ್ವರ್ಷ ಹೀಗೆ ತಮ್ಮ ಕ್ಷೇತ್ರಕ್ಕೆ ಒಂದು ದಿಢೀರ್ ಭೇಟಿಕೊಟ್ಟು ಲೇಖನ ಮುಗಿಸಿದ್ದಾರೆ. ಅಭಿನಂದನೆಗಳು ನಿರ್ಮಲ.

೧೮. ನಾಗರತ್ನ ಮೂರ್ತಿ ಅವರ **'ನಾರಸಿಂಹ ದಂಡಕ'**. ನಾಗರತ್ನ ಅವರ ದಂಡಕ ಅಂದರೆ ಶಬ್ದಗಳ ಡಮರುಗ. ಅವರ ಭಂಡಾರದಲ್ಲಿರುವ ಶಬ್ದ ರಾಶಿ ಅಪಾರ. ಒಂದುರೀತಿಯ ಜಾದು. ಶಬ್ದಬ್ರಹ್ಮೆ. ದಿನದಿನವೂ ಗೌರಮ್ಮನ ವಚನಗಳು, ದಿನಕ್ಕೊಂದು ದೇವನುತಿ, ಪ್ರತಿ ದಾಸೋಹದಲ್ಲಿ ಹೊಸಹೊಸ ದಂಡಕಗಳು. ಎಲ್ಲರನ್ನೂ ಆ ಶಬ್ದ ಜಲಪಾತದಲ್ಲಿ ಸ್ತಬ್ಧರಾಗಿಸುವಂತಹ ಮೋಡಿ. ನಾಗರತ್ನ ಅವರೇ ಏನು ಹೇಳಲಿ ನಿಮಗೆ. ಪ್ರೀತಿಪೂರ್ವಕ ನಮಸ್ಕಾರ. ಅಭಿನಂದನೆಗಳು ನಾಗರತ್ನ.

೧೯. **'ಜ್ವಾಲಾಮುಖಿ ಮತ್ತು ಸುನಾಮಿಯ ಅಲೆ'** ಶ್ರವಣಕುಮಾರಿ ಅವರ ವಿಶಿಷ್ಟ ಕಥೆ. ಸಾಧಾರಣವಾಗಿ ಕಥೆಗಳು ಸುತ್ತುವುದು ಘಟನೆಗಳ ಅನಾವರಣದಲ್ಲಿ. ಇಲ್ಲಿ ಏನೋ ನಡೆದಿದೆ. ಆದರೆ ಅದು ಹೊರಬರುವುದೇ ಇಲ್ಲ. ಅದರ ಪರಿಣಾಮ ಮಾತ್ರ ಕಾಣುತ್ತಿದೆ. ಗಂಡ ನ್ಯಾಯಯುತವಾಗಿ ತನ್ನ ಆತ್ಮಸಾಕ್ಷಿಗೆ ಸರಿ ಎನಿಸಿದ್ದನ್ನು ಮಾಡಿದ್ದಾನೆ. ಹೆಂಡತಿಗೆ ಅದು ಒಪ್ಪಿಗೆ ಇಲ್ಲ. ಎರಡು ಕಾರಣಗಳಿಂದ ಅವಳು ಜ್ವಾಲಾಮುಖಿ ಆಗಿದ್ದಾಳೆ. ತನಗಿಷ್ಟವಿಲ್ಲದನ್ನು. ಮಾಡಿದ್ದನ್ನು ಅವನು ಮೊದಲೇ ಹೇಳಬಹುದಿತ್ತು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಗುಡುಗು, ದಟ್ಟೈಸಿದ ಮೋಡ. ಆದರೆ ಕೊನೆಗೆ ತೋರಿಕೆ ಯಾರೋ, ವಾಡಿಕೆಯದೋ ಅಲ್ಲಿ ಸಮರಸ ಬರಲೇಬೇಕು. ಕತ್ತಲೆಗೆ ಎಮರ್ಜೆನ್ಸಿ ದೀಪ, ಹಸಿವಿಗೆ ಹಸಿಯೋ ಹಳಸಿದ್ದೋ, ಒಂದಿಷ್ಟು ಆಹಾರ. ಮೌನದಲ್ಲೇ ಹಂಚಿಕೊಳ್ಳುವ ಕೆಲಸ. ದಾಂಪತ್ಯದ ಅನಿವಾರ್ಯತೆ, ಅಗತ್ಯತೆಯನ್ನು ಹೇಳುವಲ್ಲಿ ಸಶಕ್ತವಾಗಿದೆ. ಅಭಿನಂದನೆಗಳು ಶ್ರವಣಕುಮಾರಿ ಅವರೇ.

೨೦. ಇನ್ನು ಕಡೆಯದಾಗಿ ರಾಧಿಕಾ ಅವರ ಕವನ **'ರುದ್ರ ಶೋಕ'**. ತುಂಬಾ ವಿಶಿಷ್ಟವಾದ ವಸ್ತು. ಕೃಷ್ಣನ ಅವಸಾನ, ದ್ವಾರಕೆಯ ಮುಳುಗಡೆ, ಎರಡೂ ಆದಾಗ ರುಕ್ಮಿಣಿಯ ಸ್ಥಿತಿಯೇನು? ಒಂದು, ಅವಳ ಜೀವವೇ ಆಗಿದ್ದ ಕೃಷ್ಣನ ವಿಯೋಗ, ಇನ್ನೊಂದು ಕೃಷ್ಣನೇ ಆಗಿದ್ದ ದ್ವಾರಕೆಯನ್ನು ಸಮುದ್ರರಾಜ ಕೊಟ್ಟದ್ದನ್ನು ಹಿಂಪಡೆಯುವಾಗಲಿನ ಚಿತ್ರಣ. ಶೋಕದ ಭಾರಕ್ಕೆ ರಾಜ್ಯವೇ ಮುಳುಗಡೆ. ಕ್ಷೀರಾಂಬುಧಿಯ ಹಂಸವಿದ್ದವಳು ಶೋಕಸಾಗರಕಿಳಿದು ಲವಣವಾದೆ. ನಿರ್ವಾತ ನಗರ ಮೌನದಿ ತದ್ರೂಪು ನನ್ನಂತೆ ಸಶಕ್ತ ಸಾಲುಗಳ ಕವನ. ಅಭಿನಂದನೆಗಳು ರಾಧಿಕಾ.

ಇದು ನನಗನ್ನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳುವ ಪ್ರಯತ್ನ, ವಿಮರ್ಶೆಯಲ್ಲ. ಒಂದಕ್ಕಿಂತ ಒಂದು ವಿಶಿಷ್ಟವಾದ ಪ್ರಸ್ತುತಿಗಳನ್ನು ನೀಡಿದ ಎಲ್ಲರಿಗೂ ನನ್ನ ಅಭಿನಂದನೆಗಳನ್ನು ಮತ್ತೊಮ್ಮೆ ತಿಳಿಸುತ್ತೇನೆ. ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಆಯ್ಕೆ ಮಾಡಿ ಗೌರವಿಸಿದ ಸಾಹಿತ್ಯದ ರೂವಾರಿಗಳಿಗೆ, ಲೇಖನಗಳನ್ನು ಸಕಾಲದಲ್ಲಿ ಕಳುಹಿಸಿದ ಪ್ರಸ್ತುತಿಕಾರರಿಗೆ, ಭಾಗವಹಿಸಿದ ಎಲ್ಲಾ ಸಹೃದಯರಿಗೆ ನನ್ನ ಅನಂತ ಧನ್ಯವಾದಗಳನ್ನು ಮತ್ತೊಮ್ಮೆ ಹೇಳುತ್ತೇನೆ. ಅಮರವಾಗಲಿ ಸಾಹಿತ್ಯ ದಾಸೋಹ. ಸಾಗುತ್ತಿರಲಿ ಸಾಹಿತ್ಯ ಕೈಂಕರ್ಯ ನಮಸ್ಕಾರ.

*****